ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 11 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 204 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ಮಹಾರಾಣಿ ಕಾಲೇಜಿಗೆ ಮುಕ್ತಿ ನೀಡಿ

ಮುಖ್ಯಮಂತ್ರಿಗೆ ಎಂಎಲ್‌ಸಿ ಮರಿತಿಬ್ಬೇಗೌಡ ಮನವಿ



ಮೈಸೂರು, ನ.10(ಎಸ್‌ಪಿಎನ್)– ಪಾರಂಪರಿಕ ಕಟ್ಟಡವಾದ ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜು ರಸಾಯನಶಾಸ್ತ್ರ ಪ್ರಯೋಗಾಲಯ ಭಾಗದ ಕಟ್ಟಡ ಕುಸಿದು ಬಿದ್ದು 21 ದಿನಗಳಾಗಿದ್ದು, ರಿಪೇರಿಯಾಗುವ ಯಾವುದೇ ಲಕ್ಷಣ ಕಾಣುತ್ತಿಲ್ಲ. ಖುದ್ದು ಭೇಟಿ ನೀಡಿ, ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬುಧವಾರ ಪತ್ರ ಬರೆದಿದ್ದಾರೆ.

ಅ.21ರಂದು ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ಪ್ರಯೋಗಾಲಯ ಭಾಗದ ಕಟ್ಟಡ ಕುಸಿದು ಬಿದ್ದಿದೆ. ಇಲ್ಲಿನ ಪ್ರಾಂಶುಪಾಲರು ಹಾಗೂ ಅಧ್ಯಾಪಕರ ಜಾಗರೂಕತೆಯಿಂದ ಯಾವುದೇ ದುರಂತ ಸಂಭವಿಸಿಲ್ಲ. ಸದರಿ ಕಾಲೇಜಿನಲ್ಲಿ ಸುಮಾರು 3,600 ವಿದ್ಯಾರ್ಥಿನಿಯರು ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ಕಟ್ಟಡವು 107 ವರ್ಷ ಪೂರೈಸಿರುವ ಪಾರಂಪರಿಕ ಕಟ್ಟಡವಾಗಿದ್ದು, ಯಾವಾಗ ಬೀಳುವುದೋ ಎಂಬ ಆತಂಕದಲ್ಲಿ ಪ್ರಾಧ್ಯಾಪಕರು, ವಿದ್ಯಾರ್ಥಿನಿಯರು ದಿನ ಕಳೆಯುತ್ತಿದ್ದಾರೆ.

ಸದರಿ ಕಟ್ಟಡದಲ್ಲಿದ್ದ ಪ್ರಯೋಗಾಲಯದ ಉಪಕರಣಗಳು, ಗ್ರಂಥಾಲಯ ಪುಸ್ತಕಗಳನ್ನು ಪಕ್ಕದಲ್ಲಿದ್ದ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಸ್ನಾತಕೋತ್ತರ ಪದವಿಯ ಹೊಸಕಟ್ಟಡ ಹಾಗೂ ಮಹಾರಾಣಿ ಕಲಾ ಕಾಲೇಜಿನ ಕೆಲವು ಕೊಠಡಿಗಳಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯರಿಗೆ ಪಾಳಿ ವ್ಯವಸ್ಥೆಯಲ್ಲಿ ಬೆಳಗ್ಗೆ 8ರಿಂದ ಸಂಜೆ 6 ಗಂಟೆಯವರೆಗೆ ತರಗತಿಗಳನ್ನು ನಡೆಸಲಾಗುತ್ತಿದ್ದು, ಇದರಿಂದ ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿನಿಯರಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಘಟನೆ ಜರುಗಿ ಸುಮಾರು 21 ದಿನಗಳಾದರೂ ಇದುವರೆಗೂ ಸಂಬಂಧಪಟ್ಟ ಸಚಿವರಾಗಲಿ, ಇಲಾಖೆ ಹಿರಿಯ ಅಧಿಕಾರಿಗಳಾಗಲೀ ಸ್ಥಳಕ್ಕೆ ಭೇಟಿ ನೀಡಿ, ಪಾರಂಪರಿಕ ಕಟ್ಟಡ ಸಂರಕ್ಷಣೆ ಹಾಗೂ ವಿದ್ಯಾರ್ಥಿಗಳ ಮೂಲಭೂತ ಸೌಕರ್ಯಗಳ ಕುರಿತು ಅಧಿಕಾರಿಗಳು ಹಾಗೂ ಜಿಲ್ಲಾ ಪಾರಂಪರಿಕ ಸಮಿತಿ (ಹೆರಿಟೇಜ್ ಸಮಿತಿ) ಸದಸ್ಯರ ಜೊತೆ ಚರ್ಚಿಸಿಲ್ಲ ಎಂದು ತಿಳಿಸಿದ್ದಾರೆ.

ಈ ಮಾದರಿಯಲ್ಲೇ ಮೈಸೂರಿನ ಮಹಾರಾಣಿ ಕಾಲೇಜು ಮಹಿಳಾ ವಿದ್ಯಾರ್ಥಿನಿಲಯ, ಮಹಾರಾಜ ಕಾಲೇಜು ಕಟ್ಟಡ, ಮಹಾರಾಜ ಕಾಲೇಜಿನ ವಿದ್ಯಾರ್ಥಿನಿಲಯ ಹಾಗೂ ವೈದ್ಯಕೀಯ ಮಹಾವಿದ್ಯಾನಿಲಯದ ವಿದ್ಯಾರ್ಥಿ/ನಿಯರ ವಸತಿನಿಲಯದ ಕಟ್ಟಡಗಳು ಹಾಗೂ ಮೈಸೂರು ವಿವಿ ಆವರಣದಲ್ಲಿರುವ ಜಯಲಕ್ಷ್ಮೀ ವಿಲಾಸ (ಜಾನಪದ ವಸ್ತು ಸಂಗ್ರಹಾಲಯ)ಕಟ್ಟಡ ಸಹ ಸಂಪೂರ್ಣವಾಗಿ ಶಿಥಿಲಗೊಂಡು, ಈಗಲೋ–ಆಗಲೋ ಬೀಳುವ ಹಂತ ತಲುಪಿವೆ. ಈ ಕಟ್ಟಡಗಳ ಬಗ್ಗೆ ಸ್ಥಳೀಯ ಪಾರಂಪರಿಕ ಸಮಿತಿಯು ಈಗಾಗಲೇ ಸರ್ಕಾರಕ್ಕೆ ವರದಿ ನೀಡಿದೆ. ಈ ವರದಿಯನ್ನು ಮುಖ್ಯಮಂತ್ರಿಗಳು ಪರಿಶೀಲಿಸುವಂತೆ ಒತ್ತಾಯಿಸಿದ್ದಾರೆ.

ದಲಿತ ಕುಟುಂಬದ ಭೂಮಿ ಕಬಳಿಸಿದ ಆರೋಪ; ದಸಂಸ ಪ್ರತಿಭಟನೆ



ಮೈಸೂರು, ನ.10.(ಪಿಎಂ)– ಮೈಸೂರು ತಾಲೂಕು ಇಲವಾಲ ಗ್ರಾಮದ ದಲಿತ ಕುಟುಂಬವೊಂದರ ಭೂಮಿಯನ್ನು ಸುಳ್ಳು ದಾಖಲೆ ಸೃಷ್ಟಿಸಿ ಅಕ್ರಮವಾಗಿ ಮಾರಾಟ ಮಾಡಲಾಗಿದೆ ಎಂದು ಆರೋಪಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯದಲ್ಲಿ ದಿನೇ ದಿನೆ ದಲಿತರ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಯುತ್ತಿರುವುದಲ್ಲದೆ, ಪರಿಶಿಷ್ಟರ ಜಮೀನುಗಳಿಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕಬಳಿಸುವುದೂ ಹೆಚ್ಚಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಲವಾಲ ಗ್ರಾಮದ ಪರಿಶಿಷ್ಟ ಸಮುದಾಯದ ಚಾಮುಂಡಿ ಬಿನ್ ಮಂಚ ಎಂಬುವವರ ಜಮೀನಿಗೆ ಸಂಬಂಧಿಸಿದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಆರ್‌ಟಿಸಿ ತಿದ್ದುಪಡಿ ಮಾಡಿ ಅಕ್ರಮ ಖಾತೆ ಮಾಡಿಸಿಕೊಂಡು ಕಾನೂನುಬಾಹಿರವಾಗಿ ಮಾರಾಟ ಮಾಡಲಾಗಿದೆ. ಈ ರೀತಿ ಅಕ್ರಮ ನಡೆಸಿದ ಮೇಲ್ವರ್ಗದವರ ವಿರುದ್ಧ ಎಸ್‌ಸಿ–ಎಸ್‌ಟಿ ದೌರ್ಜನ್ಯ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಅಲ್ಲದೆ, ಇವರ ಜೊತೆಗೆ ಶಾಮೀಲಾಗಿ ಇವರಿಂದ ಅಕ್ರಮ ಕ್ರಯ ಪಡೆದು ಜಮೀನನ್ನು ಕಬಳಿಸಿದವ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಈಗಿರುವ ಖಾತೆ ಮತ್ತು ಕ್ರಯಪತ್ರ ವಜಾ ಮಾಡಿ, ಮೂಲ ಖಾತೆದಾರರಿಗೆ ದಾಖಲಾತಿಗಳನ್ನು ವರ್ಗಾವಣೆ ಮಾಡಿ ಸ್ವಾಧೀನಕ್ಕೆ ಕೊಡಬೇಕು ಎಂದು ಆಗ್ರಹಿಸಿದರು. ಸಂಘಟನೆಯ ಜಿಲ್ಲಾ ಪ್ರಧಾನ ಸಂಚಾಲಕ ಬನ್ನಹಳ್ಳಿ ಸೋಮಣ್ಣ, ಪದಾಧಿಕಾರಿಗಳಾದ ದೊಡ್ಡಸಿದ್ದು ಹಾದನೂರು, ಚಾಮರಾಜು ಇಲವಾಲ, ಬಲರಾಮು, ಡಿ.ಮಹೇಶ್, ಬಸವರಾಜು, ಬಿ.ಡಿ.ಎಂ.ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬೇಕರಿ ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಸಂಘ ಅಸ್ತಿತ್ವಕ್ಕೆ



ಮೈಸೂರು,ನ.10(ಎಂಟಿವೈ)–ರಾಜ್ಯಾದ್ಯಂತ ಇರುವ ಬೇಕರಿಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಹಿತಕಾಯುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಬೇಕರಿ ಪದಾರ್ಥ ತಯಾರಿಕಾ ಕಾರ್ಮಿಕರ ಸಂಘವನ್ನು ಅಸ್ತಿತ್ವಕ್ಕೆ ತಂದಿರುವುದಾಗಿ ಸಂಘದ ರಾಜ್ಯಾಧ್ಯಕ್ಷ ಶಿವರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಎಲ್ಲಾ ಜಿಲ್ಲೆಗಳ ಸಾವಿರಾರು ಬೇಕರಿಗಳಲ್ಲಿ ಅಪಾರ ಸಂಖ್ಯೆಯಲ್ಲಿ ನೌಕರರು ಕೆಲಸ ಮಾಡುತ್ತಿದ್ದಾರೆ. ಬಹುತೇಕ ಬೇಕರಿಗಳಲ್ಲಿ ಕೆಲಸ ಮಾಡುವ ನೌಕರರಿಗೆ ಕನಿಷ್ಠ ಸೌಲಭ್ಯವನ್ನೂ ನೀಡುತ್ತಿಲ್ಲ. ಎರಡು ಲಕ್ಷ ಮಂದಿ ಪಿಎಫ್, ಇಎಸ್‌ಐ ಸೇರಿದಂತೆ ಇನ್ನಿತರ ಸೌಲಭ್ಯವಿಲ್ಲದೇ ಕೆಲಸ ಮಾಡುತ್ತಿದ್ದಾರೆ. ನೌಕರರ ಕುಂದುಕೊರತೆ ಆಲಿಸಿ, ಅವರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ನಮ್ಮ ಸಂಘ ಕಾರ್ಯಾಚರಿಸಲಿದೆ. ಬೇಕರಿಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಸರ್ಕಾರ ಅಸಂಘಟಿತ ವಲಯದ ಕಾರ್ಮಿಕರೆಂದು ಗುರುತಿಸಿ ಸೌಲಭ್ಯ ಒದಗಿಸಬೇಕು. ಅದಕ್ಕಾಗಿ ಹೋರಾಟ ನಡೆಸಲು ಆಲೋಚಿಸಲಾಗಿದೆ. ಬೇಕರಿ ನೌಕರರ ಹಿತ ಕಾಯದಿದ್ದರೆ ಮುಂಬರುವ ಚುನಾವಣೆಯಲ್ಲಿ ಯಾರಿಗೆ ಮತ ಹಾಕಬೇಕೆಂಬ ಬಗ್ಗೆ ನಿರ್ಧರಿಸಲಾಗುತ್ತದೆ ಎಂದರು.

ಇದೇ ವೇಳೆ ಬೇಕರಿ ನೌಕರರ ಸಂಘದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಘಟಕಗಳ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಬೇಕರಿ ಕಾರ್ಮಿಕರ ಸಂಘದ ಪದಾಧಿಕಾರಿಗಳಾದ ವಿನೋದ್, ಯಶ್ವಂತ್, ಮಾದೇಶ್, ಆಕಾಶ್, ಪುಟ್ಟಣ್ಣ, ಆನಂದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಚಿಲ್ಡ್ರನ್ಸ್ ಲಿಟರರಿ ಕ್ಲಬ್ ಮೂಲಕ ಮಕ್ಕಳಿಗೆ ನೆರವು

ಮೈಸೂರು, ನ.10(ಎಂಟಿವೈ)–ಮೈಸೂರಲ್ಲಿ ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳ ಸಮಗ್ರ ಬೆಳವಣಿಗೆಗಾಗಿ ಚಿಲ್ಡ್ರನ್ಸ್ ಲಿಟರರಿ ಕ್ಲಬ್ ಸ್ಥಾಪಿಸಲಾಗಿದ್ದು, ಯಾವುದೇ ಶುಲ್ಕ ಪಡೆಯದೇ ಮಕ್ಕಳಿಗೆ ಸೇವೆ ನೀಡುತ್ತಿರುವುದಾಗಿ ಸಂಸ್ಥೆಯ ನಿರ್ದೇಶಕಿಯೂ ಆದ ನಿವೃತ್ತ ಪ್ರಾಧ್ಯಾಪಕಿ ಡಾ.ಆರ್.ಪೂರ್ಣಿಮಾ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1990ರಲ್ಲಿ ನಾನು ಒಬ್ಬಳೆ ಚಿಲ್ಡ್ರನ್ಸ್ ಲಿಟರರಿ ಕ್ಲಬ್ ಸ್ಥಾಪಿಸಿ, ಮಕ್ಕಳಿಗೆ ಮಾರ್ಗದರ್ಶನ ನೀಡುತ್ತಿದೆ. ಸ್ವಂತ ಖರ್ಚಿನಲ್ಲಿ ಮಕ್ಕಳ ಕಲಿಕೆ ಆಸಕ್ತಿಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತಿದೆ. ಮಕ್ಕಳಲ್ಲಿ ವಿವಿಧ ಹಾಗೂ ವೈವಿಧ್ಯ ವಿಷಯಗಳ ಬಗ್ಗೆ ಕಲಿಯುವ ಆಸಕ್ತಿ ಮೂಡಿಸಲಾಗುತ್ತಿದೆ. ನಮ್ಮ ಕ್ಲಬ್‌ನಲ್ಲಿ ತರಬೇತಿ ಪಡೆಯುತ್ತಿರುವ ಎಂಟು ವರ್ಷದ ಬಾಲಕ ಪಿ.ಬಾಲಕೃಷ್ಣ ಎಂಬಾತ ವಿಶ್ವದ ಭೂಪಟ(ಗೋಲ) ನೋಡಿ ಯಾವ ಖಂಡದಲ್ಲಿ ಯಾವ ದೇಶವಿದೆ ಎಂದು ನಿರರ್ಗಳವಾಗಿ ಹೇಳುವ ಸಾಮರ್ಥ್ಯ ಬೆಳೆಸಿಕೊಂಡಿದ್ದಾನೆ. 130 ದೇಶಗಳ ಹೆಸರನ್ನು ಹೇಳುತ್ತಾನೆ. ಚಿಕ್ಕ ವಯಸ್ಸಲ್ಲೇ ಅಗಾಧವಾದ ಗ್ರಹಿಕೆಯ ಶಕ್ತಿ ಆ ಬಾಲಕನಲ್ಲಿದೆ ಎಂದರು. ಇದೇ ವೇಳೆ ಬಾಲಕ ಪಿ.ಬಾಲಕೃಷ್ಣ ಗೋಲದಲ್ಲಿನ ಬಹುತೇಕ ಎಲ್ಲ ರಾಷ್ಟ್ರಗಳನ್ನು ಗುರುತಿಸುವ ಮೂಲಕ ಎಲ್ಲರ ಪ್ರಶಂಸೆಗೆ ಪಾತ್ರನಾದನು.

ಹಿಂದೂ ಪದ ಕುರಿತ ಹೇಳಿಕೆ ವಿಚಾರ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾವನೆ ಸತೀಶ್ ಜಾರಕಿಹೊಳಿ ಬಾಯಿಂದ ವ್ಯಕ್ತಗೊಂಡಿದೆ

ಕಾಂಗ್ರೆಸ್ ಪಕ್ಷದ ಡಿಎನ್‌ಎನಲ್ಲಿಯೇ ಹಿಂದೂ ವಿರೋಧಿತನವಿದೆ; ಸಂಸದ ಪ್ರತಾಪ್ ಸಿಂಹ



ಮೈಸೂರು,ನ.10(ಪಿಎಂ)–ಶಾಸಕ ಸತೀಶ್ ಜಾರಕಿಹೊಳಿ ಅವರ ಹಿಂದೂ ಪದ ಕುರಿತ ಹೇಳಿಕೆ ಸಂಬಂಧ ಪ್ರತಿಕ್ರಿಯಿಸಿ ಸಂಸದ ಪ್ರತಾಪ್ ಸಿಂಹ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾವನೆ ಜಾರಕಿಹೊಳಿ ಬಾಯಿಂದ ವ್ಯಕ್ತವಾಗಿದೆ ಅಷ್ಟೇ. ಕಾಂಗ್ರೆಸ್ ಪಕ್ಷದ ಡಿಎನ್‌ಎಯಲ್ಲಿಯೇ ಹಿಂದೂ ವಿರೋಧಿತನ ಇದೆ ಎಂದು ವಾಗ್ದಾಳಿ ನಡೆಸಿದರು.

ಮೈಸೂರಿನ ರೈಲ್ವೆ ಡಿಆರ್‌ಎಂ ಕಚೇರಿ ಆವರಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹಿಂದೂ ಸನಾತನ ಧರ್ಮದ ಪರವಾಗಿ ಇರುವ ಎಲ್ಲರನ್ನೂ ಕಾಂಗ್ರೆಸ್ ದ್ವೇಷ ಮಾಡುತ್ತಲೇ ಬಂದಿದೆ. ಅದರಲ್ಲಿ ಈ ಸತೀಶ್ ಜಾರಕಿಹೊಳಿ ಹೊಸ ಬಿಜ ಅಷ್ಟೇ. ಸಿದ್ದರಾಮಯ್ಯ ಏನು ಹೇಳುತ್ತಾರೋ ಅದರ ಇನ್ನೊಂದು ರೂಪ ಅಷ್ಟೇ. ಸಿದ್ದರಾಮಯ್ಯ ಅವರ ಭಾವನೆಯೇ ಜಾರಕಿ ಹೊಳಿ ಬಾಯಿಂದ ವ್ಯಕ್ತವಾಗಿದೆ ಅಷ್ಟೇ. ಕಾಂಗ್ರೆಸ್ ಯಾವತ್ತೂ ಹಿಂದೂ ವಿರೋಧಿ ಆಗಿತ್ತು. ಮುಂದಿನ ದಿನಗಳಲ್ಲೂ ಹಿಂದೂ ವಿರೋಧಿಯೇ ಆಗಿರುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಪ್ರಶಂಸನಾರ್ಹ!: ಕಾಂಗ್ರೆಸನೊಳಗಿನ ಇರುವ ಹಿಂದೂ ವಿರೋಧಿ ಧೋರಣೆ ಆಗಾಗ್ಗೆ ಹೊರಬರುತ್ತಲ್ಲೇ ಇದೆ. ಹಾಗಾಗಿ ಅವರನ್ನು ಪ್ರಶಂಸಿಸುತ್ತೇನೆ ಎಂದು ಪ್ರತಾಪ್ ಸಿಂಹ ಹೇಳಿದರು. ರಾಮಸೇತು ವಿಚಾರದಲ್ಲಿ ರಾಮನ ಅಸ್ತಿತ್ವವನ್ನೇ ಪ್ರಶ್ನಿಸಿ ಸುಪ್ರಿಂ ಕೋರ್ಟ್‌ಗೆ ಅಫಿಡವಿಟ್ ಹಾಕುವ ಮೂಲಕ ಮನಮೋಹನ್ ಸಿಂಗ್, ಸೋನಿಯಾ ಗಾಂಧಿ ಕೂಡ ಹಿಂದೂ ವಿರೋಧಿ ಧೋರಣೆ ವ್ಯಕ್ತಪಡಿಸಿದ್ದರು. ಅಂತೆಯೇ ಟಿಪ್ಪು ಜಯಂತಿ ಮಾಡಿ, ಸಾವರ್ಕರ್ ಅವರ ದೂಷಣೆ ಮೂಲಕ ಸಿದ್ದರಾಮಯ್ಯ ಕೂಡ ಹಿಂದೂ ವಿರೋಧಿ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಈಗ ಸತೀಶ್ ಜಾರಕಿಹೊಳಿ ಕೂಡ ಅದೇ ರೀತಿಯಲ್ಲಿ ಹಿಂದೂ ಪದವೇ ಅಶ್ಲೀಲ ಎಂದು ಹೇಳುವ ಮೂಲಕ ತಮ್ಮ ಹಿಂದೂ ವಿರೋಧಿ ಧೋರಣೆ ವ್ಯಕ್ತಪಡಿಸಿದ್ದಾರೆ ಎಂದು ಕಿಡಿಕಾರಿದರು. ಸತೀಶ್ ಜಾರಕಿಹೊಳಿ, ಸಿದ್ದರಾಮಯ್ಯ ಅವರಿಗೆ ಧನ್ಯವಾದ ಹೇಳುತ್ತೇನೆ. ಏಕೆಂದರೆ ಅವರು ತಮ್ಮ ಮನಸಿನೊಳಗೆ ಇರುವುದನ್ನು ಮುಚ್ಚಿಟ್ಟುಕೊಳ್ಳದೇ ಹೇಳುತ್ತಿದ್ದಾರೆ. ನಿಮ್ಮ ಹಿಂದೂ ವಿರೋಧಿ ಧೋರಣೆ ವ್ಯಕ್ತಪಡಿಸುತ್ತಿರುವುದಕ್ಕೆ ತಮಗೆ ಧನ್ಯವಾದ ಎಂದು ವ್ಯಂಗ್ಯವಾಡಿದರು.

> **“ಕಾಂಗ್ರೆಸ್ ಈಗ ಮಾತ್ರವಲ್ಲ, ಸ್ವಾತಂತ್ರ್ಯದ ಸಂದರ್ಭದಿಂದಲೂ ಹಿಂದೂಗಳ ಭಾವನೆಗೆ ಬೆಲೆ ಕೊಟ್ಟಿಲ್ಲ. ಆ ಪಕ್ಷದ ಡಿಎನ್‌ಎ ಅಲ್ಲಿಯೇ ಹಿಂದೂ ವಿರೋಧಿತನವಿದೆ. ಡಾ.ಅಂಬೇಡ್ಕರ್ ಅವರು 'ಥಾಟ್ಸ್ ಆನ್ ಪಾಕಿಸ್ತಾನ್' ಪುಸ್ತಕದಲ್ಲಿ ಹಿಂದೂಗಳು ಮತ್ತು ಮುಸಲ್ಮಾನರು ಒಟ್ಟಿಗೆ ಬದಕಲು ಸಾಧ್ಯವಿಲ್ಲ. ಅವರಲ್ಲಿ ಕೇವಲ ಮುಸಲ್ಮಾನರ ಭ್ರಾತೃತ್ವ ಇದೆ. ಹಾಗಾಗಿ ಹಿಂದೂ ಮತ್ತು ಮುಸಲ್ಮಾನರು ಒಟ್ಟಿಗೆ ಬದಕಲು ಸಾಧ್ಯವಿಲ್ಲ. ದೇಶವನ್ನು ಇಭ್ಭಾಗ ಮಾಡುವುದಾದರೆ ಮುಸಲ್ಮಾನರನ್ನು ಪಾಕಿಸ್ತಾನಕ್ಕೆ ಕಳುಹಿಸಿ, ಹಿಂದೂಗಳನ್ನು ಭಾರತದಲ್ಲಿ ಉಳಿಸಿಕೊಳ್ಳಿ ಎಂದು ಹೇಳಿದ್ದಾರೆ.**
> **–ಪ್ರತಾಪ್ ಸಿಂಹ, ಸಂಸದ**

ಕರ್ನಾಟಕದ ಜನ ಅರ್ಥ ಮಾಡಿಕೊಳ್ಳಬೇಕು: ಮತ್ತೊಂದು ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಅವಕಾಶ ನೀಡಿದರೆ ತಾಲಿಬಾನಿ ಸರ್ಕಾರ ಬರುತ್ತದೆ. ಅದು ಮುಸಲ್ಮಾನರ ಸರ್ಕಾರವಾಗಿರುತ್ತದೆಯೇ ಹೊರತು ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಜಾತ್ಯಾತೀತ ಸರ್ಕಾರ ಆಗಿರೋಲ್ಲ ಎಂಬುದನ್ನು ಕರ್ನಾಟಕದ ಜನ ಅರ್ಥ ಮಾಡಿಕೊಳ್ಳಬೇಕು ಎಂದರು.

ದೇಶ ವಿಭಜನೆ ವೇಳೆ ಜನಸಂಖ್ಯೆ ವಿನಿಮಯ ಆಗಬೇಕೆಂದು ಅಂಬೇಡ್ಕರ್ ಹೇಳಿದ್ದರು. ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಯಾವ ರೀತಿ ನಡೆಸಿಕೊಂಡಿತೆಂದರೆ, ಅವರು ಮನನೊಂದು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುವಂತಹ ಪರಿಸ್ಥಿತಿ ತಂದರು. ಮೊದಲ ಲೋಕಸಭಾ ಚುನಾವಣೆಯಲ್ಲಿ ಅಂಬೇಡ್ಕರ್ ಅವರ ವಿರುದ್ಧ ಅಭ್ಯರ್ಥಿ ಕಣಕ್ಕಿಳಿಸಿ ಸೋಲುವಂತೆ ಮಾಡಿದರು. ಉಪಚುನಾವಣೆಯಲ್ಲೂ ಕೂಡ ಅಂಬೇಡ್ಕರ್ ವಿರುದ್ಧ ಅವರ ಕಾರ್ಯದರ್ಶಿಯನ್ನೇ ಕಣಕ್ಕಿಳಿಸಿದರು ಎಂದರು. ಅಂಬೇಡ್ಕರ್ ಬದುಕಿದ್ದಾಗ ಅವರಿಗೆ ಭಾರತ ರತ್ನ ಪುರಸ್ಕಾರ ಸಹ ನೀಡಲಿಲ್ಲ. ಅಂಬೇಡ್ಕರ್ ಅವರು ಜನಸಂಖ್ಯೆ ವಿನಿಮಯ ಪ್ರತಿಪಾದಿಸಿ, ಹಿಂದೂಗಳಿಗೆ ಪ್ರತ್ಯೇಕ ರಾಷ್ಟ್ರ ಬೇಕೆಂದು ಹೇಳಿದ ಕಾರಣಕ್ಕೆ ಅವರನ್ನು ದ್ವೇಷ ಮಾಡುತ್ತಾ ಬಂದರು. ಅದೇ ರೀತಿ ಮುಸಲ್ಮಾನರು ಯಾವತ್ತು ಹಿಂದೂಗಳೊಂದಿಗೆ ಸಾಮರಸ್ಯದಿಂದ ಬದುಕುವುದಿಲ್ಲ ಎಂದು ಮನವರಿಕೆಯಾದ ನಂತರ ಸಾರ್ವಕರ್ ಅವರು ಹಿಂದೂ ರಾಷ್ಟ್ರದ ಕಲ್ಪನೆ ಕೊಟ್ಟರು. ಅವರನ್ನು ಆ ಕ್ಷಣದಿಂದ ಕಾಂಗ್ರೆಸ್ಸಿಗರು ದ್ವೇಷ ಮಾಡುತ್ತಿದ್ದು, ಕರ್ನಾಟಕದಲ್ಲೂ ಸಿದ್ದರಾಮಯ್ಯಯಾದಿಯಾಗಿ ಸಾರ್ವಕರ್ ಅವರನ್ನು ದೂಷಣೆ ಮಾಡುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜಕೀಯವಾಗಿ ಇನ್ನೂ ಯಾವ ನಿರ್ಧಾರಕ್ಕೆ ಬಂದಿಲ್ಲ

● ಸಂದೇಶ್ ದಿ ಪ್ರಿನ್ಸ್‌ನಲ್ಲಿ ಕೇಕ್ ಮಿಕ್ಸಿಂಗ್ ● ಖ್ಯಾತ ನಟ–ನಿರ್ದೇಶಕ ಪ್ರಭುದೇವ ಸಾಥ್



ಮೈಸೂರು, ನ.10(ಜಿಎ)– ರಾಜಕೀಯ ವಿಚಾರವಾಗಿ ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ತಿಳಿಸಿದರು.

ನಗರದ ನಜರ್‌ಬಾದ್ ಮುಖ್ಯ ರಸ್ತೆಯಲ್ಲಿರುವ ಸಂದೇಶ್ ನಾಗರಾಜ್ ಅವರ ಒಡೆತನದ ಸಂದೇಶ ದಿ ಪ್ರಿನ್ಸ್ ಹೊಟೇಲ್‌ನಲ್ಲಿ ಆಯೋಜಿಸಿದ್ದ ಕ್ರಿಸ್‌ಮಸ್ ಕೇಕ್ ಮಿಕ್ಸಿಂಗ್‌ನಲ್ಲಿ ನಟ ಪ್ರಭುದೇವ ಅವರೊಟ್ಟಿಗೆ ಕೇಕ್ ಮಿಕ್ಸಿಂಗ್‌ನಲ್ಲಿ ಅವರು ಭಾಗವಹಿಸಿದ್ದರು. ನಂತರ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ಕೇಕ್ ಮಿಕ್ಸಿಂಗ್ ಮಾಡಿಕೊಂಡು ಬಂದಿದ್ದು, ಪ್ರತಿ ಬಾರಿ ಅಂಬರೀಶ್ ಬರುತ್ತಿದ್ದರು. ಅವರ ನಂತರ ಅನೇಕ ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಇಂದು ಖ್ಯಾತ ನಟ ಪ್ರಭುದೇವ ಅವರು ಬಂದಿದ್ದಾರೆ. ಎಂದರು.

ನಮ್ಮ ಬ್ಯಾನರ್ ಅಡಿ 'ವುಲ್ಫ್' ಪ್ಯಾನ್ ಇಂಡಿಯಾ ಚಿತ್ರ ನಿರ್ಮಾಣವಾಗುತ್ತಿದ್ದು, ಅದರಲ್ಲಿ ಖ್ಯಾತ ನಟ ಪ್ರಭುದೇವ ನಟಿಸಿ, ನಿರ್ದೇಶನ ಮಾಡುತ್ತಿದ್ದಾರೆ. ಬೆಂಗಳೂರು, ತಮಿಳುನಾಡು ಮತ್ತು ಪಾಂಡಿಚೇರಿಯಲ್ಲಿ ಅದರ ಚಿತ್ರೀಕರಣ ನಡೆಯುತ್ತಿದೆ. ಎಲ್ಲವೂ ಲೆಕ್ಕಾಚಾರದಂತೆ ನಡೆದರೆ, ಫೆಬ್ರವರಿ ಅಂತ್ಯದೊಳಗೆ ಬಿಡುಗಡೆಯಾಗಲಿದೆ. ಮತ್ತೊಂದು, ನಟ ಶಿವರಾಜ್ ಕುಮಾರ್ ಅವರೊಟ್ಟಿಗೆ 'ಘೋಸ್ಟ್' ಚಿತ್ರ ಈಗಾಗಲೇ 30 ದಿನಗಳ ಮೊದಲ ಶೆಡ್ಯೂಲ್ ಮುಗಿದಿದೆ. ಮುಂದಿನ ಹಂತದ ಚಿತ್ರೀಕರಣ ಮೈಸೂರಿನಲ್ಲಿ ಆರಂಭವಾಗಲಿದೆ ಎಂದರು. ರಾಜಕೀಯ ವಿಚಾರವಾಗಿ ಮಾತಿಗಿಳಿದ ಅವರು, ನಿರ್ಧಾರಕ್ಕೆ ಬಂದಿಲ್ಲ. ಹಿರಿಯರು, ಹಿತೈಷಿಗಳ ಜೊತೆ ಚರ್ಚಿಸಿ ನಂತರ ನಿರ್ಧಾರ ಮಾಡುತ್ತೇನೆ ಎಂದರು.

ಈ ವೇಳೆ ನಟ ಪ್ರಭುದೇವ, ನಿರ್ಮಾಪಕ ಎನ್.ಸಂದೇಶ್, ಮಂಜೇಶ್ ಹಾಗೂ ಹೊಟೇಲ್ ಸಿಬ್ಬಂದಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯರ ಜೀವನ ಕುರಿತ ಜೀವನ ಚರಿತ್ರೆ

'ಸಿದ್ದರಾಮಯ್ಯ–75' ನ.15ಕ್ಕೆ ಬಿಡುಗಡೆ



ಮೈಸೂರು,ನ.10(ಎಂಟಿವೈ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೀವನ ಕುರಿತು ಬರೆದಿರುವ 'ಸಿದ್ದರಾಮಯ್ಯ–75' ಕೃತಿ ಬಿಡುಗಡೆ ಸಮಾರಂಭವನ್ನು ನ.15ರಂದು ಸಂಜೆ 5.30ಕ್ಕೆ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಲೇಖಕ ಡಾ.ಹರೀಶ್ ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಂಡ ಧೀಮಂತ ನಾಯಕರಲ್ಲಿ ಸಿದ್ದರಾಮಯ್ಯ ಓರ್ವರು. ಹಿಂದುಳಿದ ವರ್ಗಗಳ ಆಶಾಕಿರಣ ಎನಿಸಿರುವ ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿಯಾಗಿ ದಕ್ಷ ಆಡಳಿತ ನಡೆಸಿದರು. ಆಡಳಿತದ ವೇಳೆ ಶೋಷಿತ ಸಮುದಾಯಕ್ಕೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವ ಪ್ರಯತ್ನ ಮಾಡಿದರು. ಹಲವು ಜನಪ್ರಿಯ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಸಮಾಜದ ಎಲ್ಲಾ ವರ್ಗದ ಜನರಿಗೆ ನೆರವಾದರು. ಗ್ರಾಮೀಣ ಸೊಗಡಿನ ವರ್ಣರಂಜಿತ ರಾಜಕಾರಣಿಯಾಗಿರುವ ಸಿದ್ದರಾಮಯ್ಯ ಅವರ ಜೀವನ, ಸಿದ್ಧಾಂತ, ಸಾಧನೆ ಸೇರಿದಂತೆ ಅವರ ಹೋರಾಟದ ಬದುಕಿನ ಮಹತ್ತರ ಅಂಶಗಳನ್ನು ಒಳಗೊಂಡಂತೆ 'ಸಿದ್ದರಾಮಯ್ಯ–75' ಕೃತಿ ರಚಿಸಲಾಗಿದೆ ಎಂದು ವಿವರಿಸಿದರು.

ವಿಚಾರವಾದಿ ಬಳಗದ ವತಿಯಿಂದ ನ.15ರಂದು ಸಂಜೆ 4.30ಕ್ಕೆ ರಮಾಗೋವಿಂದ ರಂಗಮಂದಿರದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಮಾಜವಾದಿ ಪ.ಮಲ್ಲೇಶ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮಕುಮಾರ್ ಕೃತಿ ಬಿಡುಗಡೆ ಮಾಡಲಿದ್ದಾರೆ. ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ದಿನೇಶ್ ಅಮಿನ್‌ಮಟ್ಟು, ಲೇಖಕ ಡಾ.ಹರೀಶ್‌ಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಸಿದ್ದರಾಮಯ್ಯ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ಪ್ರಕಾಶ್, ಮುಖಂಡರಾದ ಮರಡೀಪುರ ರವಿಕುಮಾರ್ ಇನ್ನಿತರರಿದ್ದರು.

ಪಿಹೆಚ್.ಡಿ



ಮೈಸೂರು,ನ.10– ಡಾ.ಕೆ.ಎನ್.ಪ್ರಕಾಶ್ ನರಸಿಂಹ ಮಾರ್ಗ ದರ್ಶನದಲ್ಲಿ ಪಿ.ಮಹಂತೇಶ ಭೂ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಪುನೀತ್ ಸ್ಮರಣಾರ್ಥ ಪ್ರಬಂಧ ಸ್ಪರ್ಧೆ



ಮೈಸೂರು,ನ.10(ಎಂಟಿವೈ)– ಮೈಸೂರಿನ ರಾಜೇಂದ್ರನಗರದಲ್ಲಿರುವ ಕಾಲಭೈರವೇಶ್ವರ ವಿದ್ಯಾಸಂಸ್ಥೆಯಲ್ಲಿ ನ.13ರಂದು ಬೆಳಗ್ಗೆ 11 ಗಂಟೆಯಿಂದ ಕನ್ನಡ ರಾಜ್ಯೋತ್ಸವ ಹಾಗೂ ನಟ ಡಾ. ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಮಕ್ಕಳಿಗೆ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸೇವಾ ಚಿಲುಮೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜೇಂದ್ರನಗರದ ಸೇವಾ ಚಿಲುಮೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿರುವ ರಾಜ್ಯೋತ್ಸವದ ಪ್ರಬಂಧ ಸ್ಪರ್ಧೆಯಲ್ಲಿ 9ರಿಂದ 16 ವರ್ಷದವರೆಗಿನ ಮಕ್ಕಳು ಪಾಲ್ಗೊಳ್ಳಬಹುದಾಗಿದೆ. ಪ್ರವೇಶ ಉಚಿತವಾಗಿದ್ದು ಕನ್ನಡದಲ್ಲಿಯೇ ಬರೆಯಬೇಕು. ಮಕ್ಕಳಲ್ಲಿ ಸ್ಪರ್ಧಾ ಚಟುವಟಿಕೆ ವೃದ್ಧಿಸಿ ಕನ್ನಡ ಹಾಗೂ ಕರ್ನಾಟಕದ ಬಗ್ಗೆ ಅಭಿಮಾನ ಮೂಡಿಸಲು ಈ ಸ್ಪರ್ಧೆ ಆಯೋಜಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸೇವಾ ಚಿಲುಮೆ ಚಾರಿಟಬಲ್ ಟ್ರಸ್ಟ್ ಸದಸ್ಯರಾದ ರೋಹಿತ್, ಮೋಹನ್, ಅಶು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.11.2022 ಶುಕ್ರವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ತೃತೀಯ, ನಕ್ಷತ್ರ : ಮೃಗಶಿರ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಪೀಡಿತರಿಗೆ ಚಿಕಿತ್ಸೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಲಲಿತ ಮಹಲ್ ಹೆಲಿಪ್ಯಾಡ್ ಬಳಿ, ಆಲನಹಳ್ಳಿ, ಬೆಳಗ್ಗೆಯಿಂದ.

■ **ಎಂಎಸ್‌ವಿಎಸ್ ಗುರುಕುಲ ಪಿಯು ಕಾಲೇಜು :** ಕನಕದಾಸ ಜಯಂತಿ, ಕನ್ನಡ ರಾಜ್ಯೋತ್ಸವ ಹಾಗೂ ಸಾಂಸ್ಕೃತಿಕ ಉತ್ಸವ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್.ಸಿ. ನಾಗರಾಜು, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಂಶುಪಾಲರಾದ ಪ್ರೊ. ಎಸ್. ಮಲ್ಲಣ್ಣ, ಉಪಸ್ಥಿತರು : ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿಯ ಪ್ರೊ. ಜಿ. ತಿಮ್ಮಪ್ಪ, ಪ್ರಾಧ್ಯಾಪಕ ಡಾ. ಬಿ. ಅಪ್ಪಾಜಿಗೌಡ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 8.30ಕ್ಕೆ

■ **ರೋಟರಿ ಕ್ಲಬ್ ಮೈಸೂರು ಪಶ್ಚಿಮ :** ರಿಫ್ಲೆಕ್ಸೊಲೊಜಿ, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಶನ್ ತೆರಪಿ ಚಿಕಿತ್ಸಾ ಶಿಬಿರ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9 ರಿಂದ.

■ **ಮೈಸೂರು ತಾಲೂಕು ಕುರುಬರ ಸಂಘ :** ಕನಕದಾಸರ ಜಯಂತಿ ಪ್ರಯುಕ್ತ ಸಾಧಕರಿಗೆ ಸನ್ಮಾನ, ಸ್ಥಳ: ಕಲಾಮಂದಿರ, ಬೆಳಗ್ಗೆ 9ಕ್ಕೆ.

■ **ಸಂತ ಶ್ರೀ ಕನಕದಾಸ ಜಯಂತ್ಯೋತ್ಸವ ಸಮಿತಿ :** ಬೆಳಗ್ಗೆ 9.30ಕ್ಕೆ ಶ್ರೀ ಭಕ್ತ ಕನಕದಾಸರ 535ನೇ ಜಯಂತ್ಯೋತ್ಸವದ ಅಂಗವಾಗಿ ಅರಮನೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಶ್ರೀ ಭಕ್ತ ಕನಕದಾಸರ ಪ್ರತಿಮೆ ಮೆರವಣಿಗೆ, ಸಾನ್ನಿಧ್ಯ : ಶ್ರೀ ಶಿವಾನಂದಪುರಿ ಸ್ವಾಮೀಜಿ, ಉದ್ಘಾಟನೆ : ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು : ಮೇಯರ್ ಶಿವಕುಮಾರ್, ಮಧ್ಯಾಹ್ನ 12.30ಕ್ಕೆ ಕಲಾಮಂದಿರದಲ್ಲಿ ಸಭಾ ಕಾರ್ಯಕ್ರಮ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ಕನಕದಾಸರ ಜಯಂತ್ಯೋತ್ಸವ, ಉಪಸ್ಥಿತರು : ಮೇಯರ್ ಶಿವಕುಮಾರ್, ಪೊಲೀಸ್ ಉಪ ಆಯುಕ್ತೆ ಗೀತಾ ಪ್ರಸನ್ನ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪೊಲೀಸ್ ಉಪ ಅಧೀಕ್ಷಕ ಪೂರ್ಣಚಂದ್ರ ತೇಜಸ್ವಿ, ಸಹಾಯಕ ಪೊಲೀಸ್ ಆಯುಕ್ತ ಎಸ್.ಇ. ಗಂಗಾಧರಸ್ವಾಮಿ, ಮುಖ್ಯ ಅತಿಥಿಗಳು : ಪ್ರಾಚ್ಯ ವಿದ್ಯಾ ಸಂಶೋಧನಾಲಯ ವಿಶ್ರಾಂತ ನಿರ್ದೇಶಕ ಪ್ರೊ. ಎಸ್. ಶಿವರಾಜಪ್ಪ, ಸಮಾಜ ಸೇವಕ ಕೆ. ಹರೀಶ್‌ಗೌಡ, ಪಾಲಿಕೆ ಸದಸ್ಯ ಗೋಪಿ, ವಿವಿ ಸಂಜೆ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಬಿ.ಎನ್. ಯಶೋಧ, ಡಾ. ಹೆಚ್.ಸಿ. ದೇವರಾಜೇಗೌಡ, ವಕೀಲ ಉಮೇಶ್, ಸ್ಥಳ: ವಿವಿ ಸಂಜೆ ಕಾಲೇಜು ಮುಂಭಾಗ, ಬೆಳಗ್ಗೆ 10ಕ್ಕೆ.

■ **ಆಶಾ ಕಿಸಾನ್ ಸ್ವರಾಜ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ :** ಕಿಸಾನ್ ಸ್ವರಾಜ್ ಸಮ್ಮೇಳನ, ಉದ್ಘಾಟನೆ : ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಮುಕ್ತ ವಿವಿ ಘಟಿಕೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಭಾರತ ವಿದ್ಯಾರ್ಥಿ ಫೆಡರೇಷನ್ :** 11ನೇ ಮೈಸೂರು ಜಿಲ್ಲಾ ಸಮ್ಮೇಳನ, ಉದ್ಘಾಟನೆ : ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ), ಮುಖ್ಯ ಅತಿಥಿಗಳು : ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಾಸುದೇವ ರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಅಧ್ಯಕ್ಷತೆ : ಎಸ್‌ಎಫ್‌ಐ ಜಿಲ್ಲಾ ಸಂಚಾಲಕ ಟಿ.ಎಸ್. ವಿಜಯ್ ಕುಮಾರ್, ಸ್ಥಳ: ಬುದ್ಧ ವಿಹಾರ, ಬಲ್ಲಾಳ್ ಸರ್ಕಲ್, ಮಧ್ಯಾಹ್ನ 12ಕ್ಕೆ.

■ **ಶ್ರೀ ಗುರುಕಲಾ ಶಾಲೆ :** ಗಿರಿಜಾ ಕಲ್ಯಾಣ ನೃತ್ಯರೂಪಕ ಮತ್ತು ಡಾ. ಹೆಚ್.ಎಸ್. ರುದ್ರೇಶ್ ವಿರಚಿತ ನಾಟಕ ತಪಸ್ವಿನಿ, ಅಧ್ಯಕ್ಷತೆ : ಶ್ರೀ ಗುರುಕಲಾ ಶಾಲೆ ಅಧ್ಯಕ್ಷ ಎನ್. ಧನಂಜಯ, ಉದ್ಘಾಟನೆ : ಸಮಾಜ ಸೇವಕ ಜೆ. ಜಯಂತ್, ಉಪಸ್ಥಿತರು : ಹಿರಿಯ ರಂಗಕರ್ಮಿ ನಾ. ನಾಗಚಂದ್ರ, ಡಾ. ಹೆಚ್.ಎಸ್. ರುದ್ರೇಶ್, ಸ್ಥಳ:ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 4ಕ್ಕೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಬೆಳಗ್ಗೆ 7 ಗಂಟೆಗೆ ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿಗೆ ತೈಲಾಭಿಷೇಕ ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಸಂಜೆ 7 ಗಂಟೆಗೆ ಶಿವದೀಪೋತ್ಸವ, ಸ್ಥಳ: ದೇವಸ್ಥಾನದ ಆವರಣ, ಕೆ.ಆರ್. ಮೊಹಲ್ಲಾ.

■ **ವ್ಯವಸ್ಥಾಪಕರು :** ಮಾತು..ಕಥೆ..ಗಾಯನ..ಯಾನ..., ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ನಿಂಗರಾಜು ಅವರಿಗೆ ಗೌರವ ಸಮರ್ಪಣೆ, ಉಪಸ್ಥಿತರು : ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ ನಿರ್ದೇಶಕ ಪ್ರೊ. ನಂಜಯ್ಯ ಹೊಂಗನೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ವಿಜಯಲಕ್ಷ್ಮಿ ಕರಿಕಲ್, ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶಕ ಪ್ರೊ. ಬಿ.ಎಸ್. ಚಂದ್ರಶೇಖರ್, ಯುವರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಯಶೋಧ, ಸಾಮಾಜಿಕ ಚಿಂತಕ ಪುರುಷೋತ್ತಮ್, ನಿವೃತ್ತ ಪ್ರಾಂಶುಪಾಲರಾದ ಪ್ರೊ. ರಾಮಸ್ವಾಮಿ, ಪ್ರೊ. ರುದ್ರಯ್ಯ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಸುರಭಿ ಗಾನಕಲಾ ಮಂದಿರ ಚಾರಿಟಬಲ್ ಟ್ರಸ್ಟ್ :** ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಬಿರ, ಸ್ಥಳ: 510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30ರಿಂದ.

■ **ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು :** ವಾರ್ಷಿಕ ವಿಶೇಷ ಶಿಬಿರ, ಅಧ್ಯಕ್ಷತೆ : ಲಯನ್ಸ್ ಕ್ಲಬ್ ಆಫ್ ಮೈಸೂರು ಅಧ್ಯಕ್ಷೆ ಶ್ರೀಮತಿ ಲಯನ್ ಪ್ರತಿಮಾ ಕೃಷ್ಣ, ಸ್ಥಳ: ಶ್ರೀ ಗಣೇಶಪುರಿ ನಿತ್ಯಾನಂದ ಆಶ್ರಮ, ಚಾಮುಂಡಿಬೆಟ್ಟದ ಪಾದ, ಮಧ್ಯಾಹ್ನ 4.30ಕ್ಕೆ.

■ **ನೈಪುಣ್ಯ ಸ್ಕೂಲ್ ಆಫ್ ಎಕ್ಸ್‌ಲೆನ್ಸಿ :** ನೈಪುಣ್ಯ ದಸರಾ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಮೊದಲನೇ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಬೆಂಗಳೂರಿನ ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್ ಅಧ್ಯಕ್ಷ ಡಾ. ಗುರುರಾಜ್ ಕರಜಾಜಿ, ಗೌರವ ಅತಿಥಿಗಳು : ಡಾ. ಆರ್. ಬಾಲಸುಬ್ರಮಣಿಯಮ್, ಅಧ್ಯಕ್ಷತೆ : ನೈಪುಣ್ಯ ಸ್ಕೂಲ್ ಆಫ್ ಎಕ್ಸ್‌ಲೆನ್ಸಿ ಅಧ್ಯಕ್ಷ ಆರ್. ರಘು, ಸ್ಥಳ: ಬಂಟರ ಕನ್ವೆನ್ಷನ್ ಹಾಲ್, ವಿಜಯನಗರ 3ನೇ ಹಂತ, ಸಂಜೆ 4.30ಕ್ಕೆ.

■ **ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ಧಮನಿ–22, ಅಧ್ಯಕ್ಷತೆ : ಎಂಎಂಸಿ ಮತ್ತು ಆರ್‌ಐ ಡೀನ್ ಡಾ. ಕೆ.ಆರ್. ದಾಕ್ಷಾಯಣಿ, ಮುಖ್ಯ ಅತಿಥಿಗಳು : ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಿರ್ದೇಶಕ ಟಿ.ಎಸ್. ನಾಗಾಭರಣ, ಅತಿಥಿಗಳು : ಡಾ. ಬಿ.ಎಲ್. ನಂಜುಂಡಸ್ವಾಮಿ, ಡಾ. ರಾಜೇಂದ್ರ, ಡಾ. ಪ್ರಶಾಂತ್, ಸ್ಥಳ: ಅಮೃತ ಮಹೋತ್ಸವ ಭವನ, ಜೆ.ಕೆ. ಮೈದಾನ, ಸಂಜೆ 5.30ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40ಅರಿವಿನ ಶಿಖರ, ಗಾಯನ–ಸಿ. ವಿಶ್ವನಾಥ್, ಬಿ. ಶ್ರೀರಾಂ ಭಟ್, ವ್ಯಾಖ್ಯಾನ– ಡಾ. ಪ್ರದೀಪ್ ಕುಮಾರ್ ಹೆಬ್ರಿ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.00 ಕನ್ನಡ ಕಜ್ಜಾಯ, 9.30 ಗಾಂಧೀ ಸ್ಮೃತಿ, 10.00 ಪಿ. ಗುರುಪ್ರಸಾದ್– ಸ್ಯಾಕ್ಸೋಫೋನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ–ವೃಂದಗಾನ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಗಾನ ರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ ಸಾಹಿತ್ಯ ಮತ್ತು ನಿರೂಪಣೆ– ಪ್ರೊ. ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ–ಸಖೀ ಪದ, ಪ್ರಸ್ತುತಿ– ಎಂ.ಎಸ್. ಭಾರತಿ, ಕೈಗನ್ನಡಿ, ಪ್ರಸ್ತುತಿ– ನಿಶಿತಾ ಕೃಷ್ಣಸ್ವಾಮಿ, 4.30 ವೃತ್ತಿ ಮಾಗದರ್ಶನ– ಆರ್ಕಿಯಾಲಜಿ ಮತ್ತು ಮ್ಯೂಸಿಯಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಸಿ.ಎ. ಲೋಕೇಶ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ– ತೋಟಗಾರಿಕೆ ಬೆಳೆಗಳ ನಿರ್ವಹಣೆಯಲ್ಲಿನ ಅನುಭವ ಕುರಿತು ಎ.ಹೆಚ್. ಮಹದೇವ ನಾಯಕ್ ಅವರೊಡನೆ ಸಂದರ್ಶನ, 7.45 ಮತದಾತಾ ಜಂಕ್ಷನ್–ಭಾರತ ಚುನಾವಣಾ ಅಯೋಗದ ಪ್ರಾಯೋಜಿತ ಕಾರ್ಯಕ್ರಮ, 9.00 ಕನ್ನಡ ಭಾರತಿ–ಕರ್ನಾಟಕ ಸಂಗೀತ ಮತ್ತು ಕನ್ನಡ–ಸೋದಾಹರಣ, ಭಾಗವಹಿಸುವವರು–ಸಂಗೀತಗಾರ ಮಾನಸ ನಯನ, ಪ್ರಸ್ತುತಿ– ದಿವಾಕರ ಹೆಗಡೆ, 10.00 ರಂಗಗೀತೆಗಳು–ಶಿವ ಜಲಂಧರ ನಾಟಕದ ಹಾಡು, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 11 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 204 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಇಂದು ಕನಕದಾಸರ ಜಯಂತಿ

ಮೈಸೂರು: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹಾಗೂ ಶ್ರೀ ಕನಕದಾಸ ಜಯಂತೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ನಾಳೆ (ನ.11) ಬೆಳಗ್ಗೆ 9.30ಕ್ಕೆ ಮೈಸೂರಿನ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 12:30 ಗಂಟೆಗೆ ಕರ್ನಾಟಕದ ಕಲಾಮಂದಿರದಲ್ಲಿ ಕನಕದಾಸ ಜಯಂತಿಯ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ▶ 6ನೇ ಪುಟಕ್ಕೆ

ಬೆಂಗಳೂರಲ್ಲಿ ಇಂದು ಮೋದಿ ಹವಾ

- ಕನಕದಾಸರು, ವಾಲ್ಮೀಕಿಯವರ ಪ್ರತಿಮೆಗೆ ಪುಷ್ಪ ನಮನ
- ಮೈಸೂರು–ಬೆಂಗಳೂರು–ಚೆನ್ನೈ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ
- ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ಉದ್ಘಾಟನೆ
- ನಾಡಪ್ರಭು ಕೆಂಪೇಗೌಡರ 'ಪ್ರಗತಿ ಪ್ರತಿಮೆ' ಅನಾವರಣ
- ನಂತರ ಸಾರ್ವಜನಿಕ ಸಭೆ ಉದ್ದೇಶಿಸಿ ಭಾಷಣ







ಬೆಂಗಳೂರು, ನ.10(ಕೆಎಂಶಿ)– ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಪ್ರಗತಿಯ ಪ್ರತಿಮೆ, ಮೈಸೂರು–ಚೆನ್ನೈ ನಡುವೆ ವಂದೇ ಭಾರತ್ ರೈಲಿಗೆ ಹಸಿರು ನಿಶಾನೆ ತೋರುವುದು ಸೇರಿದಂತೆ ರಾಜ್ಯ ಹಾಗೂ ಕೇಂದ್ರದ ಯೋಜನೆಗಳಿಗೆ ಚಾಲನೆ ನೀಡಲು ಪ್ರಧಾನಿ ನರೇಂದ್ರ ಮೋದಿ ನಾಳೆ(ನ.11) ಒಂದು ದಿನದ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ನಾಡಪ್ರಭುಗಳ ಹೆಸರಿನಲ್ಲಿರುವ ವಿಮಾನ ನಿಲ್ದಾಣದಲ್ಲಿ 108ಅಡಿ ಎತ್ತರದ ಪ್ರಗತಿ ಪ್ರತಿಮೆಯನ್ನು ಅಭಿವೃದ್ಧಿಗೆ ಪ್ರೇರಣೆಯಾಗುವ ದೃಷ್ಟಿಯಿಂದ ನಿರ್ಮಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಅವರು ಇಂದು ಕೆಂಪೇಗೌಡರ ಕಂಚಿನ ಪ್ರತಿಮೆ ಲೋಕಾರ್ಪಣೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಸಾರ್ವಜನಿಕ ಸಭಾ ವೇದಿಕೆ ಕಾರ್ಯಕ್ರಮದ ಸಿದ್ಧತೆ ಮತ್ತು ವ್ಯವಸ್ಥೆಗಳ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರಿಗೆ ತಿಳಿಸಿದರು. ಕೆಂಪೇಗೌಡರ ಪ್ರಗತಿ ಪ್ರತಿಮೆಯನ್ನು ನಿರ್ಮಿಸಿದವರು ರಾಮ್‌ಸುತಾರಾ. ಇಡೀ ಭಾರತದಲ್ಲಿ ಅತ್ಯಂತ ಶ್ರೇಷ್ಠ ಶಿಲ್ಪಿ. ಅಹಮದಾಬಾದ್‌ನಲ್ಲಿರುವ ವಲ್ಲಭಭಾಯಿ ಪಟೇಲ್ ಅವರ ಐಕ್ಯತಾ ಮೂರ್ತಿಯನ್ನೂ ಹಾಗೂ ಅಂಬೇಡ್ಕರ್ ಅವರ ಅತೀ ಎತ್ತರದ ಮೂರ್ತಿಯನ್ನು ನಿರ್ಮಿಸಿದ ಖ್ಯಾತಿ ಅವರದ್ದು. ನಾಳೆ ಪ್ರಧಾನಿಮಂತ್ರಿಗಳು ಅವರಿಗೆ ಅಭಿನಂದನೆ ಸಲ್ಲಿಸಲಿದ್ದಾರೆ. ಅವರ ಕೈಚಳಕದಿಂದ ಇಷ್ಟು ಬೃಹತ್ ಮೂರ್ತಿ ಮೈದಳೆದಿದೆ. ಸಮಸ್ತ ಕನ್ನಡ ನಾಡಿನ ಜನತೆಯ ಪರವಾಗಿ ಅವರಿಗೆ ▶ 6ನೇ ಪುಟಕ್ಕೆ

ನ.11ರಂದು ಪ್ರಧಾನಿ ಕಾರ್ಯಕ್ರಮ ವಿವರ

ಬೆ.10	– ಹೆಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮನ
ಬೆ.10.30	– ವಿಧಾನಸೌಧಕ್ಕೆ ಆಗಮನ
ಬೆ.10.32	– ಶಾಸಕರ ಭವನದ ಆವರಣದಲ್ಲಿರುವ ಕನಕದಾಸರ ಪ್ರತಿಮೆಗೆ ಪುಷ್ಪನಮನ
ಬೆ.10.36	– ವಾಲ್ಮೀಕಿ ಪ್ರತಿಮೆಗೆ ಪುಷ್ಪನಮನ
ಬೆ.10.50	– ಕೆಎಸ್‌ಆರ್ ಬೆಂಗಳೂರು ನಿಲ್ದಾಣಕ್ಕೆ ಆಗಮನ
ಬೆ.10.52	– ಪ್ಲಾಟ್‌ಫಾರಂ–7ರಲ್ಲಿ ವಂದೇ ಭಾರತ್ ರೈಲಿಗೆ ಹಸಿರು ನಿಶಾನೆ
ಬೆ.11–01	– ಪ್ಲಾಟ್‌ಫಾರಂ–8ರಲ್ಲಿ ಭಾರತ್ ಗೌರವ್ ಕಾಶಿ ದರ್ಶನ್ ರೈಲಿಗೆ ಚಾಲನೆ
ಬೆ.11.20	– ಹೆಬ್ಬಾಳದ ವಾಯುನೆಲೆಯ ತರಬೇತಿ ಕಮಾಂಡ್ ಕೇಂದ್ರಕ್ಕೆ ಆಗಮನ
ಬೆ.11–40	– ಹೆಲಿಕಾಪ್ಟರ್‌ನಲ್ಲಿ ಕೆಐಎಎಲ್ ಟರ್ಮಿನಲ್ –2ಕ್ಕೆ ಆಗಮನ
ಬೆ.11.50	– ಟರ್ಮಿನಲ್ –2 ಉದ್ಘಾಟನೆ
ಮ.12.22	– ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ
ಮ.12.50	– ಸಭಾ ಕಾರ್ಯಕ್ರಮದ ವೇದಿಕೆಗೆ ಆಗಮನ
ಮ.1.35	– ಪ್ರಧಾನಿ ನರೇಂದ್ರ ಮೋದಿ ಭಾಷಣ

ಶೀಘ್ರದಲ್ಲೇ ಮೈಸೂರಿನ ಅರಸು, ಸಯ್ಯಾಜಿರಾವ್, ಅಶೋಕ, ಶಿವರಾಂಪೇಟೆ, ಧನ್ವಂತರಿ ರಸ್ತೆಗಳಲ್ಲಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಜಾರಿ

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸಭೆಯಲ್ಲಿ ಮೇಯರ್ ಘೋಷಣೆ



ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ವತಿಯಿಂದ ನಡೆದ ಸಂವಾದದಲ್ಲಿ ಮೇಯರ್ ಶಿವಕುಮಾರ್ ಅವರಿಗೆ ವಿವಿಧ ಸಮಸ್ಯೆ ಕುರಿತು ಮನವಿ ಸಲ್ಲಿಸಲಾಯಿತು.

ಮೈಸೂರು, ನ.10(ಜಿಎ)–ಮೈಸೂರಿನ ಪ್ರಮುಖ ವಾಣಿಜ್ಯ ಕೇಂದ್ರ ಸ್ಥಳಗಳಾದ ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ, ಶಿವರಾಂಪೇಟೆ ರಸ್ತೆ ಹಾಗೂ ಧನ್ವಂತರಿ ರಸ್ತೆಗಳಲ್ಲಿ ಶೀಘ್ರದಲ್ಲೇ ಪೇ ಅಂಡ್ ಪಾರ್ಕ್ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಡಿ.ದೇವರಾಜ ಅರಸ್ ರಸ್ತೆಯಲ್ಲಿರುವ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಕಚೇರಿಯಲ್ಲಿ ಆಯೋಜಿಸಿದ್ದ ಸಂವಾದ ▶ 6ನೇ ಪುಟಕ್ಕೆ



ಪೊಲೀಸ್ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು, ಮೈಸೂರಿಗೆ ಆಗಮಿಸಿದ ರಾಜ್ಯ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಕೃಷ್ಣ ಎಂಟರ್‌ಪ್ರೈಸಸ್ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಯುವ ಮುಖಂಡರಾದ ಪ್ರದೀಪ್ ಸಿಂಗ್, ನವೀನ್ ಕುಮಾರ್ ಹಾಗೂ ಮೈಸೂರು ಕೆ.ಆರ್.ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಮನು ಶೈವ್ ಅವರನ್ನು ಕಾಣಬಹುದು.

ನಕ್ಕರೆ ಅದೇ ಸ್ವರ್ಗ

ಮಾಲೀಕರು : (ನಿರ್ಮಾಣವೊಂದರಲ್ಲಿ) ಏನಯ್ಯಾ, ಎಲ್ಲರೂ ಆರು ಇಟ್ಟಿಗೆಗಳನ್ನು ಹೊರುತ್ತಿದ್ದರೆ, ನೀನು ಮೂರೇ ಇಟ್ಟಿಗೆಗಳನ್ನು ಹೊರುತ್ತಿದ್ದೀಯಲ್ಲ?

ಆತ : ಅವರೆಲ್ಲಾ ಸೋಮಾರಿಗಳು ಸ್ವಾಮಿ, ಎರಡೆರಡು ಸಾರಿ ಬರಬೇಕಾಗುತ್ತೆ ಅಂತ!

ಮೈಸೂರು ಮಿತ್ರ

ಶುಕ್ರವಾರ, 11 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮನೆಯವರ ಮನಸ್ಸು ಅರಿಯದೆ, ಮನೆಯ ಜವಾಬ್ದಾರಿಯನ್ನು ಹೊರದೆ, ಮನೆಯ ಯಜಮಾನ ಗೌರವ ಪಡೆಯಲಾರ, ಅಧಿಕಾರ ಚಲಾಯಿಸಿ ಯಜಮಾನನಾಗುವುದು ಸಾಧ್ಯವಿಲ್ಲ. – ದ.ರಾ. ಬೇಂದ್ರೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಂಡಿದ್ದು ಹೊಟ್ಟೆಗಾಗಿ, ಮಾಡಿದ್ದು ಬಟ್ಟೆಗಾಗಿ

ನಿಮ್ಮ ಪಕ್ಷದ ಹಿತ ಕಾಯಲು ರಾಜ್ಯಕ್ಕೆ ಬರುವಿರಾ...

● ಪ್ರಧಾನಿ ರಾಜ್ಯ ಭೇಟಿಯ ಔಚಿತ್ಯದ ಬಗ್ಗೆ ಸಿದ್ದರಾಮಯ್ಯ ತರಾಟೆ ● ಬರುವಾಗ ರಾಜ್ಯದ ಜನತೆಯ ಹಿತ ಕಾಯುವ ಯೋಜನೆ ತನ್ನಿ ● 40% ಕಮಿಷನ್, ಸಬ್‌ಇನ್ಸ್‌ಪೆಕ್ಟರ್ ನೇಮಕಕ್ಕೆ 60–70 ಲಕ್ಷ ಲಂಚ, ಅನೇಕ ಸಚಿವರ ಭ್ರಷ್ಟಾಚಾರ... ಇವರುಗಳ ಬಗ್ಗೆ ನಿಮ್ಮ ದಿವ್ಯ ಮೌನ ಸರಿಯೇ...!?

ಬೆಂಗಳೂರು, ನ.10(ಕೆಎಂಶಿ)– ಕಳೆದ ನಾಲ್ಕು ವರ್ಷಗಳ ಹಿಂದೆ ಚುನಾವಣಾ ಪ್ರಚಾರಕ್ಕಾಗಿ ರಾಜ್ಯಕ್ಕೆ ಬಂದಾಗ ನೀಡಿದ್ದ ಭರವಸೆಗಳೆಲ್ಲಾ ಏನಾಗಿವೆ ಗೊತ್ತಾ? ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಸರ್ಕಾರದ 40% ಕಮಿಷನ್‌ನಿಂದಾಗಿ ಸಂಕಟ ಪಡುತ್ತಿರುವ ಹಲವರು ನಿಮಗೆ ಅನೇಕ ಪತ್ರಗಳನ್ನು ಬರೆದರು. ಸಾಮಾಜಿಕ ಮಾಧ್ಯಮಗಳ ಮೂಲಕ ಮನವಿ ಮಾಡಿದರು. ನಿಮ್ಮದೇ ಪಕ್ಷದ ಕಾರ್ಯಕರ್ತ ಸಂತೋಷ್ ಪಾಟೀಲ್ 40% ಲಂಚದ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡರು. ಮತ್ತೋರ್ವ ಗುತ್ತಿಗೆದಾರ ಬಸವರಾಜು ಎನ್ನುವವರು ಸರ್ಕಾರದ ಲಂಚಾವತಾರದಿಂದ ಬೇಸತ್ತು ದಯಾಮರಣ ಕೋರಿ ನಿಮಗೆ ಪತ್ರ ಬರೆದರು.

ಅನುದಾನ ರಹಿತ ಖಾಸಗಿ ಶಾಲೆಗಳ ಒಕ್ಕೂಟ (ರುಪ್ಸಾ) 40% ಸರ್ಕಾರದ ಕಿರುಕುಳಗಳನ್ನು ನೇರವಾಗಿ ಪ್ರಸ್ತಾಪಿಸಿ ಪತ್ರ ಬರೆಯಿತು. ಗುತ್ತಿಗೆದಾರರ ಸಂಘದವರು ಸರ್ಕಾರವನ್ನು ಎದುರು ಹಾಕಿಕೊಂಡು ಪತ್ರಗಳನ್ನು ಬರೆದರು. ಸ್ವತಃ ವಿರೋಧ ಪಕ್ಷದ ನಾಯಕನಾಗಿ ನಾನೇ ಈ ಕುರಿತು ಪತ್ರ ಬರೆದಿದ್ದೇನೆ. ಈ ಎಲ್ಲ ಪತ್ರಗಳ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಪ್ರಧಾನಿಗೆ ಪ್ರಶ್ನೆಗಳ ಸುರಿಮಳೆಗೈದಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಇನ್ಸ್‌ಪೆಕ್ಟರ್ ಹುದ್ದೆಗೆ 60–70 ಲಕ್ಷ ರೂಪಾಯಿ ಕೊಟ್ಟು ಬರಬೇಕಾಗಿದೆ ಎಂದು ಸಚಿವ ಎಂ.ಟಿ.ಬಿನಾಗರಾಜ್ ಅವರು ಬಹಿರಂಗವಾಗಿ ಹೇಳಿದ್ದಾರೆ. ಪೊಲೀಸರು ಲಂಚ ತಿಂದು ಕುಳಿತಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರೇ ಒಪ್ಪಿಕೊಂಡಿದ್ದಾರೆ. ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಹಿರಿಯ ಐಪಿಎಸ್ ಅಧಿಕಾರಿಗಳೂ ಸಿಕ್ಕಿ ಬಿದ್ದಿದ್ದಾರೆ. ಸಚಿವ ಎಸ್.ಟಿ.ಸೋಮಶೇಖರ್ ಅವರ ಮೇಲಿನ ಲಂಚ ಪ್ರಕರಣದ ತನಿಖೆ ನಡೆಸುವಂತೆ ಲೋಕಾಯುಕ್ತ ಪೊಲೀಸರಿಗೆ ಹೈಕೋರ್ಟ್ ಸೂಚನೆ ನೀಡಿದೆ. ಹೈಕೋರ್ಟ್ ಸೂಚನೆ ವಿರುದ್ಧ ಸಚಿವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ. ಸುಪ್ರೀಂಕೋರ್ಟು ಕೂಡ ಅವರ ನೆರವಿಗೆ ಬರಲಿಲ್ಲ. ಆರೋಗ್ಯ ಸಚಿವ ಸುಧಾಕರ್ ಅವರು ಕೊರೊನಾ ಪಿಡುಗಿನ ಸಂದರ್ಭದಲ್ಲಿ ಭ್ರಷ್ಟಾಚಾರ ಎಸಗಿದ್ದಾರೆ. ಸಚಿವ ಸುಧಾಕರ್, ಶಿವರಾಮ್ ಹೆಬ್ಬಾರ್, ಬಿ.ಸಿ.ಪಾಟೀಲ್, ಗೋಪಾಲಯ್ಯ, ಬೈರತಿ ಬಸವರಾಜ್, ಶ್ರೀರಾಮುಲು, ಆನಂದ್ ಸಿಂಗ್, ಪ್ರಭು ಚೌಹಾಣ್ ಹೀಗೆ ಸಾಲು ಸಾಲು ಸಚಿವರ ಮೇಲೆ ಲಂಚ, ದುರಾಡಳಿತ, ಅಕ್ರಮಗಳು ಸೇರಿ ರಾಶಿ ರಾಶಿ ಆರೋಪಗಳು ಕೇಳಿ ಬಂದಿವೆ.



ಫೈಲ್ ಚಿತ್ರ

ಅನೇಕ ಸಚಿವರು ಸಿಡಿ ಪ್ರಕರಣಗಳಲ್ಲಿ ತಡೆಯಾಜ್ಞೆ ಪಡೆದಿದ್ದಾರೆ. ಗೋವುಗಳ ಮೇವು ಸರಬರಾಜಿಗೂ ಲಂಚ ಕೇಳಿ ದಾಖಲೆ ಮಾಡಿದ ಆರೋಪಗಳು ಬಂದರೂ ಮಾಮೂಲಿಯಂತೆ ದಿವ್ಯ ಮೌನಕ್ಕೆ ಜಾರಿದ್ದ ನಿಮಗೆ ಚುನಾವಣೆ ಕಾರಣಕ್ಕೆ ರಾಜ್ಯ ಮತ್ತೆ ಮತ್ತೆ ನೆನಪಾಗುತ್ತಿದೆ. ಇದನ್ನು ನಾವು ಯಾವ ಮಾತುಗಳಲ್ಲಿ ವಿವರಿಸಬೇಕು ಹೇಳಿ ಎಂದಿದ್ದಾರೆ.

ಸಿಬಿಐ, ಇಡಿ, ಐಟಿ ಮುಂತಾದ ಕೇಂದ್ರ ತನಿಖಾ ಸಂಸ್ಥೆಗಳ ಮೂಲಕ ಜನರ ಧ್ವನಿ ಅಡಗಿಸುವ ಯತ್ನ ನಡೆಯುತ್ತಿದೆ. ಆದರೆ ರಾಜ್ಯ ಸರ್ಕಾರದಲ್ಲಿರುವ ಎಷ್ಟು ಮಂದಿ ಸಚಿವರು ಮತ್ತು ರಾಜ್ಯ ಬಿಜೆಪಿಯಲ್ಲಿರುವ ಎಷ್ಟು ನಾಯಕರುಗಳ ವಿರುದ್ಧ ಈ ತನಿಖಾ ಸಂಸ್ಥೆಗಳು ಕೇಸು ದಾಖಲಿಸಿಕೊಂಡು ತನಿಖೆ ನಡೆಸಿವೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ಸರ್ಕಾರಗಳ ವೈಫಲ್ಯಗಳ ಕುರಿತಂತೆ ನಾವು ಇದುವರೆಗೂ 73 ಪ್ರಶ್ನೆಗಳನ್ನು ಹಾಕಿದ್ದೆವು. ಇವುಗಳಿಗೆ ನಿಮ್ಮ ಬಳಿ ಉತ್ತರ ಇದೆಯೇ? ಎಂದು ಕೇಳಿದ್ದೇವೆ. ಒಂದಕ್ಕೂ ಉತ್ತರಿಸಲು ಸರ್ಕಾರದಿಂದ ಸಾಧ್ಯವಾಗಿಲ್ಲ ಏಕೆ? ರಾಜ್ಯದ ಆರ್ಥಿಕತೆಗೆ ನೆರವಾಗುವ ಮಹದಾಯಿ, ಕೃಷ್ಣಾ ಮೇಲ್ದಂಡೆ, ಮೇಕೆದಾಟು ಯೋಜನೆಗಳನ್ನು ಜಾರಿ ಮಾಡಲಿಲ್ಲ. ಇವುಗಳನ್ನು ರಾಷ್ಟ್ರೀಯ ಯೋಜನೆಗಳೆಂದು ಘೋಷಿಸಿ ಎನ್ನುವ ರೈತರ ಬೇಡಿಕೆಗೆ ನೀವು ಸಾಂಪ್ರದಾಯಿಕ ಮೌನವನ್ನೇ ಏಕೆ ಪಾಲಿಸಿದ್ದೀರಿ? ಎಸ್‌ಸಿ/ಎಸ್‌ಟಿ ಸಮುದಾಯಗಳ ಮೀಸಲು ಹೆಚ್ಚಳದ ಕುರಿತು ರಾಜ್ಯದಲ್ಲಿ ಎಲ್ಲ ಪಕ್ಷಗಳೂ ಸೇರಿ ಸರ್ವಾನುಮತದ ತೀರ್ಮಾನ ತೆಗೆದು ಕೊಂಡಿದ್ದೇವೆ. ರಾಜ್ಯ ಸರ್ಕಾರ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ ಕಳಿಸಿದೆ. ಇದನ್ನು ಸಂವಿಧಾನದ 9ನೇ ಶೆಡ್ಯೂಲಿಗೆ ಕೂಡಲೇ ಸೇರಿಸಬೇಕು. ಆದರೆ ಈ ಕುರಿತು ಕೇಂದ್ರದ ನಿಲುವು ಏನು? ನಮ್ಮ ಸರ್ಕಾರವಿದ್ದಾಗ 2013 ರಿಂದ 2018ರವರೆಗೆ ಹಲವಾರು ಜಾತಿಗಳನ್ನು ಪ.ಜಾತಿ/ಪ.ಪಂಗಡಕ್ಕೆ ಸೇರಿಸಬೇಕೆಂದು ಶಿಫಾರಸ್ಸು ಮಾಡಿದ್ದೆವು. ಅವುಗಳ ಕುರಿತು ನಿಮ್ಮ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ತುಮಕೂರು–ದಾವಣಗೆರೆ ಮುಂತಾದ ರೈಲ್ವೆ ಯೋಜನೆಗಳಿಗೆ ಅಗತ್ಯವಾದಷ್ಟು ಹಣ ಬಂದಿಲ್ಲ. ಯೋಜನೆಗಳು ಕಾಲು ಮುರಿದುಕೊಂಡು ಬಿದ್ದಲ್ಲಿಯೇ ಇವೆ. ರಾಯಚೂರಿನ ಜನತೆಯ ಏಮ್ಸ್ ಕನಸು ಇನ್ನೂ ಕನಸಾಗಿಯೇ ಉಳಿದಿದೆ. ರಾಜ್ಯದ ಪಾಲಿಗೆ ಒದಗಿ ಬಂದಿದ್ದ ಎರಡು ಸಿಆರ್‌ಪಿಎಫ್ ಬೆಟಾಲಿಯನ್‌ಗಳನ್ನು ಕಿತ್ತು ಉತ್ತರ ಪ್ರದೇಶಕ್ಕೆ ವರ್ಗಾಯಿಸಲಾಯಿತು. ಕೇಂದ್ರದ ಆಯೋಗಗಳು ನಡೆಸುವ ಪ್ರವೇಶ ಪರೀಕ್ಷೆಯಿಂದ ಕನ್ನಡವನ್ನು ಕಿಕ್‌ಔಟ್ ಮಾಡಿ ಕನ್ನಡಿಗರ ಪಾಲಿನ ಉದ್ಯೋಗವನ್ನು ಕಿತ್ತುಕೊಳ್ಳಲಾಗಿದೆ. ಇದಕ್ಕೆ ನಿಮ್ಮ ಉತ್ತರವೇನು.

ನೀವು ಮಹರ್ಷಿ ವಾಲ್ಮೀಕಿ, ನಾಡಪ್ರಭು ಕೆಂಪೇಗೌಡರು, ದಾಸಶ್ರೇಷ್ಠರಾದ ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡಲು ನೀವು ರಾಜ್ಯಕ್ಕೆ ಬರುತ್ತಿದ್ದೀರಿ. ಇವರೆಲ್ಲಾ ಕನ್ನಡ ಮಣ್ಣಿನ ಸಾಂಸ್ಕೃತಿಕ ನಾಯಕರು. ವಿಗ್ರಹಗಳಿಗೆ ಮಾಲಾರ್ಪಣೆ ಮಾಡುತ್ತಾ ಅವರ ವಿಚಾರಗಳನ್ನು ಕೊಲ್ಲುವ ಸಂಪ್ರದಾಯವನ್ನು ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಬೆದರಿಕೆ ಮೂಲಕ ಆಚರಣೆಗೆ ತರುತ್ತಿವೆ. ನೀವೀಗ ಮಾಲಾರ್ಪಣೆ ಮಾಡುವ ಎಲ್ಲಾ ಮಹನೀಯರ ಬಗ್ಗೆ ನಿಜವಾದ ಗೌರವ, ಶ್ರದ್ಧೆ ಇದ್ದರೆ ಇವರನ್ನೆಲ್ಲಾ ರಾಷ್ಟ್ರೀಯ ಸಾಂಸ್ಕೃತಿಕ ನಾಯಕರು ಎಂದು ಘೋಷಿಸಿ. ಇವರ ಪ್ರತಿಮೆಗಳನ್ನು ಪಾರ್ಲಿಮೆಂಟಿನ ಮುಂದೆ ಸ್ಥಾಪಿಸುವ ಭರವಸೆಯನ್ನು ಜನರಿಗೆ ನೀಡಿ.

ಅಯೋಧ್ಯೆಯಲ್ಲಿ ವಾಲ್ಮೀಕಿ ಪ್ರತಿಮೆ ಸ್ಥಾಪಿಸಿ: ಜಗತ್ತಿಗೆ ರಾಮಾಯಣದಂಥಹ ಶ್ರೇಷ್ಠ ಗ್ರಂಥವನ್ನು ನೀಡಿ ಶ್ರೀರಾಮನಂತಹ ವ್ಯಕ್ತಿತ್ವವನ್ನು ಪರಿಚಯಿಸಿದ ಮಹರ್ಷಿ ವಾಲ್ಮೀಕಿಯವರ ಮಂದಿರವನ್ನು ಅಯೋಧ್ಯೆಯಲ್ಲಿ ಸ್ಥಾಪಿಸುವಂತೆ ನಾನು ಒತ್ತಾಯಿಸುತ್ತೇನೆ.

ನಿಮ್ಮ ಪತ್ರಗಳು

ಮಕ್ಕಾಜಿ ಚೌಕದ ಬಳಿ ರಸ್ತೆ ಅಗೆದು ಅವ್ಯವಸ್ಥೆ



ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ಹಾಗೂ ಸದಾ ವಾಹನ ಮತ್ತು ಜನ–ಜಂಗುಳಿ ಯಿಂದ ಕೂಡಿರುವ ಮಕ್ಕಾಜಿ ಚೌಕದ ಮುಂಭಾಗ ರಸ್ತೆ ಅಗೆದಿದ್ದು, ಸಾರ್ವಜನಿಕರು ಸಂಚರಿಸುವುದೇ ಕಷ್ಟಕರವಾಗಿದೆ. ನಗರ ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿ ಇದಕ್ಕೆ ಸಾಕ್ಷಿಯಾಗಿದೆ.

ಗಾಂಧಿ ಚೌಕದಿಂದ ನ್ಯೂ ಸಯ್ಯಾಜಿರಾವ್ ರಸ್ತೆ (ಒಲಂಪಿಯಾ ಚಿತ್ರಮಂದಿರ) ಮಾರ್ಗದ ರಸ್ತೆಯ ಮಧ್ಯಭಾಗದಲ್ಲಿ ಚರಂಡಿ ನಿರ್ಮಾಣ ಮಾಡಲು ಮಹಾನಗರ ಪಾಲಿಕೆಯು ದೀಪಾವಳಿ ಹಬ್ಬದ ದಿನದಂದು ರಸ್ತೆ ಅಗೆದಿದ್ದು, ಇದರಿಂದ ನಿತ್ಯವೂ ಸಾರ್ವಜನಿಕರು, ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ನಗರದಾದ್ಯಂತ ಎತ್ತ ನೋಡಿದರೂ ರಸ್ತೆ ಅಗೆದಿರುವ, ಗುಂಡಿ ಬಿದ್ದಿರುವ ಚಿತ್ರಣಗಳು ಸರ್ವೆ ಸಾಮಾನ್ಯವಾಗಿದೆ. ಅದರ ನಡುವೇ ಪಾಲಿಕೆ ಅಧಿಕಾರಿಗಳು ರಸ್ತೆ ಅಗೆದಿದ್ದು, ಇನ್ನೂ ಕಾಮಗಾರಿ ಪೂರ್ಣಗೊಳಿಸದೆ ಇರುವುದರಿಂದ ಜನರ ಪಾಡು ಹೇಳತೀರದಾಗಿದೆ. ಜನರು ಪಾಲಿಕೆ ಅಧಿಕಾರಿಗಳಿಗೆ ಹಿಡಿಶಾಪ ಹಾಕುವಂತಾಗಿದೆ.

– ನೊಂದ ಸಾರ್ವಜನಿಕರು, ಮೈಸೂರು.

ಅಪೋಲೋ ಆಸ್ಪತ್ರೆ ಮುಂಭಾಗದ ರಸ್ತೆಯ ದುರವಸ್ಥೆ

ಮಾನ್ಯರೆ,


ಮೈಸೂರು ನಗರದ ಅಪೋಲೋ ಆಸ್ಪತ್ರೆಯ ಮುಂಭಾಗದ ಆದಿಚುಂಚನಗಿರಿ ರಸ್ತೆಯನ್ನು ಕಳೆದ ನಾಲ್ಕು ತಿಂಗಳ ಹಿಂದೆ ಹೊಸದಾಗಿ ಯುಜಿಡಿ ಪೈಪ್‌ಲೈನ್ ಅಳವಡಿಸಲು ಆಗೆದಿರುವುದರಿಂದ ರಸ್ತೆ ಸಂಪೂರ್ಣ ಹಾಳಾಗಿದ್ದು, ವಾಹನ ಸಂಚಾರವಿರಲಿ, ಸಾರ್ವಜನಿಕರು ಸಹ ಓಡಾಡದಂತಹ ಸ್ಥಿತಿ ನಿರ್ಮಾಣವಾಗಿದೆ.

ಈ ರಸ್ತೆಯಲ್ಲಿ ಓಡಾಡುವ ಜನರು ನಗರಪಾಲಿಕೆಗೆ ಹಿಡಿ ಶಾಪ ಹಾಕುತ್ತಿದ್ದಾರೆ. ದಸರಾ ನಂತರ ಈ ರಸ್ತೆಗೆ ಡಾಂಬರು ಹಾಕಿಸುವುದಾಗಿ ಮೇಯರ್ ಭರವಸೆ ನೀಡಿದ್ದರು. ಈಗಲಾದರೂ ಈ ರಸ್ತೆಯನ್ನು ಡಾಂಬರೀಕರಣ ಮಾಡಿ, ಸಾರ್ವಜನಿಕರು ಓಡಾಡಲು ಅನುಕೂಲ ಮಾಡಿಕೊಡ ಬೇಕಾಗಿ ವಿನಂತಿ.

–ಬೂಕನಕೆರೆ ವಿಜೇಂದ್ರ, ಮೈಸೂರು.

ಪಾಲಿಕೆಯ ಬೇಜವಾಬ್ದಾರಿತನದ ಪರಮಾವಧಿ!

ಮಾನ್ಯರೇ,



ಮೈಸೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದಾದ ಎನ್‌ಐಇ ಕಾಲೇಜಿನ ಮುಂದೆ ಗುರುವಾರ (ನ.10) ನಡೆದ ಘಟನೆ. ಸರಿ ಸುಮಾರು ಬೆಳಿಗ್ಗೆ 10.15 ಸಮಯಕ್ಕೆ ಕಾಲೇಜಿನ ಎದುರಿಗೆ ಕಲ್ಲು ಹಾಗೂ ಮಣ್ಣು ತುಂಬಿದ ಪಾಲಿಕೆ (MCC) ವಾಹನ (KA-09–M–8386) ಆಗಮಿಸಿತು. ಮೈಸೂರು–ಮಾನಂದ ವಾಡಿ ಹೆದ್ದಾರಿ ರಸ್ತೆ ಮಧ್ಯೆ ನಿಂತ ಈ ವಾಹನದಿಂದ ಇಳಿದ ಸಿಬ್ಬಂದಿ ಏಕಾಏಕಿ ಮಣ್ಣನ್ನು ರಸ್ತೆಯುದ್ದಕ್ಕೂ ಹರಡಲು ಆರಂಭಿಸಿದರು. ಇದನ್ನು ಗಮನಿಸಿದ ಎಷ್ಟೋ ಜನರು ಕಷ್ಟವಾದರು ಕಛೇರಿಯ ಸಮಯವಾದ್ದರಿಂದ ಗೊಣಗಿಕೊಂಡು ಮುಂದೆ ಸಾಗಿದರು.

ಇಲ್ಲಿ ಕೆಲ ಪ್ರಶ್ನೆಗಳಿಗೆ ಪಾಲಿಕೆ ಉತ್ತರಿಸಬೇಕಾಗಿದೆ. ರಸ್ತೆ ಸರಿಪಡಿಸುವುದು ಹೀಗೆಯೇ? ಅಲ್ಲದೆ ಪೀಕ್ hour ಮತ್ತು ಟ್ರಾಫಿಕ್ ಸಮಯದಲ್ಲಿ ಈ ರೀತಿ ಅವೈಜ್ಞಾನಿಕ ಕಾರ್ಯ ಮಾಡುವುದು ಎಷ್ಟು ಸೂಕ್ತ? ಈ ಕಾರ್ಯವನ್ನು ಮಾಡಲು ಅನುಮತಿ ಕೊಟ್ಟವರು ಯಾರು? ಕಾರ್ಯಪಾಲನಾ ಇಂಜಿನಿಯರ್ ಯಾಕೆ ಸ್ಥಳದಲ್ಲಿ ಇರಲಿಲ್ಲ? ಬೇಜವಾಬ್ದಾರಿತನದ ಪರಮಾವಧಿ ತೋರಿದ ಪಾಲಿಕೆ ಅಧಿಕಾರಿಗಳು ದಯಮಾಡಿ ಇದನ್ನು ಗಮನಿಸಿ, ಆದೇಶ ಕೊಟ್ಟ ಇಂಜಿನಿಯರ್ ವಿರುದ್ಧ ಕ್ರಮ ಜರುಗಿಸಿ, ಶೀಘ್ರವೇ ಮಣ್ಣು ಮುಚ್ಚಿರುವುದನ್ನು ತೆರವುಗೊಳಿಸಿ ಪರ್ಯಾಯ ಡಾಂಬರೀಕರಣ ಮಾಡಬೇಕಾಗಿ ವಿನಂತಿ. **–ನೊಂದ ನಾಗರಿಕರು, ಮೈಸೂರು.**

ನಗರ ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕುಲಕರ್ಣಿ ಕೊಲೆಗೆ ಕಾರಣವಲ್ಲವೆ?

ಮಾನ್ಯರೆ,


ನಿವೃತ್ತ ಐಬಿ ಅಧಿಕಾರಿ ಕುಲಕರ್ಣಿಯವರ ಕೊಲೆಗೆ ಸಾಕಷ್ಟು ಕಾರಣಗಳ ಹೊರತಾಗಿಯೂ ನಗರ ಪಾಲಿಕೆ ಅಧಿಕಾರಿಗಳದ್ದು ಪರೋಕ್ಷ ಸಹಕಾರ ಇದೆ ಎಂದರೆ ತಪ್ಪಾಗಲಾರದು. ಈ ಬಗ್ಗೆ ತನಿಖೆಯ ಅವಶ್ಯಕತೆ ಇದೆ. ದಿ.ಕುಲಕರ್ಣಿಯವರು ಎರಡೆರಡು ಬಾರಿ ದೂರು ನೀಡಿದರೂ ಸ್ಥಳ ಪರಿಶೀಲನೆ ಮಾಡದೇ ನಾಮಕಾವಸ್ಥೆ ನೋಟೀಸ್ ಜಾರಿ ಮಾಡಿ ಆರೋಪಿಗಳಿಂದ ನಗರಪಾಲಿಕೆಯ ಸಂಬಂಧಿಸಿದ ಅಧಿಕಾರಿಗಳು ಲಂಚ ಪಡೆದಿರಬೇಕೆಂಬ ಗುಮಾನಿ ಸಾರ್ವಜನಿಕರಲ್ಲಿ, ಮಾಧ್ಯಮಗಳಲ್ಲಿ ಬರುತ್ತಿರುವುದನ್ನು ಪರಿಗಣಿಸಿ ತನಿಖೆ ಆಗಿ ತಪ್ಪಿತಸ್ಥರು ಎಷ್ಟೇ ಪ್ರಭಾವ ಬೀರಿದರೂ ಅವರನ್ನು ಶಿಕ್ಷಿಸದೇ ಬಿಡಬಾರದು. ಆಗ ಈ ತನಿಖೆಗೊಂದು ಅರ್ಥ ಬಂದೀತು. ಅವರ ಸಾವಿಗೆ ನ್ಯಾಯ ದೊರಕೀತು. ಜೊತೆಗೆ ರಾಘವೇಂದ್ರ ಅವರು ಹೇಳಿರುವಂತೆ ಪೊಲೀಸರು ಬರೀ ದ್ವಿಚಕ್ರವಾಹನ, ಕಾರು, ಇಂತವನ್ನು ಹಿಡಿದು ದಂಡ ಹಾಕುವುದರ ಜೊತೆಗೆ ಇಂತಹ ಪ್ರಕರಣಗಳಲ್ಲಿ ತಮ್ಮ ಇಲಾಖೆಯ ವೈಫಲ್ಯತೆ ಬಗ್ಗೆಯೂ ಗಮನ ಹರಿಸಬೇಕು.

ದಿ. ಕುಲಕರ್ಣಿಯವರಂತಹ ಪ್ರಭಾವಿ ವ್ಯಕ್ತಿಗಳದ್ದೆ ಈ ಕಥೆಯಾದರೆ ಶ್ರೀ ಸಾಮಾನ್ಯನ ಪಾಡೇನು. ಪ್ರಕರಣ ಶೀಘ್ರವಾಗಿ ಭೇದಿಸುವಲ್ಲಿ ಯಶಸ್ವಿಯಾಗಿದ್ದಕ್ಕೆ ಪೊಲೀಸ್ ಇಲಾಖೆಗೆ ಅಭಿನಂದನೆಗಳು ಹಾಗೆಯೇ ನಿಷ್ಪಕ್ಷಪಾತ ತನಿಖೆಯೂ ಆಗಲಿ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಇನ್ನು ಮಾತನಾಡಲು ಬರುವುದಿಲ್ಲ

● ಹಿರಿಯ ರಾಜಕೀಯ ಮುತ್ಸದ್ದಿ, ಸಂಸದ ಶ್ರೀನಿವಾಸಪ್ರಸಾದ್ ವಿಷಾದ ● ವಿವಿಗಳಲ್ಲಿ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರೂ ಗುಣಮಟ್ಟ ಮಾತ್ರ ಸುಧಾರಿಸಿಲ್ಲ ● ಉನ್ನತ ಶಿಕ್ಷಣ ಪಡೆದವರು ಬೋಧನೆ ಬಗ್ಗೆ ನಿರಾಸಕ್ತಿ; ಬೋಧಕೇತರ ಹುದ್ದೆಗಳತ್ತ ಆಸಕ್ತಿ



ಮೈಸೂರು,ನ10(ಎಂಟಿವೈ)– ವಿಶ್ವವಿದ್ಯಾಲಯಗಳಲ್ಲಿ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆಯಾದರೂ, ಗುಣಮಟ್ಟದ ವಿದ್ಯಾರ್ಥಿಗಳು ಹೊರ ಹೊಮ್ಮದೇ ಇರುವುದು ವಿಷಾದಕರ ಸಂಗತಿ ಎಂದು ಸಂಸದ ವಿ.ಶ್ರೀನಿವಾಸ್ ಪ್ರಸಾದ್ ವಿಷಾದಿಸಿದ್ದಾರೆ.

ಮೈಸೂರು ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಪ್ರೊ.ಎಂ.ಎಸ್. ಶೇಖರ್ ರಚನೆಯ ಸೋಸಲೆ ಸಿದ್ದಪ್ಪ ಸಮಗ್ರ ಸಾಹಿತ್ಯ ಸಂಪುಟ (ಸಂಪಾದಿತ) ಮತ್ತು ಹೊರಳು ಹಾದಿ (ವಿಮರ್ಶೆ) ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಗುಣಮಟ್ಟದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಿಂದ ಬರುವುದೇ ಕಡಿಮೆಯಾಗಿದೆ. ಬಹುತೇಕ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ನಿರೀಕ್ಷಿಸಿದ ಫಲಿತಾಂಶ ಬರದಿರುವುದನ್ನು ಅವಲೋಕಿಸಿದಾಗ ವ್ಯಥೆಯಾಗುತ್ತದೆ. ಮೈಸೂರು ವಿಶ್ವ ವಿದ್ಯಾಲಯದಲ್ಲಿ 170 ಸಂಶೋಧನಾ ವಿದ್ಯಾರ್ಥಿಗಳಿದ್ದು, ಅವರಲ್ಲಿ ಕೆಲವರಿಗೆ ಇನ್ನೂ ಸರಿಯಾಗಿ ಮಾತನಾಡಲು ಬರುವುದಿಲ್ಲ. ಅಧ್ಯಯನದ ಕೊರತೆಯೇ ಇದಕ್ಕೆ ಪ್ರಮುಖ ಕಾರಣ ಎಂದು ಅಸಮಾದಾನ ವ್ಯಕ್ತಪಡಿಸಿದರು.

ಸಂಶೋದನಾ ವಿದ್ಯಾರ್ಥಿಗಳಲ್ಲಿ ಬಹುತೇಕರು ಪಠ್ಯವನ್ನು ಕಂಠಪಾಠ ಮಾಡಿ ಉತ್ತೀರ್ಣರಾಗುತ್ತಿದ್ದಾರೆಯೇ ಹೊರತು ಜ್ಞಾನ ಸಂಪಾದಿಸಿಕೊಳ್ಳುತ್ತಿಲ್ಲ. ಸಾಕಷ್ಟು ಯುವ ಜನರು ನನ್ನ ಬಳಿ ಬಂದು ಹೊರ ಗುತ್ತಿಗೆಯಲ್ಲಿ ವಿಶ್ವ ವಿದ್ಯಾಲಯದಲ್ಲಿ ಕೆಲಸ ಕೊಡಿಸಿ ಎಂದು ಕೇಳುತ್ತಾರೆ. ಆದರೆ, ಬೋಧನೆ ಮಾಡುವ ಉತ್ಸಾಹವನ್ನು ಯಾರು ತೋರುತ್ತಿಲ್ಲ. ಪ್ರಾಧ್ಯಾಪಕರು ಸಹ ಬೋಧಕೇತರ ಹುದ್ದೆಯ ಕಡೆಗೆ ಆಸಕ್ತಿ ತೋರುತ್ತಿದ್ದಾರೆ. ಉನ್ನತ ಶಿಕ್ಷಣ ಪಡೆದು ಹೊರ ಬರುವ ಸಾಕಷ್ಟು ವಿದ್ಯಾರ್ಥಿಗಳು ಬೋಧನೆ ಮಾಡುವ ಧೈರ್ಯವನ್ನೇ ತೋರುತ್ತಿಲ್ಲ. ಬೋಧಕೇತರ ಹುದ್ದೆ ಪಡೆಯಲು ಅವರು ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ನಾನು ಇಂದಿಗೂ ಓದುವ ಹವ್ಯಾಸವನ್ನು ಬೆಳೆಸಿಕೊಂಡಿದ್ದೇನೆ. ಆದರೆ, ಯುವಜನರು ಓದುವ ಹವ್ಯಾಸದಿಂದ ವಿಮುಖರಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಓದುವ ಹವ್ಯಾಸದಿಂದ ಮಾತ್ರ ಜ್ಞಾನ ಸಂಪಾದಿಸಲು ಸಾಧ್ಯ. ಡಾ.ಬಿ.ಆರ್. ಅಂಬೇಡ್ಕರ್ ಶ್ರದ್ಧೆಯಿಂದ ಓದಿದ ಪರಿಣಾಮವಾಗಿ ಅವರು ಅಪಾರ ಪ್ರಮಾಣದಲ್ಲಿ ಜ್ಞಾನ ಸಂಪಾದನೆ ಮಾಡಿದರು. ಅವರು ನಮಗೆ ರಾಜಕೀಯ ಮೀಸಲಾತಿ ನೀಡದೇ ಇದ್ದಿದ್ದರೆ ನಾವು ಸಂಸತ್‌ನಲ್ಲಿ ಕೂರಲು ಸಾಧ್ಯವಾಗುತ್ತಿರಲಿಲ್ಲ. ಅಂಬೇಡ್ಕರ್ ಆ ಕಾಲದಲ್ಲಿಯೇ ನಮ್ಮ ಪರಿಸ್ಥಿತಿಯ ಬಗ್ಗೆ ಆಲೋಚನೆ ಮಾಡಿದ್ದರು. ಅದಕ್ಕೆ ಅವರು ಪಡೆದ ಜ್ಞಾನವೇ ಕಾರಣ. ಇದನ್ನು ಮನಗಂಡು ಇಂದಿನ ಸಂಶೋಧನಾ ವಿದ್ಯಾರ್ಥಿಗಳು ಒಳಗೊಂಡಂತೆ ಎಲ್ಲರೂ ಓದಿನ ಕಡೆಗೆ ಹೆಚ್ಚಿನ ಗಮನ ನೀಡಬೇಕು.

ಬುದ್ಧ ಅಧ್ಯಯನ ಕೇಂದ್ರಕ್ಕೆ ಜಾಗ ಕಲ್ಪಿಸಲು ಮನವಿ

ಮೈಸೂರು ವಿಶ್ವವಿದ್ಯಾಲಯದಲ್ಲಿ ಬುದ್ಧ ಅಧ್ಯಯನ ಕೇಂದ್ರ ಸ್ಥಾಪನೆಗೆ ಜಾಗ ಒದಗಿಸಬೇಕು ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಮನವಿ ಮಾಡಿದರು. ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಈಗಾಗಲೇ ಪ್ರಧಾನಿ ಹಾಗೂ ಮುಖ್ಯಮಂತ್ರಿಯೊಂದಿಗೆ ಮಾತುಕತೆ ನಡೆಸಿದ್ದೇನೆ. ಮೈಸೂರು ವಿಶ್ವವಿದ್ಯಾಲಯ ಜಾಗ ನೀಡಿದರೆ ಸಾಕು ಕಟ್ಟಡವನ್ನು ನಾವು ನಿರ್ಮಾಣ ಮಾಡುತ್ತೇವೆ. ಈ ಕುರಿತು ಪ್ರಸ್ತಾವನೆ ಬಂದರೆ ಬಜೆಟ್‌ನಲ್ಲಿ ಅನುದಾನ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಓದುವ ವಿಚಾರದಲ್ಲಿ ಏನಾದರು ಸಮಸ್ಯೆಗಳು ಕಂಡು ಬಂದರೆ ನನ್ನನ್ನು ಸಂಪರ್ಕಿಸಿದರೆ ಸಮಸ್ಯೆ ಬಗೆಹರಿಸಲು ನಾನು ಬದ್ಧನಿದ್ದೇನೆ ಎಂದು ಭರವಸೆ ನೀಡಿದರು.

ಇದೇ ವೇಳೆ ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಮಕಾಲಿನರಾಗಿದ್ದ ಸೋಸಲೆ ಸಿದ್ದಪ್ಪ ಅವರ ಸಮಗ್ರ ಸಾಹಿತ್ಯವನ್ನು ಅಪಾರ ಪರಿಶ್ರಮದಿಂದ ಪ್ರೊ.ಎಂ.ಎಸ್. ಶೇಖರ್ ಸಂಗ್ರಹಿಸಿದ್ದಾರೆ. ಅವರ ಕಾಳಜಿ, ಪರಿಶ್ರಮ ಮೆಚ್ಚುವಂತದ್ದು ಎಂದರು.

ಹಿಂದೂ ಪದದ ಚರ್ಚೆಯೇ ಅಪ್ರಸ್ತುತ

ಮೈಸೂರು: ಪೊಲಿಟಿಕಲ್ ಮೈಲೇಜ್‌ಗಾಗಿ ಕೆಲವರು ಹಿಂದೂ ಪದದ ಅರ್ಥದ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಭಾರತ ಎಲ್ಲಾ ಧರ್ಮಗಳ ಮೂಲವಾಗಿದ್ದು, ಹಿಂದೂ ಪದದ ಚರ್ಚೆ ಅಪ್ರಸ್ತುತ ಎಂದು ಶಾಸಕ ಎನ್.ಮಹೇಶ್ ಅಭಿಪ್ರಾಯಪಟ್ಟಿದ್ದಾರೆ.

ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರೊ.ಎಂ.ಎಸ್.ಶೇಖರ್ ರಚನೆಯ ಸೋಸಲೆ ಸಿದ್ದಪ್ಪ ಸಮಗ್ರ ಸಾಹಿತ್ಯ ಸಂಪುಟ (ಸಂಪಾದಿತ) ಮತ್ತು ಹೊರಳು ಹಾದಿ (ವಿಮರ್ಶೆ) ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಹಿಂದೂ ಪದದ ಕುರಿತು ರಾಜ್ಯದಲ್ಲಿ ನಡೆಯುತ್ತಿರುವ ಚರ್ಚೆ ಅಪ್ರಸ್ತುತವಾಗಿದ್ದು, ಹಿಂದೂ, ಪಾರ್ಸಿ, ಜೈನ, ಬೌದ್ಧ ಸೇರಿದಂತೆ ವಿವಿಧ ಧರ್ಮಗಳ ಮೂಲ ಭಾರತವೇ ಆಗಿದೆ. ಈ ಧರ್ಮಗಳು ಆಧ್ಯಾತ್ಮಿಕ ಮತ್ತು ಸಾಮಾಜಿಕ ಬದುಕಿನಿಂದಲೇ ಹುಟ್ಟಿಕೊಂಡಿವೆ. ಹಿಂದೂ ಪದವನ್ನು ಪ್ರತ್ಯೇಕ ಮಾಡಿ ಭಾರತ ಬದುಕಲು ಸಾಧ್ಯವೇ ಇಲ್ಲ. ಹಾಗಾಗಿ ಹಿಂದೂ ಪದದ ಚರ್ಚೆ ಅಪ್ರಸ್ತುತ. ಭಾರತ ಎಂಬುದು ಒಗಟಿನಂತೆ, ಅದು ಅರ್ಥವಾಗುವುದು ಬುದ್ಧರಂತಹ ವ್ಯಕ್ತಿಗಳಿಗೆ ಮಾತ್ರ. ಈ ಒಗಟಿನ ನಡುವೆ ವೈರುಧ್ಯಗಳಿರುವುದು ಪೊಲಿಟಿಕಲ್ ಮೈಲೇಜ್‌ಗಾಗಿ ಮಾತ್ರ, ಇಂತಹ ಚರ್ಚೆಗಳ ಬಗ್ಗೆ ಹೆಚ್ಚು ಚಿಂತಿಸುವ ಅವಶ್ಯಕತೆ ಇಲ್ಲ ಎಂದರು.

ಕಾರ್ಯಕ್ರಮದಲ್ಲಿ ಲೇಖಕ ಪ್ರೊ.ಶೇಖರ್, ಸಂಸ್ಕೃತಿ ಚಿಂತಕರಾದ ಡಾ.ಆನಂದ ಮೂರ್ತಿ, ಮಹದೇವ ಶಂಕನಪುರ, ಕನ್ನಡ ಪುಸ್ತಕ ಪ್ರಾಧಿಕಾರ ಮಾಜಿ ಅಧ್ಯಕ್ಷ ಡಾ. ನಂದೀಶ್ ಹಂಚೆ, ಸೋಸಲೆ ಸಿದ್ದಪ್ಪ ಅವರ ಸೊಸೆ ಸಿದ್ದಮ್ಮ, ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ), ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ. ಬಸವೇಗೌಡ ಇತರರು ಉಪಸ್ಥಿತರಿದ್ದರು.

ಕನಕದಾಸರ ಸಂದೇಶದಿಂದ ಮಾತ್ರ ಜಾತೀಯತೆ ತೊಲಗಿಸಲು ಸಾಧ್ಯ

● ವಿಧಾನ ಪರಿಷತ್ ಸದಸ್ಯ ಡಾ. ತಿಮ್ಮಯ್ಯ ಬಲವಾದ ಪ್ರತಿಪಾದನೆ
● ಕನಕದಾಸರ ಜಯಂತಿ; ಸಾಧಕರಿಗೆ 'ಕನಕ ಶ್ರೀ' ಪ್ರಶಸ್ತಿ ಪ್ರದಾನ

ಮೈಸೂರು, ನ.10(ಎಂಟಿವೈ)– ಸಂತಕವಿ ಭಕ್ತ ಕನಕದಾಸರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಬೇರೂರಿರುವ ಜಾತೀಯತೆ ತೊಡೆದು ಹಾಕಬಹುದು ಎಂದು ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಂತಶ್ರೀ ಕನಕದಾಸರ ಜಯಂತಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರಿಗೆ 'ಕನಕ ಶ್ರೀ' ಪ್ರಶಸ್ತಿ ಪದಾನ ಮಾಡಿ ಮಾತನಾಡಿದ ಅವರು, ಕನಕದಾಸರು ನಾಡಿಗೆ ಕೊಟ್ಟ ಕೊಡುಗೆ ಅನನ್ಯ. ಕುಗ್ರಾಮದಲ್ಲಿ ಸಾಮಾನ್ಯ ಬಡ ಕುಟುಂಬದಲ್ಲಿ ಜನಿಸಿದರು. ಸ್ಥಳೀಯ ಪ್ರಾಂತ್ಯದಲ್ಲಿ ಸೈನಿಕರಾಗಿ ಸೇವೆಗೆ ಸೇರಿ, ಯುದ್ಧದಲ್ಲಿ ಪಾಲ್ಗೊಂಡು ಹಿಂಸಾತ್ಮಕ ದೃಶ್ಯ ಕಂಡು ಕೊರಗುತ್ತಾರೆ. ಬಳಿಕ ಅವರ ಯೋಚನಾ ದಿಕ್ಕು ಬದಲಾಗುತ್ತದೆ. ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ ಕವಿಗಳಾಗಿ, ಸಮಾಜಮುಖಿಯಾಗಿ ಕೆಲಸ ಮಾಡಿ, ಸಂತರಾಗುವ ಮೂಲಕ ಸಮಾಜದ ಅಂಕು–ಡೊಂಕು ತಿದ್ದುವ ಕೆಲಸ ಮಾಡಿದರು. ಯುದ್ಧದಲ್ಲಿ ಪಾಲ್ಗೊಂಡಿದ್ದೇ ಅವರ ಜೀವನದಲ್ಲಿ ಬದಲಾವಣೆ ಸಾಧ್ಯವಾಯಿತು ಎಂದರು.

ಮನುಷ್ಯರು ನೀರು, ಗಾಳಿ ಸೇವಿಸಿ,



ಬೆಳಕು ಸೇರಿದಂತೆ ಪ್ರಕೃತಿದತ್ತವಾಗಿ ಸಿಗುವ ಎಲ್ಲವನ್ನು ಬಳಸಿಕೊಂಡು ಪ್ರಕೃತಿಗೆ ಏನನ್ನೂ ಹಿಂದಿರುಗಿಸುವುದಿಲ್ಲ. ಮಾನವರಲ್ಲಿ ಸಾಕಷ್ಟು ಭೇದಭಾವ ಇರುವುದನ್ನು ನಾವು ಕಾಣುತ್ತೇವೆ. ಜಾತೀಯತೆ, ಅಸೂಯೆ ಮನೋಭಾವ ಹೆಚ್ಚಾಗಿದೆ. ಇದನ್ನು ಗಮನಿಸಿದ ಭಕ್ತ ಕನಕದಾಸರು 'ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ' ಎಂದು ಆ ಕಾಲದಲ್ಲೇ ಜಾಗೃತಿ ಮೂಡಿಸುವ ಮೂಲಕ ಜಾತೀಯತೆಯನ್ನು ತೊಡೆದು ಹಾಕಲು ಪ್ರಯತ್ನಿಸಿದರು. ನಮ್ಮ ದೇಶದಲ್ಲಿ ಹುಟ್ಟಿನಿಂದಲೇ ಜಾತಿ ಗುರುತಿಸಲಾಗುತ್ತಿದೆ. ಇಂತಹವರಿಗಾಗಿ ಕನಕರು ಸಜ್ಜನರಾಗಿ ಎಂಬ ಸಂದೇಶ ನೀಡಿದ್ದಾರೆ. ಜಾತೀಯತೆಯನ್ನು ತೊಡೆದು ಹಾಕಿ, ಎಲ್ಲರೂ ಸುಖೀ, ಸಮೃದ್ಧವಾಗಿ ಬದುಕುವಂತೆ ನೀತಿ ಪಾಠ ಹೇಳಿದರು. ಎಲ್ಲರನ್ನು ಸಮಾನವಾಗಿ ಕಂಡು, ಸಮ ಸಮಾಜ ನಿರ್ಮಿಸಿ, ಸೌಹಾರ್ದತೆಯ ದೇಶ ನಿರ್ಮಾಣ ಮಾಡುವ ಕನಸನ್ನು, ಕನಕದಾಸರು ಕಂಡಿದ್ದರು ಎಂದು ಹೇಳಿದರು.

ಕನಕದಾಸರು ಹೇಳಿದಂತೆ ಎಲ್ಲರೂ ಜಾತಿಯನ್ನು ಮೀರಿ ಸಮಾಜಮುಖಿಯಾಗಿ ಬಾಳ್ವೆ ನಡೆಸಬೇಕು. ಪ್ರಸ್ತುತ ಸಂದರ್ಭದಲ್ಲಿ ಅವರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕನಕಶ್ರೀ ಪ್ರಶಸ್ತಿ ಪಡೆದವರು ಮುಂದಿನ ದಿನಗಳಲ್ಲಿ ಧ್ವನಿ ಇಲ್ಲದವರಿಗೆ, ಅಸಂಘಟಿತ ವರ್ಗ, ಅಸಹಾಯಕರು, ಶೋಷಿತ ಸಮುದಾಯದ ಪರವಾಗಿ ಕೆಲಸ ಮಾಡುವ ಶಕ್ತಿ ಪ್ರಶಸ್ತಿ ಪುರಸ್ಕೃತರಿಗೆ ಲಭಿಸಲಿ ಎಂದು ಆಶಿಸಿದರು.

ಇದೇ ವೇಳೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು ಮಾತನಾಡಿ, ಸಮಾಜದಲ್ಲಿ ಸುಧಾರಣೆ ತರಲು ಪ್ರಯತ್ನಿಸಿದರು. ಜಾತೀಯತೆ ಎಂಬ ಅನಿಷ್ಟ ಪದ್ಧತಿಯನ್ನು ತೊಡೆದು ಹಾಕಲು ಪಣ ತೊಟ್ಟಿದ್ದರು. ತಮ್ಮದೇ ಶೈಲಿಯ ಕೀರ್ತನೆಗಳ ಮೂಲಕ ಜನರ ಮನಮುಟ್ಟುವಂತೆ ಸಂದೇಶ ಸಾರುವುದರೊಂದಿಗೆ ಪರಿವರ್ತನೆಗೆ ಮುಂದಾಗಿದ್ದರು. ಕನಕದಾಸರ ಕೀರ್ತನೆಗಳು ಎಲ್ಲಾ ಕಾಲಕ್ಕೂ ಅನ್ವಯಿಸಲಿದೆ. ಅಂತಹ ಸಂತಶ್ರೇಷ್ಠರ ತತ್ವ ಸಂದೇಶ ಪಾಲನೆ ಅಗತ್ಯ ಎಂದರು

ಕಾರ್ಯಕ್ರಮದಲ್ಲಿ ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಗೌರವ ಕಾರ್ಯದರ್ಶಿ ಬಿ.ವಿ. ಶ್ರೀನಿವಾಸಗುಪ್ತ, ಜಯದೇವ ಹೃದ್ರೋಗ ಸಂಸ್ಥೆಯ ಪ್ರಾಧ್ಯಾಪಕ ಡಾ. ದಿನೇಶ್, ಮೈಸೂರು ವಿವಿ ತಳಿ ವಿಜ್ಞಾನ ಮತ್ತು ಜಿನೋಮಿಕ್ಸ್ ವಿಭಾಗದ ಮುಖ್ಯಸ್ಥೆ ಸುತ್ತೂರು ಎಸ್.ಮಾಲಿನಿ, ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ನಿವೃತ್ತ ಅಧಿಕಾರಿ ಡಾ. ಕಾ.ರಾಮೇಶ್ವರಪ್ಪ, ದಾರಿದೀಪ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ಅವರಿಗೆ ಕನಕ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಡಾ. ಉಮೇಶ್, ಕೆ.ರಘುರಾಂ ವಾಜಪೇಯಿ, ಡಿ.ನಾಗಭೂಷಣ್, ಎ.ಟಿ.ನಾಗೇಶ್, ಎಂ.ಚಂದ್ರಶೇಖರ್, ಯೋಗೇಶ್ ಉಪ್ಪಾರ್, ಹೆಚ್.ಎಸ್.ಪ್ರಕಾಶ್, ರವಿನಂದನ್, ಎನ್.ಆರ್.ನಾಗೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹಸಿರು ನಮ್ಮ ಉಸಿರು

8ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನೀವು ನಮ್ಮ ಮನಸಿನಲ್ಲಿ ಹಸಿರಾಗುತ್ತೀರಿ

ದುಃಖತಪ್ತರು:
ಮಗಳು ವಿಜಯ ಕುಮಾರಿ ಎಂ.ಜೆ,
ಅಳಿಯ ರಾಘವೇಂದ್ರ ಸ್ವಾಮಿ.ಜೆ, ಮೊಮ್ಮಗ ಪುನೀತ್.ಆರ್

ಕೆ.ಎಸ್.ಜಯರಾಮ್ (ಕಿಕ್ಕೇರಿ)
(ಚಲನಚಿತ್ರ ಹಂಚಿಕೆದಾರರು, ಮೈಸೂರು)




12ನೇ ವರ್ಷದ ಸಂಸ್ಮರಣೆ

ಮತ್ತೆ ಹುಟ್ಟಿಬಾ ಗೆಳೆಯ

ಎಂ. ಚಿಕ್ಕೂಸಪ್ಪ ಆಲೂರು

ದುಃಖತಪ್ತರು: ಚನ್ನಪ್ಪ ದೊಡ್ಡರಾಯಪೇಟೆ, ಜೆ.ಪಿ. ನಗರ, ಮೈಸೂರು

6ನೇ ವರ್ಷದ ಪುಣ್ಯಸ್ಮರಣೆ



H. ಕರಿಬಸಣ್ಣನವರು

ಹೆಚ್. ಕರಿಬಸವಣ್ಣನವರು (ಚಿಕ್ಕಾಡನಹಳ್ಳಿ) ಮಾಜಿ ಅಧ್ಯಕ್ಷರು, ಕೃಷಿ ಪತ್ತಿನ ಸಹಕಾರ ಸಂಘ, ಮನುಗನಹಳ್ಳಿ ಮಾಜಿ ಅಧ್ಯಕ್ಷರು, ಹಾಲು ಉತ್ಪಾದಕರ ಸಂಘ, ಚಿಕ್ಕಾಡನಹಳ್ಳಿ,

ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಕೋರುವ,
ನಿಮ್ಮ ಮಗಳು ಹೆಚ್.ಕೆ. ಸುಜಾತ. ಫೋ: 9632145537

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಪುರಸಭಾ ಕಾರ್ಯಾಲಯ, ಬೇಲೂರು

E-mail: itstaff_ulb_belur@yahoo.co.in,
townmunicipal.belur@gmail.com ದೂರವಾಣಿ: 08177–222221
ಸಂಖ್ಯೆ:ಪು.ಬೇ/ಜೆ.ಇ/ಟೆಂಡರ್–02/2022–23 ದಿನಾಂಕ:09.11.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

2018–19ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ವಿವೇಚನಾ ನಿಧಿಯಡಿ ಎಸ್.ಎಫ್.ಸಿ, ವಿಶೇಷ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರುಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ 1)ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 28–11–2022ಸಂಜೆ 5.30 ಗಂಟೆಗೆ 2)ಟೆಂಡರ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 30–11–2022 ಬೆಳಿಗ್ಗೆ 11.30 ಗಂಟೆಗೆ 3)ಕೆಲಸ ಮುಗಿಸಲು ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) (ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ–ಪ್ರಕೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರ ಪಡಿಸಲಾಗುವುದು) ಕ್ರ.ಸಂ1)ಕಾಮಗಾರಿ ವಿವರ DMA/2022-23/BD/WORK INDENT138815 ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ ಲಕ್ಷಗಳಲ್ಲಿ):8,44,860/– ಇ.ಎಂ.ಡಿ. ಮೊತ್ತ 21,122/– 2)DMA/2022-23/BD/WORK INDENT138810 (Reserved for SC Category Contractor) ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ ಲಕ್ಷಗಳಲ್ಲಿ):25,37,026/– ಇ.ಎಂ.ಡಿ. ಮೊತ್ತ 25,370/– 3)DMA/2022-23/BD/WORK INDENT138808 ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ ಲಕ್ಷಗಳಲ್ಲಿ):33,86,669/– ಇ.ಎಂ.ಡಿ. ಮೊತ್ತ 67,733/– 4)DMA/2022-23/RD/WORK INDENT138811 (Reserved for ST Category Contractor) ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ ಲಕ್ಷಗಳಲ್ಲಿ):25,37,870/– ಇ.ಎಂ.ಡಿ. ಮೊತ್ತ 25,379/– 5)DMA/2022-23/RD/WORK INDENT138807 ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ ಲಕ್ಷಗಳಲ್ಲಿ):33,80,821/– ಇ.ಎಂ.ಡಿ. ಮೊತ್ತ 67,616/– ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕಾಮಗಾರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಮತ್ತು http://eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– (ಸಿ.ಎನ್.ದಾನಿ)
ಅಧ್ಯಕ್ಷರು, ಪುರಸಭೆ,
ಬೇಲೂರು

ಸಹಿ/– (ಎಸ್.ಎಂ.ಸುಜಯಕುಮಾರ್)
ಮುಖ್ಯಾಧಿಕಾರಿ,
ಪುರಸಭೆ, ಬೇಲೂರು

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/711/2022–23



ಯೋಗಕ್ಷೇಮ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.

ನಂ. 105, 'ಕ್ಷೇಮಧಾಮ', ಯೋಗಕ್ಷೇಮ ಮೇನ್ ರಸ್ತೆ, ಜೀವ ವಿಮಾನಗರ (ಎಲ್ ಐ ಸಿ ಕಾಲೋನಿ), ಶ್ರೀರಾಂಪುರ 2ನೇ ಹಂತ, ಮೈಸೂರು –570034.

ಸಾರ್ವಜನಿಕ ಪ್ರಕಟಣೆ

ಯೋಗಕ್ಷೇಮ ಹೌಸಿಂಗ್ ಕೋ–ಆಪರೇಟವ್ ಸೊಸೈಟಿ (ಲಿ). ಮೈಸೂರು ಇವರು ಜೀವವಿಮಾ ನೌಕರರು ಮತ್ತು ಜೀವ ವಿಮಾ ಪ್ರತಿನಿಧಿ ಹಾಗೂ ಇತರರಿಗಾಗಿ ಮುಡಾ ನಿಯಾಮಾವಳಿಗಳು (MUDA NORMS) ಪ್ರಕಾರ "ಜೀವ ವಿಮಾ ನಗರ 5ನೇ ಹಂತದ ಬಡಾವಣೆ" ನಿರ್ಮಿಸಿ ನಿವೇಶನಗಳನ್ನು ಅಭಿವೃದ್ಧಿಪಡಿಸಿ ವಿತರಿಸಲು ತೀರ್ಮಾನಿಸಲಾಗಿದೆ. ಆಸಕ್ತ DEVELOPERSಗಳು ಮುಡಾ ಅಥವಾ DTCP ಪರಿಮಿತಿಯೊಳಗೆ ಅನ್ಯಕ್ರಾಂತವಾದ (ALINATED) ಸ್ವತ್ತು ಅಥವಾ ಅನ್ಯಕ್ರಾಂತಕ್ಕೆ ಅರ್ಜಿ ಸಲ್ಲಿಸಿರುವ ಸ್ವತ್ತುಗಳು ಸುಮಾರು 25 ಎಕರೆ ಪ್ರದೇಶದಲ್ಲಿ TURN KEY BASIS. ಪ್ರಕಾರ ಬಡಾವಣೆ ನಿರ್ಮಿಸಿ ಅಭಿವೃದ್ಧಿ ಪಡಿಸಿ (DEVELOPMENT) ಒಂದು ಚದರ ಅಡಿಗೆ ನಿಗದಿತ ಮೊತ್ತವನ್ನು ನಮೂದಿಸಿ ಮೊಹರು ಮಾಡಿದ ಲಕೋಟೆಯೊಂದಿಗೆ ಮೇಲ್ಕಂಡ ವಿಳಾಸಕ್ಕೆ 7 ದಿವಸಗಳೊಳಗಾಗಿ ಸಲ್ಲಿಸುವುದು.

ಸ್ಥಳ: ಮೈಸೂರು
ದಿನಾಂಕ: 05–11–2022

ಸಹಿ/– ಅಧ್ಯಕ್ಷರು
(ಎನ್. ಎಲ್ . ಶೇಖರ್)
(94480 56075)



ಪ್ರತಿ ಸಂದರ್ಭಕ್ಕೂ ಶೈಲೀಕೃತ ವಜ್ರದ ಆಭರಣಗಳು!

Since 1925 A. SHANKARA CHETTY & SONS
PLATINUM DIAMOND GOLD SILVER JEWELLERS

ಕೆ ಆರ್ ವೃತ್ತ, ಮೈಸೂರು | ಟೆಲಿಫೋನ್ : 0821 - 2423882 | ಮೊಬೈಲ್ : 88808 66661

EMI ಸೌಲಭ್ಯ ಮತ್ತು ವ್ಯಾಲೆಟ್ ಪಾರ್ಕಿಂಗ್ ಲಭ್ಯವಿದೆ | ಸಮಯ : ಬೆಳಗ್ಗೆ 11 ರಿಂದ ರಾತ್ರಿ 8 ರವರಗೆ

CENTRAL SERICULTURAL RESEARCH & TRAINING INSTITUTE

(Central Silk Board)
Min. of Textiles - Govt. of India)
Manandavadi Road, Srirampura, Mysore-570 008

No. CSB/RTI/ES/Semi-Skilled Worker/2022 Dated: 31-10-2022

WALK-IN INTERVIEW FOR ENGAGING SEMI-SKILLED WORKER

A walk-in-interview will be held on 16.11.2022 at 9.30 am for engaging 01 (One) Semi-skilled worker purely on temporary basis for a period of 02 year and 02 months (upto Jan 2025) or completion of project whichever is earlier under CSB approved project "Evaluation of new bivoltine double hybrid, BFCexploitationxBFC10 at farmers level for authorisation for commercial exploitation" (PC: AIE01026MI) at Central Sericultural Research and Training Institute, Srirampura, Mysuru-570 008. Interested can also visit our website www. cstrimys.res.in for details.

Sd/- (Dr. Babulal), Director

Nypunya School of Excellence

ಆರ್.ಟಿ. ನಗರ, ಮೈಸೂರು

ಅಂತರಶಾಲಾ ಚಿತ್ರಕಲಾ ವಿಜೇತರಿಗೆ ಬಹುಮಾನ ವಿತರಣೆ

ನೈಪುಣ್ಯ ದಸರಾ ಪ್ರಶಸ್ತಿ ಪ್ರದಾನ

ದಿನಾಂಕ: 11–11–2022 ನೇ ಶುಕ್ರವಾರ ಸಮಯ: 4.30pm
ಸ್ಥಳ: ಬಂಟ್ಸ್ ಕನ್ವೆನ್‌ಶನ್ ಹಾಲ್, ವಿಜಯನಗರ 3ನೇ ಸ್ಟೇಜ್, ಮೈಸೂರು – 570030

- ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ವಿದ್ಯಾರ್ಥಿ ಪೋಷಕರಿಗೆ ಪ್ರೇರಣಾ ನುಡಿ
- ನೈಪುಣ್ಯ ಪ್ರಥಮ ವಾರ್ಷಿಕ ಸಂಭ್ರಮ

ಭಾಗವಹಿಸುವ ವಿಶೇಷ ಅತಿಥಿಗಳು



ಡಾ. ಗುರುರಾಜ್ ಕರ್ಜಗಿ
ಅಧ್ಯಕ್ಷರು
ಅಕಾಡೆಮಿ ಆಫ್ ಕ್ರಿಯೇಟಿವ್ ಟೀಚಿಂಗ್
ಬೆಂಗಳೂರು



ಡಾ. ಆರ್. ಬಾಲಸುಬ್ರಹ್ಮಣ್ಯಂ
ಸದಸ್ಯರು (ಮಾನವ ಸಂಪನ್ಮೂಲ)
ಸಾಮರ್ಥ್ಯ ನಿರ್ಮಾಣ ಆಯೋಗ
ಭಾರತ ಸರ್ಕಾರ

ದೂರವಾಣಿ ಸಂಖ್ಯೆ: +91 9108002966, 0821- 2340041

ಅಧ್ಯಕ್ಷತೆ ಆರ್ ರಘು

ಸರ್ವರಿಗೂ ಆದರದ ಸ್ವಾಗತ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)
(ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಬಿನಿ ನಾಲೆಗಳ ವಿಭಾಗ, ನಂಜನಗೂಡು, ಮೈಸೂರು ಜಿಲ್ಲೆ.
ದೂರವಾಣಿ /ಫ್ಯಾಕ್ಸ್ ಸಂಖ್ಯೆ 08221–226261 : Email : kedngd@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 14/2022–23 ದಿನಾಂಕ: 03–11–2022

ರೂ. 2518.68 ಲಕ್ಷದ "Scheme to Lift water from Nugu River Near Mullur Village to fill Hediyala & other Tanks in H.D.Kote (Now Sarguru) & Nanjangud Taluk" ಕಾಮಗಾರಿಗೆ ಕೆಡಬ್ಲ್ಯೂ – 6 ಅನುಸಾರ ಟರ್ನ್‌ಕೀ ಅನ್ವಯ ಟೆಂಡರ್ ಅನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ. ಮೊತ್ತ ಹಾಗೂ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ್ ಅನ್ನು ತೆರೆಯುವ ದಿನಾಂಕ ಹಾಗೂ ಇತರೆ ವಿವರಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: www.eproc.karnataka.gov.in ರಲ್ಲಿ ಪಡೆಯಬಹುದು. ಆರ್ಥಿಕ ಬಿಡ್ ಅನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕಬಿನಿ ನಾಲೆಗಳ ವಿಭಾಗ, ನಂಜನಗೂಡು

ಕೋಟ್ಯಾಂತರ ರೂಪಾಯಿ ಮೌಲ್ಯದ ಅಂತಾರಾಷ್ಟ್ರೀಯ ಗಾರ್ಮೆಂಟ್ಸ್

ವಿಶೇಷ ಬ್ರಾಂಡ್‌ಗಳ ಗಾರ್ಮೆಂಟ್ಸ್ ಮತ್ತು ಶೂಗಳು

ರಿಟೇಲ್ ಗ್ರಾಹಕರಿಗಾಗಿ ಮೊದಲ ಬಾರಿ ಮೈಸೂರಿನಲ್ಲಿ

ಮಾರಾಟ ಕೆಲವೇ ದಿನಗಳು ಮಾತ್ರ

ಅಂತಾರಾಷ್ಟ್ರೀಯ ಶೋರೂಂಗಳಿಗಾಗಿ ಸಿದ್ಧಪಡಿಸಲಾಗಿದ್ದ ಕೋಟ್ಯಾಂತರ ಸ್ಟಾಕ್‌ನ್ನು ಈಗ 80% ರವರೆಗೆ ದೊಡ್ಡ ರಿಯಾಯಿತಿ ದರದಲ್ಲಿ ಮೈಸೂರಿನ ರಿಟೇಲ್ ಗ್ರಾಹಕರಿಗೆ ನೇರ ಮಾರಾಟ ಮಾಡಲಾಗುತ್ತಿದೆ.

ಕಲರ್ ಪ್ಲಸ್, ಪಾರ್ಕ್ ಅವೆನ್ಯೂ, ಆ್ಯರೋ, ರೇಮಂಡ್ಸ್ ವ್ಯಾನ್‌ಹುಸೇನ್, ಮಾರ್ಕ್ಸ್ & ಸ್ಪೆನ್ಸರ್
ರೂ. 2000/– ರಿಂದ 4000/– ಮೌಲ್ಯದ ಶರ್ಟ್ಸ್ ಮತ್ತು ಪ್ಯಾಂಟ್ಸ್ ಕೇವಲ **ರೂ. 700/–** ಮಾತ್ರ

ರೂ. 2000/– ರಿಂದ 3000/– ಮೌಲ್ಯದ ಲೇಡೀಸ್ ಮತ್ತು ಪುರುಷರ ಗಾರ್ಮೆಂಟ್ಸ್
ಈಗ ಕೇವಲ **200/– ರಿಂದ 500/–** ಕ್ಕೆ ಪಡೆಯಿರಿ

ರೂ. 3000/– ರಿಂದ 10,000/– ಮೌಲ್ಯದ ಸ್ಪೋರ್ಟ್ಸ್ & ಫಾರ್ಮಲ್ ಲೆದರ್ ಶೂ
NIKE adidas PUMA Reebok HRX & many more ರೂ. **350/– ರಿಂದ 2000/–** ಕ್ಕೆ ಪಡೆಯಿರಿ

ರೂ. 2000/– ರಿಂದ 3000/– ಬೆಲೆಯ ಸ್ಕೂಲ್ & ಕಾಲೇಜು ಬ್ಯಾಗ್, ಜಿಮ್ ಬ್ಯಾಗ್ಸ್
ಕೇವಲ ರೂ. **400/– ರಿಂದ 500/–** ಕ್ಕೆ ಪಡೆಯಿರಿ

ರೂ. 500/– ರಿಂದ ರೂ. 1000 ಬೆಲೆಯ ಸೀರೆಗಳು, ಪೂನಂ ಸೀರೆ, ಜಾರ್ಜೆಟ್ ಸೀರೆಗಳು
ಝರಿ ಬಾರ್ಡರ್ & ಪ್ಲೇನ್ ಸೀರೆಗಳು – ಕೇವಲ ರೂ. **150/– ರಿಂದ 500/–** ಕ್ಕೆ ಪಡೆಯಿರಿ

ಪುರುಷರ ಮತ್ತು ಮಹಿಳೆಯರ ಒಳಉಡುಪುಗಳು, ಬ್ರಾ ಮತ್ತು ಪ್ಯಾಂಟಿ
ರೂ. **80/– ರಿಂದ 400/–** ಕ್ಕೆ ಪಡೆಯಿರಿ

ವಿಶೇಷ ಸೂಚನೆ : ಈ ಮಾರಾಟ ಕೇವಲ ರಿಟೇಲ್ ಗ್ರಾಹಕರಿಗೆ ಮಾತ್ರ, ಹೋಲ್‌ಸೇಲ್ ವರ್ತಕರಿಗೆ ಅವಕಾಶವಿಲ್ಲ.

ಈ ರಿಯಾಯಿತಿ ಕೊಡುಗೆ ಕೆಲವೇ ದಿನಗಳು ಮಾತ್ರ
ಸಮಯ : ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ

ಸ್ಥಳ : ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್
ಜೆ.ಎಲ್.ಬಿ. ರಸ್ತೆ, (ಮುಡಾ ಕಛೇರಿ ಪಕ್ಕದಲ್ಲಿ) ಮೈಸೂರು – 05



ಮೈಸೂರು ಮಿತ್ರ ಶುಕ್ರವಾರ 11, ನವೆಂಬರ್ 2022

ಕಬ್ಬಿಗೆ ಬೆಂಬಲ ಬೆಲೆಗೆ ಆಗ್ರಹಿಸಿ ಧರಣಿ ನಡೆಸುತ್ತಿದ್ದ ರೈತರಿಂದ

ಗೃಹ ಸಚಿವರ ಕಾರು ತಡೆಯಲು ಯತ್ನ

ಪೊಲೀಸರು–ರೈತರ ನಡುವೆ ಮಾತಿನ ಚಕಮಕಿ, ಬೆಂಗಳೂರು–ಮೈಸೂರು ರಸ್ತೆ ಸಂಚಾರ ಅಸ್ತವ್ಯಸ್ತ

ಮಂಡ್ಯ,ನ.10–ಕಬ್ಬಿಗೆ ಬೆಂಬಲ ಬೆಲೆ ನೀಡಬೇಕೆಂದು ಆಗ್ರಹಿಸಿ ಕಳೆದ ನಾಲ್ಕು ದಿನಗಳಿಂದ ಮಂಡ್ಯ ನಗರದ ಸರ್ ಎಂ. ವಿಶ್ವೇಶ್ವರಯ್ಯ ಪ್ರತಿಮೆ ಎದುರು ರೈತ ಸಂಘದ ವತಿಯಿಂದ ರೈತರು ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದು, ಗುರುವಾರ ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಕಾರು ಅಡ್ಡಗಟ್ಟಲು ಹೋರಾಟಗಾರರು ಮುಂದಾದಾಗ ಪೊಲೀಸರು ಹಾಗೂ ರೈತರ ನಡುವೆ ತಡೆ ಮಾತಿನ ಚಕಮಕಿ ನಡೆದು, ರಸ್ತೆ ಆರಂಭಿಸಿದ್ದರಿಂದ ಗಂಟೆಗಟ್ಟಲೇ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಳೆದ ನಾಲ್ಕು ದಿನಗಳಿಂದ ಮಂಡ್ಯದ ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ರೈತ ಸಂಘದ ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದರು. ಇಂದು ವಿವಿಧ ಕಾರ್ಯಕ್ರಮ ನಿಮಿತ್ತ ಮೈಸೂರಿನಲ್ಲಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ ಮಧ್ಯಾಹ್ನ 2.30ರ ಸಮಯದಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಮಂಡ್ಯ ಮಾರ್ಗವಾಗಿ ಹೊರಟಿದ್ದರು.

ಈ ವಿಚಾರ ತಿಳಿದ ರೈತರು ಪ್ರತಿಮೆ ಮುಂಭಾಗದಿಂದ ಮೈಸೂರು–ಬೆಂಗಳೂರು ರಸ್ತೆಗೆ ಅಡ್ಡಲಾಗಿ ನಿಂತು ಗೃಹ ಸಚಿವರ ಕಾರನ್ನು ತಡೆಯಲು ಮುಂದಾದರು. ಗೃಹ ಸಚಿವರ ಕಾರು ತಡೆಯ ಬಹುದೆಂಬ ಅರಿವಿಲ್ಲದ ಪ್ರತಿಭಟನಾ ಸ್ಥಳದಲ್ಲಿದ್ದ ಪೊಲೀಸರು, ರೈತರನ್ನು ಎಳೆದಾಡಿದರು. ರೈತರು ಜಮಾವಣೆಗೊಂಡಾಗ ಗೃಹ ಸಚಿವರ ಕಾರು ಹಾಗೂ ಎಸ್ಕಾರ್ಟ್ ವಾಹನ ಜಾಗವಿಲ್ಲದೇ ಒಂದು ನಿಮಿಷಗಳ ಕಾಲ ರಸ್ತೆಯಲ್ಲೇ ನಿಲ್ಲಬೇಕಾಯಿತು.

ಆಗ ಪ್ರತಿಭಟನಾಕಾರರು ಸಚಿವರ ಮುಂದೆಯೇ ಆಕ್ರೋಶವನ್ನು ವ್ಯಕ್ತಪಡಿಸಿ, ಅಡ್ಡಗಟ್ಟಲು ಮುಂದಾದಾಗ ಪಶ್ಚಿಮ ಪೊಲೀಸ್ ಠಾಣೆಯ ಸಿಪಿಐ ಸಂತೋಷ್‌ಕುಮಾರ್ ನೇತೃತ್ವದ ಪೊಲೀಸರು ರೈತರನ್ನು ಎಳೆದಾಡಿ ಗೃಹ ಸಚಿವರ ಕಾರು ಹೋಗಲು ಅನುವು ಮಾಡಿದರು. ಆಗ ರೊಚ್ಚಿಗೆದ್ದ ಪ್ರತಿಭಟನಾಕಾರರು ಸಿಪಿಐ ಸಂತೋಷ್‌ಕುಮಾರ್ ರೈತರ ಕೊರಳಿನ ಪಟ್ಟಿಗೆ ಕೈ ಹಾಕಿ ಎಳೆದಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿ, ರಸ್ತೆಯಲ್ಲೇ ಮಲಗಿ ಧರಣಿಗೆ ಮುಂದಾದರು.

ಎಸ್ಪಿ ಯತೀಶ್ ಹಾಗೂ ಡಿವೈ ಎಸ್ಪಿ ವೇಣುಗೋಪಾಲ್ ಸ್ಥಳಕ್ಕಾಗಮಿಸಿ, ರೈತರ ಮನವೊಲಿಸಲು ಮುಂದಾದರು. ಆದರೂ ಜಗ್ಗದ ಪ್ರತಿಭಟನಾಕಾರರು ಬೆಂಗಳೂರು ಮಾರ್ಗದ ರಸ್ತೆಯನ್ನು ತಡೆದರು. ಇದರಿಂದ ಬೆಂಗಳೂರು ರಸ್ತೆಗಂಟೆಗಟ್ಟಲೇ ಸಂಚಾರ ಅಸ್ತವ್ಯಸ್ತಗೊಂಡು ಬಹು ದೂರದವರೆಗೆ ವಾಹನಗಳು ಸಾಲುಗಟ್ಟಿದ್ದವು. ಬಳಿಕ ಎಸ್ಪಿ ಯತೀಶ್ ಪ್ರತಿಭಟನಾಕಾರರನ್ನು ಮನವೊಲಿಸಿದರು.

ಈ ವೇಳೆ ಮಾತನಾಡಿದ ರೈತ ಮುಖಂಡ ಮಧು ಚುದ್ಸ್, ಸಿಪಿಐ ಸಂತೋಷ್‌ಕುಮಾರ್ ದರ್ಪ ಇಂದು ನೆನ್ನೆಯದಲ್ಲ. ಈ ಹಿಂದೆ ಹಲವು ಬಾರಿ ಹೋರಾಟಗಾರರ ಮೇಲೆ ದೌರ್ಜನ್ಯ ಎಸಗಿದ್ದಾರೆ. ಅವರನ್ನು ಅಮಾನತು ಮಾಡಿ ಎಂದು ಕೇಳಬೇಕಿತ್ತು. ಆದರೆ ಕ್ಷಮೆಯಾಚನೆ ಮಾಡಿ ಎಂದು ಕೇಳುತ್ತಿದ್ದು, ಈ ಕೂಡಲೇ ಸಂತೋಷ್ ಕ್ಷಮೆಯಾಚಿಸಬೇಕೆಂದರು. ಪೊಲೀಸರು ಉದ್ದೇಶಪೂರ್ವಕವಾಗಿ ರೈತರನ್ನು ತಳ್ಳಿಲ್ಲ. ಈ ಬಗ್ಗೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ತಾವು ಗೃಹ ಸಚಿವರನ್ನು ತಡೆದು ಮನವಿ ಕೊಡುವುದು ಅಥವಾ ಅಳಲನ್ನು ಹೇಳಿಕೊಳ್ಳುವ ಬಗ್ಗೆ ನಮಗೆ ಮುಂಚೆಯೇ ಮಾಹಿತಿ ಕೊಡದ ಕಾರಣ ಈ ಘಟನೆ ಸಂಭವಿಸಿದೆ. ಗೃಹ ಸಚಿವರು ಸೇರಿದಂತೆ ಯಾವ ಸಚಿವರೂ ತೆರಳುವಾಗ ಅವರಿಗೆ ಸೂಕ್ತ ಭದ್ರತೆ ನೀಡುವುದು ನಮ್ಮ ಕರ್ತವ್ಯ ಅದನ್ನು ನಾವು ಮಾಡಿದ್ದೇವೆ ಎಂದು ಸಮಜಾಯಿಷಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಹೋರಾಟಗಾರರು, ಕಳೆದ ನಾಲ್ಕು ದಿನಗಳಿಂದ ಹೋರಾಟ ನಡೆಸುತ್ತಿದ್ದರೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ಮಂಡ್ಯಕ್ಕೆ ಬಂದರೂ ನಮ್ಮನ್ನು ಸೌಜನ್ಯಕ್ಕೂ ಭೇಟಿ ಮಾಡಿಲ್ಲ.

ಗೃಹ ಸಚಿವರು ಸೌಜನ್ಯಕ್ಕೂ ಸಹ ಕಾರು ನಿಲ್ಲಿಸಿ ನಮ್ಮ ಅಹವಾಲು ಸ್ವೀಕರಿಸಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಕುರುಬ ಸಮುದಾಯ ಸಂಘಟಿತರಾಗಲು ಸಲಹೆ



ಕೆ.ಆರ್.ಪೇಟೆ,ನ.10– ಕುರುಬ ಸಮುದಾಯದ ಬಂಧುಗಳು ಮೊದಲು ಸಂಘಟಿತರಾಗಬೇಕು ಹಾಗೂ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ಶೈಕ್ಷಣಿಕವಾಗಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಮುಂದುವರೆಯಬೇಕು ಎಂದು ಕರ್ನಾಟಕ ರಾಜ್ಯ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಸುಬ್ಬಣ್ಣ ಸಲಹೆ ನೀಡಿದರು.

ಅವರು ಪಟ್ಟಣದ ಸಾಹುಕಾರ್ ಚಿಕ್ಕಣ್ಣಗೌಡ ಸಮುದಾಯ ಭವನದಲ್ಲಿ ತಾಲೂಕು ಕುರುಬರ ಸಂಘದ ವತಿಯಿಂದ ಪದಾಧಿಕಾರಿಗಳ ಪದಗ್ರಹಣ, ಸಾಧಕರಿಗೆ ಕಾಯಕಯೋಗಿ ಪ್ರಶಸ್ತಿ, ಸಮುದಾಯದ ಹಿರಿಯರಿಗೆ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು.

ರಾಜ್ಯದಲ್ಲಿ ಮೂರನೇ ಅತಿ ದೊಡ್ಡ ಹಿಂದುಳಿದ ಸಮಾಜವಾಗಿರುವ ಕುರುಬ ಸಮಾಜದ ಇತಿಹಾಸದ ಬಗ್ಗೆ ಈಗಿನ ಪೀಳಿಗೆಗೆ ತಿಳಿಸಲು ಗ್ರಂಥಗಳ ಅಗತ್ಯವಿದೆ ಎಂದು ಪ್ರತಿಪಾದಿಸಿದ ಅವರು, ಕುರುಬ ಸಮಾಜದ ಅನೇಕ ಜನರಿಗೆ ಇತಿಹಾಸವೇ ತಿಳಿದಿಲ್ಲ. ಕುರುಬ ಸಮಾಜದ ಸಾಧನೆಯನ್ನು ಮಕ್ಕಳಿಗೂ ಮುಟ್ಟಿಸಬೇಕು. ಕಾಳಿದಾಸ, ದಾಸ ಶ್ರೇಷ್ಠ ಭಕ್ತ ಕನಕದಾಸ, ಸಂಗೊಳ್ಳಿ ರಾಯಣ್ಣ ಮೊದಲಾದ ಸಮಾಜದ ಸಾಧಕರು ಕುರುಬರನ್ನು ಮಾತ್ರವಲ್ಲದೆ ಇತರ ಸಮುದಾಯವನ್ನು ಎಚ್ಚರಿಸಿದ್ದಾರೆ ಹಾಗೂ ಮಾರ್ಗದರ್ಶನ ನೀಡಿದ್ದಾರೆ. ಅಂತಹ ಎಲ್ಲಾ ಮಹನೀಯರ ಇತಿಹಾಸ ತಿಳಿಸಲು ಗ್ರಂಥಗಳು ಬಹಳ ಪ್ರಯೋಜನಕಾರಿಯಾಗಿವೆ. ಎಲ್ಲಾ ತಳ ಸಮುದಾಯಗಳು ತಮ್ಮ ಕುಲದ ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಆರ್‌ಟಿಓ ಅಧಿಕಾರಿ ಯೂನಿಯನ್ ಅಧ್ಯಕ್ಷ ಮಲ್ಲಿಕಾರ್ಜುನ ಮಾತನಾಡಿ, ಯಾವುದೇ ಸಮುದಾಯದ ಸಂಘಗಳಲ್ಲಿ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಗೂ ಸಮಾಜದ ಜನರು ಒಡಕನ್ನು ತರದೇ ಅಭಿಪ್ರಾಯ ಹಾಗೂ ಭಿನ್ನಾಭಿಪ್ರಾಯಗಳನ್ನು ನಾಲ್ಕು ಗೋಡೆಗಳ ಮಧ್ಯೆ ಬಗೆಹರಿಸುವ ಮೂಲಕ ಸಂಘವನ್ನು ಸಂಘಟಿಸಿ ಸಮುದಾಯದ ಏಳಿಗೆಗಾಗಿ ಶ್ರಮಿಸುವಂತೆ ತಿಳಿಸಿದರು.

ವಿವಿಧ ಕ್ಷೇತ್ರದ ಸಾಧಕರಿಗೆ ಕಾಯಕ ಪ್ರಶಸ್ತಿ ನೀಡಿ ಗೌರವಿಸಲಾಯಿತಲ್ಲದೆ, 2021–2022ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಮುಡಾ ಅಧ್ಯಕ್ಷ ಕೆ. ಶ್ರೀಧರ್, ಕರ್ನಾಟಕ ಪ್ರದೇಶ ಕುರುಬ ಸಂಘದ ರಾಜ್ಯ ಉಪಾಧ್ಯಕ್ಷ ದೇವರಾಜು ಸುಬ್ಬರಾಯಪ್ಪ ರಾಜ್ಯ ಸಂಘಟನಾ ಕಾರ್ಯದರ್ಶಿ ಸಾವಿತ್ರಮ್ಮ, ಜಿಲ್ಲಾಧ್ಯಕ್ಷ ಎಂ.ಎಲ್. ಸುರೇಶ್, ತಾಲೂಕು ಸಂಘದ ಅಧ್ಯಕ್ಷ ಕೆ.ಕೆ. ಪುರುಷೋತ್ತಮ್, ಜಿಪಂ ಮಾಜಿ ಸದಸ್ಯ ಕೊಡಿಮಾರನಹಳ್ಳಿ ದೇವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ. ನಾಗೇಂದ್ರ ಕುಮಾರ್, ಪುರಸಭಾ ಸದಸ್ಯ ಸುಗುಣ ರಮೇಶ್, ಪಿ.ಜಿ. ಕುಮಾರ್, ಸಂಘದ ಕಾರ್ಯಾಧ್ಯಕ್ಷ ನಾಗರಾಜೇಗೌಡ, ಉಪಾಧ್ಯಕ್ಷ ನಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಡಾ.ಕೆ.ಎಸ್.ಚಂದ್ರು ಪದಾಧಿಕಾರಿಗಳಾದ ಚಂದ್ರೇಗೌಡ, ರುಕ್ಮಾಂಗದ, ಶಾವಣ್ಣ ಜಿ.ಸಿ.ಶಶಿಕಲಾ ರವಿ ಕುಮಾರ್, ದೇವರಾಜು ಡಿ, ಕುಮಾರ್, ಗೋವಿಂದೇಗೌಡ, ನಾಗೇಶ್, ನಿರ್ದೇಶಕರುಗಳಾದ ಸಣ್ಣನಿಂಗೇಗೌಡ, ಆಶಾ ದೇವರಾಜು, ಬೀಕನಹಳ್ಳಿ ಈರೇಗೌಡ, ನಂಜೇಗೌಡ, ವಿನೋದ್ ಕುಮಾರ್, ನಿಂಗಪ್ಪ ರಾಜು, ಸುನಿಲ್, ಯೋಗೇಗೌಡ ಇತರರು ಉಪಸ್ಥಿತರಿದ್ದರು.

ಯಶಸ್ವಿನಿ ಯೋಜನೆ ಸದುಪಯೋಗಕ್ಕೆ ಸಲಹೆ



ಪಾಂಡವಪುರ,ನ.10– ಡೈರಿ ಕಾರ್ಯದರ್ಶಿಗಳು ಯಶಸ್ವಿನಿ ಯೋಜನೆಯ ಸೌಲಭ್ಯವನ್ನು ಎಲ್ಲರಿಗೂ ತಲುಪಿಸುವ ಕೆಲಸ ಮಾಡಬೇಕು ಎಂದು ಮನ್‌ಮುಲ್ ನಿರ್ದೇಶಕ ಕೆ.ರಾಮಚಂದ್ರು ತಿಳಿಸಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಮನ್‌ಮುಲ್ ಒಕ್ಕೂಟದಿಂದ ನಡೆದ ಡೈರಿ ಕಾರ್ಯದರ್ಶಿಗಳಿಗೆ ಯಶಸ್ವಿನಿ ಯೋಜನೆಯ ಬಗ್ಗೆ ಅರಿವು ಕಾರ್ಯಕ್ರಮ ಹಾಗೂ ವಿಮೆ ಚೆಕ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಯಶಸ್ವಿನಿ ಯೋಜನೆ ಮಹತ್ತರವಾದ ಯೋಜನೆಯಾಗಿದೆ. ಪ್ರತಿಯೊಬ್ಬ ರೈತರು, ಸಾರ್ವಜನಿಕರಿಗೂ ಯಶಸ್ವಿನಿ ಯೋಜನೆಯಿಂದ ಸಾಕಷ್ಟು ಅನುಕೂಲವಿದೆ. ನಾವು ಸೇವಿಸುವ ಆಹಾರವೇ ವಿಷವಾಗುತ್ತಿದೆ. ಹಾಗಾಗಿ ಪ್ರತಿಯೊಬ್ಬ ಹಾಲು ಉತ್ಪಾದಕರು, ಷೇರುದಾರರು ಯಶಸ್ವಿನಿ ಮಾಡಿಸುವಂತೆ ಸಲಹೆ ನೀಡಿದರು. ಸಹಕಾರ ಸಂಸ್ಥೆಗಳು ದೇವಸ್ಥಾನಗಳಿದ್ದಂತೆ, ನಂದಿನಿ ಬಳಗದ ನಾವೆಲ್ಲರೂ ಒಂದೇ ಕುಟುಂಬ ಇದ್ದಂತೆ. ನಾವೆಲ್ಲರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಹಾಲಿನ ಗುಣಮಟ್ಟದಲ್ಲಿ ಯಾರೂ ಸಹ ರಾಜೀ ಮಾಡಿಕೊಳ್ಳಬೇಡಿ. ನಮ್ಮ ಮನೆಯವರೇ ಕಳಪೆ ಗುಣಮಟ್ಟದ ಹಾಲು ಪೂರೈಕೆ ಮಾಡಿದರು ವಾಪಸ್ಸು ಕಳುಹಿಸಿ, ಹಾಲಿನ ಗುಣಮಟ್ಟವನ್ನು ಕಾಯ್ದುಕೊಂಡು ಮೊದಲ ಸ್ಥಾನಕ್ಕೆ ಬರಬೇಕು. ಆ ನಿಟ್ಟಿನಲ್ಲಿ ಎಲ್ಲಾ ಸದಸ್ಯರು ಕಾರ್ಯನಿರ್ವಹಿಸಿ ಎಂದು ಮನವಿ ಮಾಡಿದರು.

ಇದೇ ವೇಳೆ ಅಕಾಲಿಕ ಮರಣ ಹೊಂದಿದ ರಾಸುಗಳ ಮಾಲೀಕರಿಗೆ ಹಾಗೂ ಮರಣ ಹೊಂದಿದ ಷೇರುದಾರರ ಕುಟುಂಬಕ್ಕೆ ವಿಮೆ ಸೌಲಭ್ಯದ ಪರಿಹಾರ ಹಣದ ಚೆಕ್ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗ ವಿಸ್ತರ್ಣಾಧಿಕಾರಿಗಳಾದ ಮಂಜುನಾಥ್, ಉಷಾ, ಜಗದೀಶ್ ಹಾಜರಿದ್ದರು.

ಖೋಖೋ ಪಂದ್ಯಾವಳಿಯಲ್ಲಿ ಬೆಳ್ಳಿ ಪದಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

ಭಾರತೀನಗರ.ನ.10– ಮಹಾರಾಷ್ಟ್ರದ ಸತಾರದಲ್ಲಿ ನಡೆದ 32ನೇ ರಾಷ್ಟ್ರೀಯ ಸಬ್ ಜೂನಿಯರ್ ಖೋಖೋ ಪಂದ್ಯಾವಳಿಯಲ್ಲಿ ಬಾಲಕ–ಬಾಲಕೀಯರ ವಿಭಾಗದ ಕರ್ನಾಟಕ ರಾಜ್ಯತಂಡವನ್ನು ಪ್ರತಿನಿಧಿಸಿ 2 ವಿಭಾಗಗಳಲ್ಲಿ ಬೆಳ್ಳಿಯ ಪದಕ ವಿಜೇತರಾದ ನಾಲ್ವರು ವಿದ್ಯಾರ್ಥಿಗಳನ್ನು ಮದ್ದೂರು ತಾಲೂಕು ಕೊಕ್ಕರೆಬೆಳ್ಳೂರು ಸರ್ಕಾರಿ ಪ್ರೌಢಶಾಲೆಯ ಶಾಲೆಯ ಆವರಣದಲ್ಲಿ ಗೌರವಿಸಲಾಯಿತು.

ಇದೇ ವೇಳೆ ಗ್ರಾಪಂ ಅಧ್ಯಕ್ಷೆ ಸುಂದ್ರಮ್ಮ, ಪಿಡಿಓ ರಂಜಿತ, ಗ್ರಾಪಂ ಸದಸ್ಯರಾದ ದಿವ್ಯ, ರಾಮಚಂದ್ರಶೆಟ್ಟಿ, ಶಶಿರೇಖಾ ರಾಜಣ್ಣ, ಸಿದ್ದಪ್ಪಾಜಿ, ಕುಮಾರ್, ಗ್ರಾ.ಪಂ ಸದಸ್ಯರು, ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಮುಖ್ಯಶಿಕ್ಷಕರು, ಮಕ್ಕಳ ಹಕ್ಕುಗಳ ಸಿಬ್ಬಂದಿ ವರ್ಗ ಸಹಶಿಕ್ಷಕರು ಉಪಸ್ಥಿತರಿದ್ದರು.

ಮುತ್ತತ್ತಿಗೆ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಭೇಟಿ

ಹಲಗೂರು,ನ.10– ಮಳವಳ್ಳಿ ತಾಲೂಕಿನ ಹಲಗೂರು ಬಳಿಯ ಪವಿತ್ರ ಧಾರ್ಮಿಕ ಸ್ಥಳ ಮುತ್ತತ್ತಿಗೆ ದಿವಂಗತ ನಟ ಪುನೀತ್ ರಾಜ್‌ಕುಮಾರ್ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಗುರುವಾರ ಬೆಳಗ್ಗೆ ನಟ ರಾಘವೇಂದ್ರ ರಾಜ್‌ಕುಮಾರ್ ಪುತ್ರ ನಟ ಯುವ ರಾಜ್‌ಕುಮಾರ್, ನಿರ್ದೇಶಕ ಸಂತೋಷ್ ಆನಂದ್‌ರಾಮ್ ಸೇರಿದಂತೆ ಕುಟುಂಬದ ಆಪ್ತರೊಂದಿಗೆ ದೇಗುಲಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಪುನೀತ್ ಅವರ ಒಂದು ವರ್ಷದ ಪುಣ್ಯತಿಥಿ ಹಾಗೂ ಗಂಧದಗುಡಿ ಚಿತ್ರ ಬಿಡುಗಡೆಯ ನಂತರ ವಿವಿಧ ದೇಗುಲಕ್ಕೆ ಭೇಟಿ ನೀಡುತ್ತಿರುವ ಅಶ್ವಿನಿ, ಮುತ್ತತ್ತಿಗೂ ಸಹ ಭೇಟಿ ನೀಡಿದ್ದಾರೆ.

ವರನಟ ಡಾ. ರಾಜ್‌ಕುಮಾರ್ ಅವರ ಆರಾಧ್ಯ ದೈವವಾಗಿರುವ ಮುತ್ತತ್ತಿಯ ಆಂಜನೇಯಸ್ವಾಮಿ ದೇಗುಲಕ್ಕೆ ಡಾ.ರಾಜ್‌ರನ್ನು ತಂದೆ–ತಾಯಿ ಕರೆದುಕೊಂಡು ಬರುತ್ತಿದ್ದರು. ಆ ಪರಂಪರೆ ಮುಂದುವರೆದು ಡಾ.ರಾಜ್‌ಕುಮಾರ್ ಸಹ ವರ್ಷಕ್ಕೆ ಎರಡು ಬಾರಿ ದೇಗುಲಕ್ಕೆ ಭೇಟಿ ಕೊಡುತ್ತಿದ್ದರು. ಬಳಿಕ ರಾಜ್ ಪುತ್ರರಾದ ಶಿವರಾಜ್‌ಕುಮಾರ್ ಹಾಗೂ ಪುನೀತ್



ರಾಜ್‌ಕುಮಾರ್ ಸಹ ಆಗಾಗ ದೇಗುಲಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸುತ್ತಿದ್ದರು. ಇದೀಗ ಪುನೀತ್ ರಾಜ್‌ಕುಮಾರ್ ಪತ್ನಿ ಅಶ್ವಿನಿ ಸಹ ತಮ್ಮ ಕುಟುಂಬದ ಆರಾಧ್ಯದೈವ ಮುತ್ತತ್ತಿಯ ಆಂಜನೇಯಸ್ವಾಮಿ ದೇಗುಲಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ್ದಾರೆ. ಈ ವೇಳೆ ದೇವಾಲಯದ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ಇದಕ್ಕೂ ಮೊದಲು ಹಲಗೂರಿನ ಹೆಸರಾಂತ ಬಾಬು ಷಡ್ ಹೋಟೆಲ್‌ಗೆ ಅಶ್ವಿನಿ, ಸಂತೋಷ್ ಹಾಗೂ ಯುವ ರಾಜ್‌ಕುಮಾರ್ ಭೇಟಿ ನೀಡಿ ಚಿಬ್ಲು ಇಡ್ಲಿ ಸವಿದರು.

ಮೂರನೇ ಪುಟದಿಂದ

ಬೆಂಗಳೂರಲ್ಲಿ ಇಂದು ಮೋದಿ ಹವಾ

ನಿರ್ಮಿಸಿದವರು ರಾಮ್‌ಸುತಾರಾ. ಇಡೀ ಭಾರತದಲ್ಲಿ ಅತ್ಯಂತ ಶ್ರೇಷ್ಠ ಶಿಲ್ಪಿ. ಅಹಮದಾಬಾದ್‌ನಲ್ಲಿರುವ ವಲ್ಲಭಭಾಯಿ ಪಟೇಲ್ ಅವರ ಐಕ್ಯತಾ ಮೂರ್ತಿಯನ್ನೂ ಹಾಗೂ ಅಂಬೇಡ್ಕರ್ ಅವರ ಅತೀ ಎತ್ತರದ ಮೂರ್ತಿಯನ್ನು ನಿರ್ಮಿಸಿದ ಖ್ಯಾತಿ ಅವರದ್ದು. ನಾಳೆ ಪ್ರಧಾನಿಮಂತ್ರಿಗಳು ಅವರಿಗೆ ಅಭಿನಂದನೆ ಸಲ್ಲಿಸಲಿದ್ದಾರೆ. ಅವರ ಕೈಚಳಕದಿಂದ ಇಷ್ಟು ಬೃಹತ್ ಮೂರ್ತಿ ಮೈದಳೆದಿದೆ. ಸಮಸ್ತ ಕನ್ನಡ ನಾಡಿನ ಜನತೆಯ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಹೇಳಿದರು.

ಪ್ರಧಾನಮಂತ್ರಿಗಳು ಬೆಳಗ್ಗೆ 9 ಗಂಟೆಗೆ ಹೆಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಅಲ್ಲಿಂದ ಶಾಸಕರ ಭವನದ ಆವರಣಕ್ಕೆ ಆಗಮಿಸಿ ಕನಕದಾಸರ ಪ್ರತಿಮೆಗೆ ಪುಷ್ಪ ನಮನ ಮಾಡಲಿದ್ದಾರೆ. ಕನಕ ಜಯಂತಿಯ ಸಂದರ್ಭದಲ್ಲಿ ಪ್ರಧಾನಮಂತ್ರಿ ಯವರು ಆಗಮಿಸಿರುವುದು ಯೋಗಾಯೋಗ. ಒಬ್ಬ ಹಿಂದುಳಿದ ವರ್ಗಕ್ಕೆ ಸೇರಿದ ಪ್ರಧಾನಮಂತ್ರಿಗಳು ಸಮಸ್ತ ಮಾನವಕುಲಕ್ಕೆ ದಾರಿದೀಪವಾಗಿರುವ ಕನಕದಾಸರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವುದು ನಮ್ಮೆಲ್ಲರಿಗೂ ಸಂತೋಷ ತಂದಿದೆ. ಪಕ್ಕದಲ್ಲಿಯೇ ಇರುವ ವಾಲ್ಮೀಕಿ ಪ್ರತಿಮೆಗೂ ಪುಷ್ಪಾರ್ಚನೆ ಮಾಡಲಿದ್ದಾರೆ ಎಂದರು. ನಂತರ ರೈಲ್ವೇ ನಿಲ್ದಾಣದಲ್ಲಿ ವಂದೇ ಭಾರತ್–ಹೈಸ್ಪೀಡ್ ರೈಲಿನ ಉದ್ಘಾಟನೆ ನೆರವೇರಿಸಲಿದ್ದಾರೆ. ಇನ್ನು ಮುಂದೆ ಬೆಂಗಳೂರು–ಮೈಸೂರು ಪ್ರಯಾಣದ ಅವಧಿ ಅತ್ಯಂತ ಕಡಿಮೆ ಆಗಲಿದೆ. ಇದಕ್ಕಾಗಿ ಪ್ರಯಾಣಿಕರ ಬಹಳ ದಿನಗಳ ಬೇಡಿಕೆ ಇತ್ತು. ಅದನ್ನು ಪ್ರಧಾನಿಗಳು ವಂದೇ ಭಾರತ್ ಯೋಜನೆಯಲ್ಲಿ ಸೇರಿಸಿದ್ದು, ಭಾರತದಲ್ಲಿ ಐದನೇ ರೈಲು ಹಾಗೂ ದಕ್ಷಿಣ ಭಾರತದಲ್ಲಿ ಮೊದಲ ಹೈಸ್ಪೀಡ್ ರೈಲನ್ನು ಉದ್ಘಾಟನೆ ಮಾಡುತ್ತಿರುವುದು ಆ ಭಾಗದ ಪ್ರಯಾಣಿಕರಿಗೆ ಹಾಗೂ ಆರ್ಥಿಕ ಬೆಳವಣಿಗೆಗೂ ಕೂಡ ಅನುಕೂಲವಾಗಲಿದೆ ಎಂದರು. ನಂತರ ವಿಮಾನ ನಿಲ್ದಾಣಕ್ಕೆ ಆಗಮಿಸಿ 2ನೇ ಟರ್ಮಿನಲ್ ಉದ್ಘಾಟಿಸಲಿ ದ್ದಾರೆ. ಟರ್ಮಿನಲ್–2 ಅಂತರರಾಷ್ಟ್ರೀಯ ಮತ್ತು ದೇಶೀಯ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಸುಮಾರು 25 ಲಕ್ಷ ಪ್ರಯಾಣಿಕರ ಸಾಮರ್ಥ್ಯವನ್ನು ಈ ಟರ್ಮಿನಲ್ ಹೊಂದಿದೆ. ಈಗಿರುವುದು 35 ಲಕ್ಷ ಸಾಮರ್ಥ್ಯ ವುಳ್ಳದ್ದು, ಇವೆರಡೂ ಸೇರಿದರೆ ದೇಶದ 2ನೇ ಅತೀ ದೊಡ್ಡ ಮತ್ತು ಅತೀ ಹೆಚ್ಚು ಫುಟ್‌ಪ್ರಿಂಟ್ ವಿಮಾನ ನಿಲ್ದಾಣವಾಗಲಿದೆ. ದೆಹಲಿಯ ನಂತರ ಅತೀ ದೊಡ್ಡ ವಿಮಾನ ನಿಲ್ದಾಣವಾಗಲಿದೆ. ಅದರ ಉದ್ಘಾಟನೆಯ ನಂತರ ಪ್ರಗತಿ ಪ್ರತಿಮೆ ಅನಾವರಣ ಮಾಡಿ ಸಾರ್ವಜನಿಕ ಸಭೆಗೆ ತೆರಳುತ್ತಾರೆ. ಅಲ್ಲಿ ಭಾಷಣ ಮುಗಿಸಿ ಮುಂದಿನ ಪ್ರಯಾಣ ಮಾಡಲಿದ್ದಾರೆ ಎಂದು ವಿವರಿಸಿದರು. ಕಾಂಗ್ರೆಸ್ ಪ್ರಧಾನಿಗಳ ಆಗಮನದ ಹಿನ್ನೆಲೆಯಲ್ಲಿ ಗುಂಡಿಗಳನ್ನು ಮುಚ್ಚುತ್ತಿರುವ ಬಗ್ಗೆ ಟೀಕೆಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಅದು ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆ. 3–4 ದಿನಗಳಲ್ಲಿ ಎಲ್ಲಾ ಗುಂಡಿಗಳನ್ನು ಮುಚ್ಚಲಾಗುವುದು ಎಂದರು.

ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಜಾರಿ

ಕಾರ್ಯಕ್ರಮದಲ್ಲಿ ಪದಾಧಿಕಾರಿಗಳಿಗೆ ಈ ಭರವಸೆ ನೀಡಿದರು. ಮೈಸೂರಿನ ಪಾರಂಪರಿಕ ಕಟ್ಟಡಗಳ ಸುರಕ್ಷತೆ, ರಸ್ತೆ ಗುಂಡಿಗಳ ಕುರಿತು, ಸಾರ್ವಜನಿಕ ಶೌಚಾಲಯ, ಉದ್ಯಾನವನಗಳಲ್ಲಿನ ಸಮಸ್ಯೆಗಳು, ಪಾರ್ಕಿಂಗ್ ಸಮಸ್ಯೆ, ತೆರಿಗೆ ಸೇರಿದಂತೆ ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಮಸ್ಯೆಗಳ ಸರಮಾಲೆಯನ್ನು ಸಂಸ್ಥೆಯ ಪದಾಧಿಕಾರಿಗಳು ಮೇಯರ್ ಶಿವಕುಮಾರ್ ಅವರ ಮುಂದಿಟ್ಟ ವೇಳೆ ಈ ಭರವಸೆ ನೀಡಿದರು.

ಎಲ್ಲಾ ಸಮಸ್ಯೆಗಳನ್ನು ಆಲಿಸಿದ ನಂತರ ಮಾತನಾಡಿದ ಮೇಯರ್, ಸೋಮವಾರ ಪಾಲಿಕೆ ಆಯುಕ್ತರೊಂದಿಗೆ ಚರ್ಚಿಸಿ, ಡಿಪಿಆರ್ ಮಾಡಿಸಿ ಶೀಘ್ರದಲ್ಲಿ ಈ ರಸ್ತೆಗಳಲ್ಲಿ ಪೇ ಅಂಡ್ ಪಾರ್ಕ್ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು. ಪಾರ್ಕಿಂಗ್ ಸಮಸ್ಯೆ ಇರುವುದು ಗಮನದಲ್ಲಿದ್ದು, ಇದಕ್ಕಾಗಿ ಈಗಾಗಲೇ ಟೌನ್ ಹಾಲ್ ಆವರಣದಲ್ಲಿ ಮಲ್ಟಿ ಲೆವೆಲ್ ಪಾರ್ಕಿಂಗ್ ಕಾಮಗಾರಿ ನಡೆಯುತ್ತಿದ್ದು, ಕಳೆದ ದಸರಾದಲ್ಲಿ 200 ಕಾರುಗಳ ಪಾರ್ಕಿಂಗ್‌ಗೆ ಬಳಸಿಕೊಳ್ಳಲಾಗಿತ್ತು. ಈ ವರ್ಷದ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳ್ಳಲಿದ್ದು, ನೂರಾರು ವಾಹನಗಳನ್ನು ಇಲ್ಲಿ ಪಾರ್ಕಿಂಗ್ ಮಾಡಬಹುದಾಗಿದೆ ಎಂದರು.

ಮೈಸೂರಿನ ರಸ್ತೆಗಳಲ್ಲಿನ ಗುಂಡಿಗಳ ಕುರಿತು ಮಾತನಾಡಿ, ನಗರದ ಕೆ.ಆರ್.ಕ್ಷೇತ್ರ ಮತ್ತು ಚಾಮರಾಜ ಕ್ಷೇತ್ರದ ಶಾಸಕರು ಸರ್ಕಾರದಿಂದ 300 ಕೋಟಿ ರೂ. ಗಿಂತ ಅಧಿಕ ಅನುದಾನ ತಂದಿದ್ದು, ಈಗಾಗಲೇ ಈ ಎರಡು ಕ್ಷೇತ್ರದಲ್ಲಿ ಡಾಂಬರೀಕರಣ ಆರಂಭವಾಗಿದೆ. ಆದರೆ, ಪಾಲಿಕೆಯಲ್ಲಿ ಹಣದ ಕೊರತೆ ಇರುವುದರಿಂದ ಬನ್ನಿಮಂಟಪ ಸೇರಿದಂತೆ ವಿವಿಧೆಡೆ ಡಾಂಬರೀಕರಣ ಮಾಡಲು ಸಾಧ್ಯವಾಗುತ್ತಿಲ್ಲ. ಡಾಂಬರೀಕರಣ ಮಾಡಲು ಸಾಧ್ಯವಾಗದಿದ್ದರೆ, ತಾತ್ಕಾಲಿಕವಾಗಿ ಗುಂಡಿಗಳಿಗೆ ಮಣ್ಣು ಹಾಕಿ ಮುಚ್ಚಲಾಗುತ್ತದೆ ಎಂದು ತಿಳಿಸಿದರು.

ಪಾರಂಪರಿಕ ಕಟ್ಟಡದ ಸಂರಕ್ಷಣೆಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಉತ್ತರಿಸಿ, ಪಾಲಿಕೆಯಲ್ಲಿ ನಾನು ಕುಳಿತುಕೊಳ್ಳುವ ಸ್ಥಳದಲ್ಲಿಯೇ ಮಳೆ ನೀರು ಸುರಿಯುತ್ತಿದ್ದು, ಮೈಸೂರು ನಗರದಾದ್ಯಂತ 216 ಪಾರಂಪರಿಕ ಕಟ್ಟಡಗಳಿವೆ. ಅವುಗಳಲ್ಲಿ ಸರ್ಕಾರ 131 ಕಟ್ಟಡವನ್ನು ಪಾರಂಪರಿಕ ಕಟ್ಟಡ ಎಂದು ಘೋಷಣೆ ಮಾಡಿದ್ದು, ಈ ಎಲ್ಲಾ ಕಟ್ಟಡಗಳು ಶಿಥಿಲ ಸ್ಥಿತಿಯಲ್ಲಿವೆ. ಈಗಾಗಲೇ ಪಾರಂಪರಿಕ ತಜ್ಞರೊಂದಿಗೆ ಚರ್ಚಿಸಲಾಗಿದ್ದು, ಈ ಎಲ್ಲಾ ಕಟ್ಟಡಗಳ ಬಗ್ಗೆ ಸಮಗ್ರ ವರದಿ ತಯಾರಾಗುತ್ತಿದೆ. ಈ ವರದಿಯೊಂದಿಗೆ ಸ್ಥಳೀಯ ಶಾಸಕರು ಮತ್ತು ಸಂಸದರ ಜೊತೆಗೆ ಎಲ್ಲರನ್ನು ಕರೆದುಕೊಂಡು ಮುಖ್ಯಮಂತ್ರಿಗಳ ಬಳಿ ತೆರಳಿ 100 ಕೋಟಿ ರೂ. ಅನುದಾನ ಬೇಡಿಕೆ ಇಡಲಿದ್ದೇವೆ ಎಂದರು. ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಎರಡು ಕಟ್ಟಡಗಳ ದುರಸ್ಥಿಗೆ ಅನುದಾನವಿದೆ. ಆದರೆ, ಅದರ ಬಗ್ಗೆ ವಿಭಿನ್ನವಾದ ಅಭಿಪ್ರಾಯವಿದ್ದು, ಈ ಕುರಿತು ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಹಾಗೂ ಯದುವೀರ್ ಅವರೊಡನೆ ಚರ್ಚಿಸಲು ಕಾಲಾವಕಾಶ ಕೇಳಿದ್ದು, ಸದ್ಯದಲ್ಲಿ ಅದು ಬಗೆಹರಿಯುವ ವಿಶ್ವಾಸವಿದೆ. ನಗರದಲ್ಲಿ ಶೀಘ್ರವಾಗಿ ವಾಣಿವಿಲಾಸ ಮಾರುಕಟ್ಟೆ, ಮಂಡಿ ಮಾರುಕಟ್ಟೆ, ದೊಡ್ಡ ಗಡಿಯಾರ ಹಾಗೂ ಪ್ರಮುಖ ಸ್ವಾಗತ ಕಮಾನುಗಳು ದುರಸ್ಥಿಯಾಗಬೇಕಿದೆ. ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಬಜೆಟ್‌ನಲ್ಲಿ ಮೈಸೂರಿನ ಪಾರಂಪರಿಕ ಕಟ್ಟಡಗಳಿಗಾಗಿ ಪ್ರತ್ಯೇಕ ಅನುದಾನ ಮೀಸಲಿ ಡುವಂತೆ ಮನವಿ ಮಾಡುತ್ತೇನೆ ಎಂದು ತಿಳಿಸಿದರು. ವ್ಯಾಪಾರಿಗಳ ಪರವಾನಿಗೆ ನವೀಕರಣದ ಸಿ.ಆರ್. ಶುಲ್ಕದ ಬಗ್ಗೆ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ ಸರ್ಕಾರದ ಮುಂದಿಡುತ್ತೇವೆ. ಬೀದಿನಾಯಿಗಳ ಸಮಸ್ಯೆ ಬಗೆಹರಿಸಲು ಪ್ರತ್ಯೇಕ ಪುನರ್ವಸತಿ ಕೇಂದ್ರ ನಿರ್ಮಾಣವಾಗುತ್ತಿದ್ದು, ಜನವರಿ ತಿಂಗಳೊಳಗೆ ಅದು ಪೂರ್ಣಗೊಳ್ಳಲಿದೆ ಎಂದರು. ನಂತರ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ವತಿಯಿಂದ ಮೇಯರ್ ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಎಂಸಿಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು, ಉಪಾಧ್ಯಕ್ಷ ಆರ್.ಆನಂದ್, ಖಜಾಂಚಿ ಅಶೋಕ್, ಗೌರವ ಕಾರ್ಯದರ್ಶಿ ಎ.ಕೆ.ಶಿವಾಜಿರಾವ್, ಪ್ರವಾಸೋದ್ಯಮ ಉಪಸಮಿತಿ ಅಧ್ಯಕ್ಷ ನಾರಾಯಣಗೌಡ ಸೇರಿದಂತೆ ವಿವಿಧ ಸಂಸ್ಥೆಗಳ ಅಧ್ಯಕ್ಷರು ಉಪಸ್ಥಿತರಿದ್ದರು.

ಇಂದು ಕನಕದಾಸರ ಜಯಂತಿ

ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಮುಖ್ಯ ಭಾಷಣಕಾರರಾಗಿ ಸಾಹಿತಿಗಳು ಹಾಗೂ ಪ್ರಾಧ್ಯಾಪಕರಾದ ಡಾ.ಚಿಕ್ಕಮಗಳೂರು ಗಣೇಶ ಅವರು ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್‌ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್, ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ಶಾಸಕರುಗಳು ಹಾಗೂ ನಿಗಮ ಮಂಡಳಿ ಅಧ್ಯಕ್ಷರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಂಡ್ಯದಲ್ಲಿ ಮತ್ತೆ ಮುಳ್ಳುಹಂದಿ ಪ್ರತ್ಯಕ್ಷ: ಜನತೆಯಲ್ಲಿ ಆತಂಕ

ಮಂಡ್ಯ,ನ.10–ನಗರದ ಕಲ್ಲಹಳ್ಳಿ ವಿ.ವಿ. ನಗರದ ಖಾಲಿ ನಿವೇಶನದ ಪೊದೆಯೊಂದರಲ್ಲಿ ಬುಧವಾರ ರಾತ್ರಿ ಮುಳ್ಳು ಹಂದಿಗಳು ಕಾಣಿಸಿಕೊಂಡಿದ್ದು, ನಗರದ ಜನತೆಯಲ್ಲಿ ಆತಂಕ ಸೃಷ್ಟಿಸಿದೆ. ವಿ.ವಿ.ನಗರದ 23ನೇ ಕ್ರಾಸ್‌ನಲ್ಲಿ ಮುಳ್ಳುಹಂದಿಗಳು ಕಾಣಿಸಿಕೊಂಡಿದ್ದವು. ಇದನ್ನು ನೋಡಿದ ಸಾರ್ವಜನಿಕರು ಅರಣ್ಯ ಇಲಾಖೆ ಹಾಗೂ ನಗರಸಭೆ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಸ್ಥಳೀಯರ ಮಾಹಿತಿಯ ಮೇರೆಗೆ ಸ್ಥಳಕ್ಕೆ ಆಗಮಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳು ಬಲೆಯನ್ನು ಬಳಸಿ ಒಂದು ಮುಳ್ಳುಹಂದಿಯನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಮತ್ತೊಂದು ಮುಳ್ಳು ಹಂದಿ ತಪ್ಪಿಸಿಕೊಂಡಿದೆ.




ಕಳೆದ ಕೆಲ ದಿನಗಳ ಹಿಂದೆಯೂ ನಗರದ ತಾವರೆಗೆರೆ ಬಡಾವಣೆಯ ಮನೆಯೊಂದರ ಬಳಿ ಮುಳ್ಳು ಹಂದಿಯೊಂದು ಕಾಣಿಸಿಕೊಂಡಿತ್ತು. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಧಾವಿಸಿ ಮುಳ್ಳುಹಂದಿಯನ್ನು ಹಿಡಿದು ಕಾಡಿಗೆ ಬಿಟ್ಟಿದ್ದರು.

ಮಾರನೇ ದಿನ ಅಶೋಕನಗರದ ಜೋಡಿ ರಸ್ತೆಯಲ್ಲೂ ಸಹ ರಾತ್ರಿ 10 ಗಂಟೆ ಸುಮಾರಿಗೆ ರಸ್ತೆಯಲ್ಲಿ ಮುಳ್ಳುಹಂದಿಗಳು ಓಡಾಡುತ್ತಿದ್ದವು. ಇದನ್ನು ಕಂಡ ಸಾರ್ವಜನಿಕರ ಗಲಾಟೆಯಿಂದ ಆತಂಕಗೊಂಡ ಮುಳ್ಳುಹಂದಿ ಚರಂಡಿಯೊಳಗೆ ಹೋಗಿ ಅವಿತುಕೊಂಡಿತ್ತು. ಕತ್ತಲಲ್ಲಿ ಮರೆಯಾದ ಮುಳ್ಳುಹಂದಿ ಗಾಗಿ ಹುಡುಕಾಟ ನಡೆಸಿದ್ದರು ಪತ್ತೆಯಾಗಿರಲಿಲ್ಲ. ಇದೀಗ ಕಲ್ಲಹಳ್ಳಿಯ ವಿ.ವಿ.ನಗರ ಬಡಾವಣೆಯಲ್ಲಿ 2 ಮುಳ್ಳುಹಂದಿಗಳು ಕಾಣಿಸಿಕೊಳ್ಳುವ ಮೂಲಕ ಮತ್ತೊಮ್ಮೆ ಆತಂಕ ಸೃಷ್ಟಿಸಿದೆ.

ನ.14, ವಿದ್ಯುತ್ ವ್ಯತ್ಯಯ

ಮೈಸೂರು,ನ.10–ಚೆಸ್ಕಾಂ ವತಿಯಿಂದ ನ.14 ರಂದು ಸೋಮವಾರ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ಬೆಮೆಲ್ ಬಡಾವಣೆ, ರಿಂಗ್ ರಸ್ತೆ, ಸಾಯಿ ಬಡಾವಣೆ, ಗುರುಕುಲ ಬಡಾವಣೆ, ಕೊಪ್ಪಲೂರು, ಮಂಜುನಾಥ ಬಡಾವಣೆ, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತಾಂತ್ರಿಕ ಸಮಿತಿ ವರದಿ ಆಧರಿಸಿ ಕಬ್ಬಿನ ಎಫ್‌ಆರ್‌ಪಿ ಶೀಘ್ರ ಪ್ರಕಟ

● ಸಕ್ಕರೆ ಸಚಿವ ಶಂಕರ್ ಪಾಟೀಲ್ ಮುನೇನಕೊಪ್ಪ ಭರವಸೆ ● 11 ದಿನಗಳ ಕಬ್ಬು ಬೆಳೆಗಾರರ ಅಹೋರಾತ್ರಿ ಧರಣಿ ಅಂತ್ಯ ● ನ.20ರೊಳಗೆ ಕಬ್ಬಿನ ಎಫ್‌ಆರ್‌ಪಿ ದರ ಏರಿಕೆ ಆಗದಿದ್ದರೆ ನ.21ರಿಂದ ಮತ್ತೆ ಧರಣಿ ಎಚ್ಚರಿಕೆ



ಬೆಂಗಳೂರಿನ ವಿಧಾನಸೌಧದಲ್ಲಿ ಗುರುವಾರ ಸಕ್ಕರೆ ಸಚಿವ ಶಂಕರ್ ಪಾಟೀಲ್ ಮುನೇನಕೊಪ್ಪ ಅಧ್ಯಕ್ಷತೆಯಲ್ಲಿ ಕಬ್ಬಿನ ಎಫ್‌ಆರ್‌ಪಿ ಸಂಬಂಧ ಸಭೆ ನಡೆಸಲಾಯಿತು.

ಜಿಲ್ಲಾ ಸಚಿವರಿಗೆ ಕಪ್ಪು ಬಾವುಟದ ಎಚ್ಚರಿಕೆ

ಸಕ್ಕರೆ ಸಚಿವರ ಭರವಸೆ ಹಿನ್ನೆಲೆಯಲ್ಲಿ ರಾಜ್ಯದ ವಿವಿಧೆಡೆ ಕಬ್ಬು ಬೆಳೆಗಾರರು ನಡೆಸುತ್ತಿದ್ದ ಅಹೋರಾತ್ರಿ ಧರಣಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಮಿತಿ ನಿರ್ಧರಿಸಿದ್ದು, ಅದರಂತೆ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಬಳಿ ನಡೆಸಲಾಗುತ್ತಿದ್ದ ಧರಣಿಯನ್ನೂ ಸದ್ಯಕ್ಕೆ ಕೈಬಿಡಲಾಗಿದೆ. ಆದರೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ರೈತರ ಸಭೆ ಕರೆದು ಸಮಸ್ಯೆ ಆಲಿಸದಿದ್ದರೆ ಅವರು ಯಾವುದೇ ಕಾರ್ಯಕ್ರಮಕ್ಕೆ ಆಗಮಿಸಿದರೂ ಕಪ್ಪು ಬಾವುಟ ಪ್ರದರ್ಶಿಸಲು ಸಂಘದ ಜಿಲ್ಲಾ ಸಮಿತಿ ನಿರ್ಧರಿಸಿದೆ ಎಂದು ಜಿಲ್ಲಾ ಸಮಿತಿ ಅಧ್ಯಕ್ಷ ಪಿ.ಸೋಮಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು, ನ.10 (ಎಸ್‌ಬಿಡಿ)– ಕಬ್ಬಿನ ಎಫ್‌ಆರ್‌ಪಿ ಹೆಚ್ಚಳ ಸಂಬಂಧ ತಾಂತ್ರಿಕ ಸಮಿತಿ ವರದಿ ಆಧರಿಸಿ ಮುಖ್ಯಮಂತ್ರಿಗಳು ಪರಿಷ್ಕೃತ ದರ ಘೋಷಿಸಲಿದ್ದಾರೆ ಎಂದು ಸಕ್ಕರೆ ಸಚಿವ ಶಂಕರ್ ಪಾಟೀಲ್ ಮುನೇನಕೊಪ್ಪ ಅವರು ಭರವಸೆ ನೀಡಿದ ಹಿನ್ನೆಲೆಯಲ್ಲಿ ಮೈಸೂರು ಸೇರಿದಂತೆ ರಾಜ್ಯದ ವಿವಿಧೆಡೆ ಕಬ್ಬು ಬೆಳೆಗಾರರು ನಡೆಸುತ್ತಿದ್ದ ಅಹೋರಾತ್ರಿ ಧರಣಿಯನ್ನು ತಾತ್ಕಾಲಿಕವಾಗಿ ಕೈಬಿಟ್ಟಿದ್ದಾರೆ.

ಕಬ್ಬಿನ ಎಫ್‌ಆರ್‌ಪಿ ಹೆಚ್ಚಳ ಹಾಗೂ ಇನ್ನಿತರ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಕಬ್ಬು ಬೆಳೆಗಾರರು 11 ದಿನಗಳಿಂದ ರಾಜ್ಯದ ವಿವಿಧೆಡೆ ಅಹೋರಾತ್ರಿ ಧರಣಿ ನಡೆಸುತ್ತಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಕಬ್ಬು ನಿಯಂತ್ರಣ ಮಂಡಳಿಯ ರೈತ ಸದಸ್ಯರು, ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರು ಹಾಗೂ ಇನ್ನಿತರ ಪದಾಧಿಕಾರಿಗಳೊಂದಿಗೆ ವಿಧಾನಸೌಧದಲ್ಲಿ ಗುರುವಾರ ಸಭೆ ನಡೆಸಿದ ಸಕ್ಕರೆ ಸಚಿವ ಶಂಕರ್ ಪಾಟೀಲ್ ಮುನೇನಕೊಪ್ಪ ಅವರು, ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ರಚನೆ ಮಾಡಿ, 5 ದಿನಗಳಲ್ಲಿ ಸಂಪೂರ್ಣ ವರದಿ ಪಡೆಯುತ್ತೇವೆ. ಬಳಿಕ ವರದಿ ಆಧರಿಸಿ ಮುಖ್ಯಮಂತ್ರಿಗಳು ನ.20ರೊಳಗೆ ಕಬ್ಬಿನ ಎಫ್‌ಆರ್‌ಪಿ ಹೆಚ್ಚುವರಿ ದರ ಘೋಷಣೆ ಮಾಡಲಿದ್ದಾರೆ ಎಂದು ಭರವಸೆ ನೀಡಿದರು.

ಸಚಿವರ ಭರವಸೆ ಮೇಲೆ ರಾಜ್ಯದ ವಿವಿಧೆಡೆ ಕಳೆದ 11 ದಿನಗಳಿಂದ ಅಹೋರಾತ್ರಿ ಧರಣಿ ನಡೆಸುತ್ತಿರುವ ಕಬ್ಬು ಬೆಳೆಗಾರರೊಂದಿಗೆ ಸಮಾಲೋಚಿಸಿ, ಧರಣಿಯನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ. ಆದರೆ ನ.20ರೊಳಗೆ ಕಬ್ಬಿನ ಎಫ್‌ಆರ್‌ಪಿ ಹೆಚ್ಚಿಸದಿದ್ದರೆ ಮರುದಿನ (ನ.21)ದಿಂದಲೇ ಮತ್ತೆ ಧರಣಿ ಮುಂದುವರೆಸಲು ತೀರ್ಮಾನಿಸಲಾಗಿದೆ. ಅಂದಿನಿಂದ ಮುಖ್ಯಮಂತ್ರಿಗಳ ನಿವಾಸದ ಎದುರು ಧರಣಿ ನಡೆಸುವುದಾಗಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.


ಕನಿಷ್ಠ 500 ರೂ. ಹೆಚ್ಚಿಸಿ: ರಸಗೊಬ್ಬರ, ಡೀಸೆಲ್, ಬಿತ್ತನೆ, ಕೂಲಿ, ಸಾಗಾಣಿಕೆ ವೆಚ್ಚ ಏರಿಕೆಯೊಂದಿಗೆ ಕಬ್ಬಿನ ಉತ್ಪಾದನಾ ವೆಚ್ಚ ಶೇ.20ರಷ್ಟು ಹೆಚ್ಚಾಗಿದೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್‌ಆರ್‌ಪಿಯನ್ನು ಇಳುವರಿ ಆಧಾರದಲ್ಲಿ ಪರಿಗಣಿಸುವುದರಿಂದ ರೈತರಿಗೆ ಕಳೆದ ವರ್ಷಕ್ಕಿಂತ ಪ್ರತಿ ಟನ್‌ಗೆ 50 ರೂ. ಕಡಿಮೆ ಸಿಗುತ್ತಿದೆ. ಪ್ರತಿ ಟನ್ ಕಬ್ಬಿಗೆ ಉತ್ತರಪ್ರದೇಶದಲ್ಲಿ 3500, ಪಂಜಾಬ್ ರಾಜ್ಯದಲ್ಲಿ 3800 ರೂ. ನಿಗದಿ ಮಾಡಿದ್ದಾರೆ. ಆಂಧ್ರಪ್ರದೇಶದಲ್ಲಿ 9.5 ಇಳುವರಿ ಬರುವ ಕಬ್ಬಿಗೆ ಎಫ್‌ಆರ್‌ಪಿಗಿಂತ ಹೆಚ್ಚುವರಿ 300 ರೂ. ನಿಗದಿ ಮಾಡಿದ್ದಾರೆ. ಹಾಗಾಗಿ ಕರ್ನಾಟಕ ದಲ್ಲಿ ಕನಿಷ್ಟ 500 ರೂ. ಹೆಚ್ಚಿಸಿ 3500 ರೂ. ನ್ಯಾಯೋಚಿತ ಹಾಗೂ ಲಾಭದಾಯಕ ಬೆಲೆ(ಎಫ್‌ಆರ್‌ಪಿ) ಅಥವಾ ರಾಜ್ಯ ಸಲಹಾ ಬೆಲೆ(ಎಸ್‌ಎಪಿ) ನಿಗದಿಪಡಿಸಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಗಿದೆ.

ವಿಳಂಬಕ್ಕೆ ಬಡ್ಡಿ: ಕಬ್ಬು ಕಟಾವು ಹಾಗೂ ಸಾಗಾಣಿಕೆ ವೆಚ್ಚ ಕಳೆದ ವರ್ಷಕ್ಕಿಂತ 250–300 ರೂ. ಏರಿಕೆಯಾಗಿರುವುದರಿಂದ ರೈತರಿಗೆ ಹೊರೆಯಾಗಿದೆ. ಹಾಗಾಗಿ ಎಥನಾಲ್ ಸೇರಿದಂತೆ ಕಬ್ಬಿನ ಉಪ ಉತ್ಪನ್ನಗಳ ಲಾಭ ಸೇರಿಸಿ ಎಸ್‌ಎಪಿ ನಿಗದಿಗೊಳಿಸಬೇಕು. ಕಬ್ಬು ಕಟಾವು ವಿಳಂಬ ಮಾಡುವ ಕಾರ್ಖಾನೆಗಳಿಂದ ರೈತರಿಗಾಗುತ್ತಿರುವ ನಷ್ಟ ತಪ್ಪಬೇಕು. ಕಟಾವು ವಿಳಂಬವಾದರೆ ಶೇ.15ರಷ್ಟು ಬಡ್ಡಿ ಸೇರಿಸಿ ರೈತರಿಗೆ ನೀಡಬೇಕು. ಆಗ ವಿಳಂಬದಿಂದ ತೂಕ ಹಾಗೂ ಇಳುವರಿಯಲ್ಲಾಗುವ ನಷ್ಟವನ್ನು ಸರಿದೂಗಿಸಿಕೊಳ್ಳಬಹುದು. ಕಟಾವು ಮಾಡುವ ಕಾರ್ಮಿಕರು ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಹಣಕ್ಕೆ ಒತ್ತಾಯಿಸಿದರೆ ಅದಕ್ಕೆ ಕಾರ್ಖಾನೆಗಳನ್ನು ಹೊಣೆ ಮಾಡಿ, ಹೆಚ್ಚುವರಿ ಕೂಲಿ ಮೊತ್ತವನ್ನು ವಸೂಲಿ ಮಾಡಿ ರೈತರಿಗೆ ನೀಡಬೇಕು.

ಸಹಾಯ ಧನ ಬೇಕು: ತಮಿಳುನಾಡಿನಲ್ಲಿ ಕಬ್ಬು ಸಾಗಾಣಿಕೆ ವೆಚ್ಚವನ್ನು ಸಂಪೂರ್ಣವಾಗಿ ಸಕ್ಕರೆ ಕಾರ್ಖಾನೆಗಳೇ ಭರಿಸುತ್ತವೆ. ಅಲ್ಲದೆ ರಾಜ್ಯ ಸರ್ಕಾರ ಪ್ರತಿ ಟನ್‌ಗೆ 190 ರೂ. ಸಹಾಯ ಧನವನ್ನು ರೈತರ ಖಾತೆಗೆ ಜಮಾ ಮಾಡುತ್ತದೆ. ತೆಲಂಗಾಣದಲ್ಲಿ ಕಬ್ಬು ಬೆಳೆಯಲು ಪ್ರತಿ ಎಕರೆಗೆ 5 ಸಾವಿರ ರೂ. ಸಹಾಯ ಧನ ನೀಡಲಾಗುತ್ತಿದೆ. ಆ ರೀತಿಯ ವ್ಯವಸ್ಥೆ ನಮ್ಮ ರಾಜ್ಯದಲ್ಲೂ ಅನುಷ್ಠಾನಗೊಳಿಸಬೇಕು. ಸಕ್ಕರೆ ಕಾರ್ಖಾನೆ ವತಿಯಿಂದಲೇ ಕಟಾವು ಕೂಲಿಕಾರರನ್ನು ಕರೆತರುವುದರ ಜೊತೆಗೆ ಸಾಗಾಣಿಕೆಗೆ ಬಳಸುವ ಲಾರಿ, ಟ್ರ್ಯಾಕ್ಟರ್ ಮಾಲೀಕರೂ ಅವರ ಅಧೀನದಲ್ಲೇ ಇರುತ್ತಾರೆ. ಹಾಗಾಗಿ ಕಟಾವು ಹಾಗೂ ಸಾಗಾಣಿಕೆ ಹೊಣೆಯನ್ನು ಸಂಪೂರ್ಣವಾಗಿ ಕಾರ್ಖಾನೆಗಳಿಗೆ ವಹಿಸುವ ಏಕರೀತಿಯ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ಕಬ್ಬಿನ ಬಿತ್ತನೆ, ದ್ವಿಪಕ್ಷೀಯ ಒಪ್ಪಂದ, ಜೇಷ್ಠತೆ ಆಧಾರದ ಕಟಾವು, ಕಬ್ಬಿನ ತೂಕ, ಹಣ ಪಾವತಿ, ಸಕ್ಕರೆ ಇಳುವರಿ ಹೀಗೆ ಎಲ್ಲಾ ಪ್ರಕ್ರಿಯೆಗಳೂ ಡಿಜಿಟಲೀಕರಣಗೊಳಿಸಬೇಕೆಂದು ಸಭೆಯಲ್ಲಿ ಒತ್ತಾಯಿಸಿರುವುದಾಗಿ ತಿಳಿಸಿದ್ದಾರೆ. ಸಭೆಯಲ್ಲಿ ಕೈಗಾರಿಕಾ ಇಲಾಖೆ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ, ಕಬ್ಬು ಅಭಿವೃದ್ಧಿ ಆಯುಕ್ತ ಶಿವಾನಂದ ಕೆಲಕೇರಿ, ರೈತ ಪ್ರತಿನಿಧಿಗಳಾದ ಸಿದ್ದುಗೌಡ ಮೋದಗಿ, ಬಸವರಾಜ್, ಮಂಡ್ಯ ವೆಂಕಟೇಶ್, ಬಸಪ್ಪ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ನಾಗರಾಜ್, ಮೈಸೂರು ಮಂಜುನಾಥ್ ಅಮೋಘ ಪಿಟೀಲು ವಾದನದೊಂದಿಗೆ 'ಭಾರತೀಯ ಹಬ್ಬಗಳು' ಶೀರ್ಷಿಕೆಯ 'ಸಾಂಸ್ಕೃತಿಕ ಉತ್ಸವ'ಕ್ಕೆ ತೆರೆ





ಮೈಸೂರು ಕಲಾಮಂದಿರದಲ್ಲಿ ನಡೆದ 'ಸಾಂಸ್ಕೃತಿಕ ಉತ್ಸವ'ದ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಿ, ಅಭಿನಂದಿಸಲಾಯಿತು. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಬಿವಿಬಿ ಬೆಂಗಳೂರು ಕೇಂದ್ರದ ನಿರ್ದೇಶಕಿ ನಾಗಲಕ್ಷ್ಮಿರಾವ್, ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಉಪಾಧ್ಯಕ್ಷ ಪ್ರೊ.ಸಿ.ನಾಗಣ್ಣ, ಸದಸ್ಯರಾದ ಸುದೀಂದ್ರ, ತುಳಸಿ ರಾಮಚಂದ್ರ ಮತ್ತಿತರರಿದ್ದರು. ಬಲ ಚಿತ್ರದಲ್ಲಿ ಖ್ಯಾತ ಪಿಟೀಲು ಸಹೋದರರಾದ ವಿದ್ವಾನ್ ಮೈಸೂರು ನಾಗರಾಜು ಹಾಗೂ ವಿದ್ವಾನ್ ಡಾ.ಮೈಸೂರು ಮಂಜುನಾಥ್ ಅವರ 'ಅಮೋಘ ಯುಗಳ ಪಿಟೀಲು ವಾದನ' ಕಾರ್ಯಕ್ರಮ ನಡೆಯಿತು.

ಮೈಸೂರು, ನ.10(ಎಂಕೆ)– ಮನಸ್ಸಿಗೆ ಮುದ ನೀಡುವ ಶಾಸ್ತ್ರೀಯ ಸಂಗೀತದ ನಾದ–ನಿನಾದದೊಂದಿಗೆ 'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ ಆಯೋಜಿಸಿದ್ದ 'ಏಳು ದಿನಗಳ ಸಾಂಸ್ಕೃತಿಕ ಉತ್ಸವ'ಕ್ಕೆ ಯಶಸ್ಸಿನ ತೆರೆ ಬಿದ್ದಿತು.

ಮೈಸೂರಿನ ಕಲಾಮಂದಿರದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ನಡೆದ 'ಸಾಂಸ್ಕೃತಿಕ ಉತ್ಸವ'ದ ಕಡೆಯ ದಿನ ಖ್ಯಾತ ಪಿಟೀಲು ಸಹೋದರರಾದ ವಿದ್ವಾನ್ ಮೈಸೂರು ನಾಗರಾಜು ಹಾಗೂ ವಿದ್ವಾನ್ ಡಾ.ಮೈಸೂರು ಮಂಜುನಾಥ್ ಅವರ 'ಅಮೋಘ ಯುಗಳ ಪಿಟೀಲು ವಾದನ' ಸಾಂಸ್ಕೃತಿಕ ಉತ್ಸವಕ್ಕೆ ವೈಭವದ ಮೆರಗು ತಂದಿತು.

ಪಿಟೀಲು ವಾದನದ ಆರಂಭದಲ್ಲಿ 'ಹಂಸಧ್ವನಿ' ರಾಗದಲ್ಲಿ 'ವಾತಾಪಿ ಗಣಪತಿ', 'ಬಹುದಾರಿ' ರಾಗದಲ್ಲಿ 'ಶ್ರೀರಾಮ ಸ್ತುತಿ'ಯನ್ನು ಸೊಗಸಾಗಿ ನುಡಿಸಿದರು. ನಂತರ 'ತನಿ ಅವರ್ತನ'ದಲ್ಲಿ ತಾಳವಾದ್ಯ ವಿದ್ವಾಂಸರು ತಮ್ಮ ಚಾಕಚಕ್ಯತೆ ತೋರುವ ಮೂಲಕ ಸಂಗೀತ ಪ್ರಿಯರ ಮನಗೆದ್ದರಲ್ಲದೆ ಪ್ರಶಂಸೆ ಪಡೆದರು.

ಕಿವಿಗೆ ಇಂಪು ನೀಡಿದ ವಿಶೇಷ ರಾಗ: 'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ ಆಯೋಜಿಸಿದ್ದ 'ಸಾಂಸ್ಕೃತಿಕ ಉತ್ಸವ'ಕ್ಕೆ ಅನುಗುಣವಾಗಿ 'ಹೋಳಿ ಹಬ್ಬ' ಕುರಿತಾಗಿ ವಿವಿಧ ಬಣ್ಣಗಳನ್ನು ಹೋಲುವಂತೆ 108 ರಾಗಗಳೊಂದಿಗೆ ಸಂಯೋಜಿಸಿದ್ದ ವಿಶೇಷ ರಾಗದ ಪಲ್ಲವಿಯನ್ನು 'ಭರತ ರಾಗ'ದೊಂದಿಗೆ ನುಡಿಸಿದ ಡಾ.ಮೈಸೂರು ಮಂಜುನಾಥ್, ನೆರೆದಿದ್ದವರ ಮನಕ್ಕೆ ಸಂಗೀತ ಸುಧೆ ಹರಿಸಿದರು. ಅವರೊಂದಿಗೆ ಮೃದಂಗ ವಾದನದಲ್ಲಿ ತುಮಕೂರು ಬಿ.ರವಿಶಂಕರ್, ಘಟಂನಲ್ಲಿ ಗಿರಿಧರ್ ಉಡುಪ, ತಬಲಾ ವಾದನದಲ್ಲಿ ರೂಪಕ್ ಕಲ್ಲೂರ್ಕರ್ ಹಾಗೂ ವೀಣೆ ವಾದನದಲ್ಲಿ ಕುಮಾರಿ ಅನನ್ಯ ಉತ್ತಮ ಸಹಕಾರ ನೀಡಿದರು.

ಪ್ರತಿಯೊಂದು ಪ್ರದರ್ಶನಗಳು ಹಬ್ಬಗಳೇ: ಖ್ಯಾತ ಪಿಟೀಲು ವಾದಕ ಮೈಸೂರು ಮಂಜುನಾಥ್ ಪಿಟೀಲು ವಾದನ ಕಾರ್ಯಕ್ರಮ ಪ್ರಸ್ತುತಪಡಿಸುತ್ತಲೇ ಶಾಸ್ತ್ರೀಯ ಸಂಗೀತದ ಪರಂಪರೆ, ಮಹತ್ವ ತಿಳಿಸಿಕೊಟ್ಟರು.

ಕಲಾವಿದರಿಗೆ ಪ್ರತಿಯೊಂದು ಪ್ರದರ್ಶನಗಳು ಹಬ್ಬಗಳೇ. ವಿಶ್ವದಲ್ಲಿಯೇ ಭವ್ಯ ಸಾಂಸ್ಕೃತಿಕ ಪರಂಪರೆ ನಮ್ಮ ದೇಶದ್ದಾಗಿದೆ. ವಿದೇಶಗಳಲ್ಲಿ ಭಾರತೀಯ ಸಂಗೀತವೂ ಧರ್ಮಗಳನ್ನು ಮೀರಿ ಬೆಳೆದಿದೆ. ಯೂರೋಪ್‌ನ ಚರ್ಚ್‌ಗಳಲ್ಲಿ, ಇರಾನ್ ದೇಶದ ಪರ್ಷಿಯನ್ ವಿಶ್ವವಿದ್ಯಾಲಯದಲ್ಲಿಯೂ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದೇನೆ. ಮುಸ್ಲಿಂ ದೇಶದಲ್ಲಿ 'ವಾತಾಪಿ ಗಣಪತಿ' ಸಂಗೀತವನ್ನು ನುಡಿಸಿದ್ದೇವೆ. ನಮ್ಮ ಸಂಗೀತ ಕಾರ್ಯಕ್ರಮ ಕೇಳಿದವರಲ್ಲಿ ಹಲವರು ಭಾರತೀಯ ಶಾಸ್ತ್ರೀಯ ಸಂಗೀತವನ್ನು ಕಲಿತಿದ್ದಾರೆ. ಸಂಗೀತದ ಎಲ್ಲಾ ರಚನೆಗಳು ಹಬ್ಬಗಳ ಮೂಲವಾಗಿದ್ದು, ಆದ್ಯಾತ್ಮಿಕ ಚಿಂತನೆಯಿಂದ ಕೂಡಿವೆ ಶಾಸ್ತ್ರೀಯ ಸಂಗೀತದ ವೈಶಿಷ್ಟತೆ ಎಂದರೆ ಎಲ್ಲಾ ಸಂದರ್ಭಗಳಿಗೂ ಒಳಪಡುವುದಲ್ಲದೆ ಎಲ್ಲರ ಮನ ಮುಟ್ಟುವ ಸಂಗೀತ ಇದಾಗಿದೆ ಎಂದರು.

ಇದೇ ವೇಳೆ 'ಸಾಂಸ್ಕೃತಿಕ ಉತ್ಸವ'ದಲ್ಲಿ ಸಹಕರಿಸಿದ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಬಿವಿಬಿ ಬೆಂಗಳೂರು ಕೇಂದ್ರದ ಜಂಟಿ ನಿರ್ದೇಶಕಿ ನಾಗಲಕ್ಷ್ಮಿರಾವ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಅಲ್ಲದೆ ಕಲಾ ಶಿಬಿರದಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಿ ಪ್ರೋತ್ಸಾಹಿಸಲಾಯಿತು. ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಉಪಾಧ್ಯಕ್ಷ ಪ್ರೊ.ಸಿ.ನಾಗಣ್ಣ, ಸದಸ್ಯರಾದ ಸುದೀಂದ್ರ, ತುಳಸಿ ರಾಮಚಂದ್ರ ಇದ್ದರು.

ಪುಸ್ತಕ ಪ್ರೇಮಿಗಳ ಸಂತಸ...

ವಿವಿಧ ಪ್ರಕಾರ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಸಂಜೆ ವೇಳೆ ಆಯೋಜಿಸಿದ್ದ ಪುಸ್ತಕ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ರಿಯಾಯಿತಿ ದರದಲ್ಲಿ ಕನ್ನಡ, ಹಿಂದಿ ಹಾಗೂ ಇಂಗ್ಲಿಷ್‌ನ ಕತೆ–ಕಾದಂಬರಿಗಳ ಖರೀದಿಸಿ ಪುಸ್ತಕ ಪ್ರೇಮಿಗಳು ಸಂತಸ ವ್ಯಕ್ತಪಡಿಸಿದರು. ಅದರಲ್ಲೂ 'ಕೃಷ್ಣಾವತಾರ', 'ಡಾ.ಕೆ.ಎಂ. ಮುನ್ಷಿ' ಅವರ ಕೃತಿಗಳಿಗೆ ಭಾರೀ ಬೇಡಿಕೆ ಕಂಡುಬಂದಿತ್ತು.

ಆತ್ಯಾಕರ್ಷಕ ಚಿತ್ರಕಲೆಗಳ ಪ್ರದರ್ಶನ...

'ಸಾಂಸ್ಕೃತಿಕ ಉತ್ಸವ'ದ ಅಂಗವಾಗಿ ರಂಗಾಯಣದ ಬಯಲು ರಂಗಮಂದಿರದಲ್ಲಿ ಮೂರು ದಿನಗಳ ಕಾಲ ನಡೆದ ಚಿತ್ರ ಕಲಾಶಿಬಿರದಲ್ಲಿ ಶಿಬಿರಾರ್ಥಿಗಳು ರಚಿಸಿದ ಆತ್ಯಾಕರ್ಷಕ ಚಿತ್ರಕಲೆಗಳನ್ನು ಕಲಾಮಂದಿರ ಆವರಣದಲ್ಲಿ ಪ್ರದರ್ಶನಕ್ಕಿಡಲಾಗಿತ್ತು.

ಮೈಸೂರು ದಸರಾ ಜಂಬೂ ಸವಾರಿ, ಕರಗ ಉತ್ಸವ, ಕಾಶಿ, ಯಕ್ಷಗಾನ ಸೇರಿದಂತೆ ಇನ್ನಿತರೆ ಪರಿಕಲ್ಪನೆಗಳಲ್ಲಿ ಮೂಡಿಬಂದಿದ್ದ 10 ಚಿತ್ರಕಲೆಗಳನ್ನು ಪ್ರದರ್ಶಿಸಲಾಯಿತು. ಶಿಬಿರಾರ್ಥಿಗಳಾಗಿ ಭಾಗವಹಿಸಿದ್ದ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್ ಹಾಗೂ ರವಿವರ್ಮ ಆರ್ಟ್ಸ್ ಇನ್ಸ್ಟಿಟ್ಯೂಷನ್‌ನ ಸೋಮಶೇಖರ್, ಪ್ರಗ್ಯಾಗುಪ್ತಾ, ತೇಜಸ್ವಿನಿ, ಚೇತನ್, ನಾಗಶಯನ, ಎಸ್.ಚಂದನ್, ಜಿ.ಎಂ.ಹನುಮಂತ್ ನಾಯಕ್, ಪಿ.ನಾಗರಾಜು ಹಾಗೂ ಎಂ.ವಿನೋದ್ ತಮ್ಮ ಕೈಚಳಕದ ಮೂಲಕ ಕಲಾಸಕ್ತರ ಗಮನ ಸೆಳೆದರು.

ಕಲೆ-ಸಾಹಿತ್ಯ, ಸಂಸ್ಕೃತಿ ಉಳಿಸಿ-ಬೆಳೆಸುವ ಪ್ರಯತ್ನ ಮಾಡಿದ್ದೇವೆ...


'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರೂ ಆದ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ ಮಾತನಾಡಿ, ಇನ್ಫೋಸಿಸ್ ಪ್ರತಿಷ್ಠಾನ ಸಹಕಾರದೊಂದಿಗೆ ಕಳೆದ 7 ದಿನಗಳ 'ಸಾಂಸ್ಕೃತಿಕ ಉತ್ಸವ'ದಲ್ಲಿ ಬೊಂಬೆಯಾಟ, ಜಾನಪದ ಮೇಳ, ಪಿಟೀಲು ವಾದನ ಸೇರಿದಂತೆ ವಿವಿಧ ಪ್ರಕಾರದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕಲೆ–ಸಾಹಿತ್ಯ, ಸಂಸ್ಕೃತಿ ಉಳಿಸಿ–ಬೆಳೆಸುವ ಪ್ರಯತ್ನ ಮಾಡಿದ್ದೇವೆ ಎಂದರು.

ನನಗೆ ತಿಳಿದಿರುವಂತೆ ಭಾರತ ದೇಶ ಸುಮಾರು 1081 ವರ್ಷಗಳು ಪರಕೀಯರ ಆಳ್ವಿಕೆಗೆ ಒಳಗಾಗಿದೆ. ಈ ವೇಳೆ ನಮ್ಮ ಸನಾತನ ಧರ್ಮ, ಹಿಂದೂ ಸಂಸ್ಕೃತಿ ಮರೆಯಾಗುತ್ತಿರುವುದನ್ನು ಹಲವು ಸ್ವಾತಂತ್ರ್ಯ ಹೋರಾಟಗಾರರು ಗಮನಿಸಿದ್ದರು. ಅವರಲ್ಲಿ ಪ್ರಮುಖವಾಗಿ ಡಾ.ಕೆ.ಎಂ.ಮುನ್ಷಿ ಅವರು, ಭಾರತೀಯ ವಿದ್ಯಾಭವನ ಸಂಸ್ಥೆ ಕಟ್ಟಿ ಅದರ ಮೂಲಕ ಕಲೆ–ಸಾಹಿತ್ಯ, ಶಿಲ್ಪಕಲೆ ಉಳಿಸಿ–ಬೆಳೆಸುವ ಕೆಲಸ ಮಾಡಿದ್ದು, ಅದು ನಿರಂತರವಾಗಿ ನಡೆದುಕೊಂಡು ಬಂದಿದೆ. ಅಲ್ಲದೆ ವೇದ–ಉಪನಿಷತ್ತುಗಳ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಸನಾತನ ಧರ್ಮದ ಉಳಿವಿಗೆ ಶ್ರಮಿಸಿದೆ ಎಂದರು.

ಕೋವಿಡ್‌ನಿಂದಾಗಿ ಕಳೆದೆರಡು ವರ್ಷ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ ನಡೆಸಲು ಸಾಧ್ಯವಾಗಿರಲಿಲ್ಲ. ಈ ವರ್ಷ ಯಶಸ್ವಿಯಾಗಿ ಆಯೋಜಿಸಿದ್ದು, ಮುಂದಿನ ವರ್ಷಗಳಲ್ಲಿಯೂ ಇದೇ ರೀತಿ ಆಯೋಜಿಸಲಾಗುವುದು. ಇದಕ್ಕೆ ಕಲಾಭಿಮಾನಿಗಳ, ಮೈಸೂರಿಗರ ಪ್ರೋತ್ಸಾಹ ಅಗತ್ಯವಾಗಿದೆ ಎಂದು ಕೆ.ಬಿ.ಗಣಪತಿ ಅವರು ತಿಳಿಸಿದರು.

ನ್ಯಾಯಕ್ಕಾಗಿ ಆರ್.ಎನ್.ಕುಲಕರ್ಣಿ ಅವರ ಸುದೀರ್ಘ ಕಾನೂನು ಹೋರಾಟ

ಮೈಸೂರು, ನ.10(ಆರ್‌ಕೆ)–ನವೆಂಬರ್ 4ರಂದು ಹತ್ಯೆಯಾದ ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರು ತಮ್ಮ ಮನೆ ಪಕ್ಕದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ 2021ರ ಡಿಸೆಂಬರ್ 18ರಂದು ಮೈಸೂರು ಮಹಾನಗರ ಪಾಲಿಕೆ (MCC) ವಲಯ ಕಚೇರಿ–3ರ ಅಸಿಸ್ಟೆಂಟ್ ಕಮಿಷ್ನರ್‌ಗೆ ದೂರು ನೀಡಿದ್ದರು ಎಂದು ಕುಲಕರ್ಣಿ ಅವರ ಕುಟುಂಬದ ಮೂಲಗಳು ತಿಳಿಸಿವೆ.



ಆರ್.ಎನ್.ಕುಲಕರ್ಣಿ

ಅಂದಿನಿಂದ ಈವರೆಗೂ ಯಾವುದೇ ಪ್ರತಿಕ್ರಿಯೆ ಬಾರದ ಕಾರಣ ಹಾಗೂ ಅನಧಿಕೃತ ನಿರ್ಮಾಣ ಮುಂದುವರೆದಿದ್ದರಿಂದ ಕುಲಕರ್ಣಿ ಅವರು 2022ರ ಫೆಬ್ರವರಿ 11ರಂದು ಅಂದರೆ 2 ತಿಂಗಳ ನಂತರ ಪಾಲಿಕೆ ಕಮಿಷ್ನರ್‌ಗೆ ದೂರು ನೀಡಿದ್ದರು. ಈ ನಡುವೆ ಆರ್.ಎನ್.ಕುಲಕರ್ಣಿ ಅವರು 2022ರ ಫೆಬ್ರುವರಿ 9ರಂದು ನಗರ ಪೊಲೀಸ್ ಕಮಿಷ್ನರ್‌ಗೂ ದೂರು ನೀಡಿದ್ದ ಹಿನ್ನೆಲೆಯಲ್ಲಿ ಅವರು, ಸ್ಥಳಕ್ಕೆ ಖುದ್ದು ಭೇಟಿ ನೀಡಿ ಕ್ರಮ ಕೈಗೊಳ್ಳುವಂತೆ ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್‌ಗೆ ನಿರ್ದೇಶನ ನೀಡಿದ್ದರು.

ದೂರಿನ ಸಾರಾಂಶವೇನೆಂದರೆ; ಆಸ್ತಿಯ ಸುರಕ್ಷತೆ ಹಾಗೂ ದೈಹಿಕ ಕ್ಷೇಮದ ಬೆದರಿಕೆ, ಅವಾಚ್ಯ ಶಬ್ಧಗಳ ಬೈಗುಳ, ಹೊಲಸು ಭಾಷೆ ಬಳಕೆ ಹಾಗೂ ಜೀವ ಬೆದರಿಕೆ.


ನಗರಪಾಲಿಕೆ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ 2022ರ ಫೆಬ್ರವರಿ 18ರಂದು ಕುಲಕರ್ಣಿ ಅವರು ಮೈಸೂರಿನ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆ (OS No.355/ 2022) ಹೂಡಿದ್ದರು. ಈ ದಾವೆ ಬಾಕಿ ಇರುವಾಗಲೇ ಅನಧಿಕೃತ ಕಟ್ಟಡ ನಿರ್ಮಾಣದ ಬಗ್ಗೆ ಕ್ರಮ ಕೈಗೊಳ್ಳುವಂತೆ 2022ರ ಜೂನ್ 4ರಂದು ಕುಲಕರ್ಣಿ ಅವರು ಮೈಸೂರು ನಗರ ಪಾಲಿಕೆ ಕಮಿಷ್ನರ್‌ಗೆ ಮನವಿ ಪತ್ರ ಸಲ್ಲಿಸಿದ್ದರು.

ಆದರೆ ಕ್ರಮ ಕೈಗೊಳ್ಳಲಿಲ್ಲ. ಅಚ್ಚರಿ ಎಂದರೆ, ಪಾಲಿಕೆಯಿಂದಲೇ ಕುಲಕರ್ಣಿ ಅವರಿಗೆ ನೋಟಿಸ್ ಜಾರಿಯಾಯಿತು. ಅದರಲ್ಲಿ ನೀವು ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿದ್ದು, ಅದನ್ನು ನೆಲಸಮಗೊಳಿಸುವಂತೆ ತಿಳಿಸಲಾಗಿತ್ತು. ಅಂತೂ, ಕುಲಕರ್ಣಿ ಅವರು ಉತ್ತರಿಸಿದ ನಂತರ ಅದು ಅಲ್ಲಿಗೇ ನಿಂತಿತು.

ಕಡೆಗೆ 2022ರ ಜೂನ್ 23ರಂದು ನಗರಪಾಲಿಕೆಯು ಕುಲಕರ್ಣಿ ಅವರ ನೆರೆ ಮನೆಯವರಿಗೆ ನೋಟಿಸ್ ನೀಡಿ, ಅನಧಿಕೃತ ಕಟ್ಟಡವನ್ನು ನೆಲಸಮಗೊಳಿಸುವಂತೆ ಅದರಲ್ಲಿ ಸೂಚನೆ ನೀಡಿತು. ಅದೇ ರೀತಿ ಕಾನೂನು ಪ್ರಕಾರ 15 ದಿನದೊಳಗಾಗಿ ಅನಧಿಕೃತ ನಿರ್ಮಾಣವನ್ನು ನೆಲಸಮಗೊಳಿಸಬೇಕೆಂದು ಪಾಲಿಕೆಯು 2022ರ ಜುಲೈ 14ರಂದು ನೋಟಿಸ್ ನೀಡಿತು. ಆದರಲ್ಲಿ 3 ತಿಂಗಳು ಕಳೆದರೂ ಏನೂ ಆಗಲಿಲ್ಲ.

ಬೇರೆ ಮಾರ್ಗವಿಲ್ಲದೆ ಕುಲಕರ್ಣಿ ಅವರು ರಾಜ್ಯ ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಸಲ್ಲಿಸಿ, ಮೈಸೂರು ಮಹಾನಗರ ಪಾಲಿಕೆ ಕಮಿಷ್ನರ್‌ಗೆ ಕಾನೂನಿನಂತೆ ಕ್ರಮ ಜರುಗಿಸುವಂತೆ ನಿರ್ದೇಶನ ನೀಡುವಂತೆ ಕೋರಿದ್ದರು. ಈ ಸಂಬಂಧ ವಿಚಾರಣೆಯನ್ನು 2022ರ ನವೆಂಬರ್ 3ಕ್ಕೆ ಮುಂದೂಡಲಾಗಿತ್ತೆಂದು ಹೇಳಲಾಗಿದೆ. ಬದಲಾದ ಸಂದರ್ಭದಲ್ಲಿ ಈ ಪ್ರಕರಣ ಏನಾಗಬಹುದೆಂಬುದನ್ನು ಕಾದು ನೋಡಬೇಕು.

ಆರ್.ಎನ್.ಕುಲಕರ್ಣಿ ಹತ್ಯೆ ಆರೋಪಿಗಳು ಪೊಲೀಸ್ ವಶಕ್ಕೆ



ಮನು ವರುಣ್‌ಗೌಡ

ಮೈಸೂರು, ನ.10(ಆರ್‌ಕೆ)–ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆ ಆರೋಪಿಗಳಾದ ಮನು ಮತ್ತು ವರುಣ್‌ಗೌಡನನ್ನು ನಿನ್ನೆ (ನ.9) ಹೆಚ್ಚಿನ ವಿಚಾರಣೆಗಾಗಿ 5 ದಿನಗಳವರೆಗೆ ಪೊಲೀಸ್ ವಶಕ್ಕೆ ಪಡೆಯಲಾಗಿದೆ. ಬಂಧಿತ ಆರೋಪಿಗಳನ್ನು ಮಂಗಳವಾರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಪ್ರಕರಣ ಸಂಬಂಧ ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ನೀಡುವಂತೆ ಮನವಿ ಮಾಡಿದ್ದ ಪೊಲೀಸರಿಗೆ ಬುಧವಾರ ನ್ಯಾಯಾಲಯವು ಮನು ಮತ್ತು ವರುಣ್‌ಗೌಡನನ್ನು ವಶಕ್ಕೆ ನೀಡಿದೆ.

ಕುಲಕರ್ಣಿ ಅವರ ಹತ್ಯೆ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ತೀವ್ರ ವಿಚಾರಣೆ ನಡೆಸುತ್ತಿರುವ ತನಿಖಾಧಿಕಾರಿಗಳು, ಪ್ರಕರಣದಲ್ಲಿ ಭಾಗಿಯಾಗಿರುವ, ಸಹಕರಿಸಿದವರ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಟಿ20 ವಿಶ್ವಕಪ್: ಭಾರತಕ್ಕೆ ಹೀನಾಯ ಸೋಲು, ಇಂಗ್ಲೆಂಡ್ ಫೈನಲ್‌ಗೆ

ಅಡಿಲೇಡ್, ನ.10– ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್‌ನಲ್ಲಿ ಅಧಿಕಾರಯುತ ಪ್ರದರ್ಶನ ನೀಡಿದ ಇಂಗ್ಲೆಂಡ್ ಭಾರತದ ವಿರುದ್ಧದ ನಡೆದ ಟಿ20 ವಿಶ್ವಕಪ್ ಪಂದ್ಯಾವಳಿಯ 2ನೇ ಸೆಮಿಫೈನಲ್‌ನಲ್ಲಿ 10 ವಿಕೆಟ್‌ಗಳ ಅಮೋಘ ಜಯ ಸಾಧಿಸಿದೆ.

ಇದರೊಂದಿಗೆ ಇಂಗ್ಲೆಂಡ್ ಟಿ20 ವಿಶ್ವಕಪ್ ಫೈನಲ್ ತಲುಪಿದ್ದು, ನ.13ರಂದು ಟ್ರೋಫಿಗಾಗಿ ಪಾಕ್ ಎದುರು ಕಾದಾಟ ನಡೆಸಲಿದೆ. ಇತ್ತ ಹೀನಾಯ ಸೋಲು ಅನುಭವಿಸಿದ ಟೀಂ ಇಂಡಿಯಾ ಟೂರ್ನಿಯಿಂದ ಹೊರಬಿದ್ದಿದೆ.

ಇಲ್ಲಿನ ಓವಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 168 ರನ್ ಕಲೆಹಾಕಿತ್ತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕೆ.ಎಲ್.ರಾಹುಲ್ ಕೇವಲ 5 ರನ್ ಗಳಿಸಿ ನಿರ್ಗಮಿಸಿದರು. ನಂತರ 2ನೇ ವಿಕೆಟ್‌ಗೆ ಜೊತೆಯಾದ ನಾಯಕ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ 47 ರನ್ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 27 ರನ್ ಗಳಿಸಿದ್ದ ರೋಹಿತ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಸೂರ್ಯ ಕುಮಾರ್ ಯಾದವ್ 14 ರನ್ ಸಿಡಿಸಿ ಬಂದಷ್ಟೇ ವೇಗವಾಗಿ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಕೊಹ್ಲಿ ಹಾಗೂ ಹಾರ್ದಿಕ್ ಪಾಂಡ್ಯ, 4ನೇ ವಿಕೆಟ್ ಪಾಲುದಾರಿಕೆಯಲ್ಲಿ 61 ರನ್ ಕೂಡಿಸಿದರು. ಟೂರ್ನಿಯಲ್ಲಿ 4ನೇ ಅರ್ಧಶತಕ ಗಳಿಸಿದ ಕೊಹ್ಲಿ 40 ಎಸೆತಗಳಲ್ಲಿ 50 ರನ್ ಗಳಿಸಿದರೆ, ಪಾಂಡ್ಯ 33 ಎಸೆತಗಳಿಂದ 63 ರನ್ ಬಾರಿಸಿದರು. ಇಂಗ್ಲೆಂಡ್ ಪರ ಕ್ರಿಸ್ ಜೋರ್ಡಾನ್ 3, ಆದಿಲ್ ರಶೀದ್, ಕ್ರಿಸ್ ವೋಕ್ಸ್ ತಲಾ ಒಂದೊಂದು ವಿಕೆಟ್ ಪಡೆದರು. 169 ರನ್‌ಗಳ ಸವಾಲಿನ ಮೊತ್ತ ಬೆನ್ನತ್ತಿದ್ದ ಇಂಗ್ಲೆಂಡ್ ವಿಕೆಟ್ ನಷ್ಟವಿಲ್ಲದೇ ಇನ್ನೂ 4 ಓವರ್ ಬಾಕಿ ಉಳಿದಿರುವಂತೆಯೇ 170 ರನ್ ಗಳಿಸುವ ಮೂಲಕ ಗೆಲುವಿನ ದಡ ಸೇರಿತು. ತಂಡದ ಪರ ಅಲೆಕ್ಸ್ ಹೇಲ್ಸ್ 47 ಎಸೆತಗಳಲ್ಲಿ 7 ಸಿಕ್ಸರ್, 4 ಬೌಂಡರಿ ಒಳಗೊಂಡ 86 ರನ್ ಗಳಿಸಿದರೇ, ನಾಯಕ ಬಟ್ಲರ್ 49 ಎಸೆತಗಳಲ್ಲಿ 9 ಬೌಂಡರಿ ಮತ್ತು 3 ಸಿಕ್ಸರ್ ಒಳಗೊಂಡ 80 ರನ್ ಬಾರಿಸಿದರು. ಅಲೆಕ್ಸ್ ಹೇಲ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ನ.10–ಚೆಸ್ಕಾಂ ವತಿಯಿಂದ ನ.12ರಂದು ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ಚಾಮುಂಡಿಪುರಂ ಸುತ್ತ–ಮುತ್ತ, ಕೋರ್ಟ್ ರಸ್ತೆ, ಆರ್.ಟಿ.ಓ, ವಿಷ್ಣುವರ್ಧನ್ ರಸ್ತೆ, ರಾಮಸ್ವಾಮಿ ಸರ್ಕಲ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು, ಕಡಕೊಳ, ಬ್ಯಾತಹಳ್ಳಿ, ಸಿಂಧುವಳ್ಳಿ, ದೊಡ್ಡಕಾನ್ಯ, ಕೆ.ಎಂ ಹುಂಡಿ, ದಡದಹಳ್ಳಿ, ಚಿಕ್ಕಕಾನ್ಯ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಲ್ಲಹಳ್ಳಿಯಲ್ಲಿ ಯುವಕನ ಹತ್ಯೆ

ಮೈಸೂರು, ನ.10(ಆರ್‌ಕೆ)–ಕ್ಷುಲ್ಲಕ ಕಾರಣಕ್ಕಾಗಿ ಯುವಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಮೈಸೂರು ತಾಲೂಕು, ಮೆಲ್ಲಹಳ್ಳಿ ಗ್ರಾಮದಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ಗ್ರಾಮದ ಮನೋಜ್ ಕುಮಾರ್(24) ಹತ್ಯೆಯಾದ ಯುವಕ, ಹುಟ್ಟು ಹಬ್ಬದ ವಿಚಾರದಲ್ಲಿ ಕೆಲ ದಿನಗಳ ಹಿಂದೆ ಆತನ ಸ್ನೇಹಿತರಾದ ರಘು, ಕಿರಣ್, ಶಂಕರ್ ಹಾಗೂ ಸಚಿನ್ ನಡುವೆ ಗಲಾಟೆ ನಡೆದಿತ್ತು ಎಂದು ಹೇಳಲಾಗಿದೆ. ಅದೇ ಕಾರಣಕ್ಕಾಗಿ ಬುಧವಾರ ರಾತ್ರಿ ಮನೆಗೆ ಹೋಗುತ್ತಿದ್ದ ಮನೋಜ್ ಕುಮಾರ್‌ನನ್ನು ಬೈಕುಗಳಲ್ಲಿ ಬಂದ ನಾಲ್ವರು ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಮನೋಜ್‌ನನ್ನು ಗ್ರಾಮಸ್ಥರು ಹತ್ತಿರದ ಖಾಸಗಿ ಆಸ್ಪತ್ರೆಗೆ ಕರೆತಂದರಾದರೂ, ಮಾರ್ಗ ಮಧ್ಯೆಯೇ ಆತ ಕೊನೆಯುಸಿರೆಳೆದಿದ್ದಾನೆ ಎಂದು ವೈದ್ಯರು ತಿಳಿಸಿದರು. ಮಾಹಿತಿ ಅರಿತ ವರುಣಾ ಠಾಣೆ ಪೊಲೀಸರು ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ಹತ್ಯೆಗೈದು ಪರಾರಿಯಾಗಿರುವ ಆರೋಪಿಗಳ ಪತ್ತೆಗೆ ಜಾಲ ಬೀಸಿದ್ದಾರೆ. ಇಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮನೋಜ್ ಕುಮಾರ್ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಒಪ್ಪಿಸಲಾಯಿತು.

493 ಕೋಟಿ ವೆಚ್ಚದಲ್ಲಿ ಮೈಸೂರು ರೈಲ್ವೆ ನಿಲ್ದಾಣ ಅಭಿವೃದ್ಧಿ, ನಾಗನಹಳ್ಳಿಯಲ್ಲಿ ಮೆಮು ಶೆಡ್ ನಿರ್ಮಾಣ; ಜನವರಿ ವೇಳೆಗೆ ಟೆಂಡರ್ ಪ್ರಕ್ರಿಯೆ: ಪ್ರತಾಪ್ ಸಿಂಹ

ಮೈಸೂರು,ನ.10.(ಪಿಎಂ)– ಮೈಸೂರು ರೈಲ್ವೆ ನಿಲ್ದಾಣಕ್ಕೆ ಹೊಂದುಕೊಂಡಂತೆ 65 ಎಕರೆಯಲ್ಲಿ ನಾಲ್ಕು ಸ್ಟೆಬಲಿಂಗ್ ಲೈನ್, ನಾಲ್ಕು ಫಿಟ್‌ಲೈನ್, 3 ಹೊಸ ಫ್ಲಾಟ್‌ಫಾರಂ ನಿರ್ಮಾಣದೊಂದಿಗೆ ನಿಲ್ದಾಣದ ಅಭಿವೃದ್ಧಿ ಹಾಗೂ ನಾಗನಹಳ್ಳಿಯಲ್ಲಿ ಮೆಮು ಶೆಡ್ ನಿರ್ಮಾಣ ಕಾಮಗಾರಿಗೆ ಜನವರಿ ವೇಳೆಗೆ ಟೆಂಡರ್ ಪ್ರಕ್ರಿಯೆ ಆರಂಭಗೊಳ್ಳಲಿದೆ ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದರು.



ಮೈಸೂರಿನ ನೈರುತ್ಯ ರೈಲ್ವೆಯ ಮೈಸೂರು ವಿಭಾಗೀಯ ಕಚೇರಿ ಸಭಾಂಗಣದಲ್ಲಿ ಸಂಸದ ಪ್ರತಾಪ್ ಸಿಂಹ ಸಭೆ ನಡೆಸಿದರು.

ಮೈಸೂರಿನ ನೈರುತ್ಯ ರೈಲ್ವೆಯ ಮೈಸೂರು ವಿಭಾಗೀಯ ಕಚೇರಿಯ ಸಭಾಂಗಣದಲ್ಲಿ ಗುರುವಾರ ಮೈಸೂರು ವಿಭಾಗದ ರೈಲ್ವೆ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾಧ್ಯಮದವರಿಗೆ ಅವರು ಮಾಹಿತಿ ನೀಡಿದರು.

493 ಕೋಟಿ ರೂ. ವೆಚ್ಚದ ಈ ಯೋಜನೆಗೆ ಪ್ರಧಾನಿ ಮೋದಿಯವರು ಯೋಗ ದಿನಾಚರಣೆಗೆ ಮೈಸೂರಿಗೆ ಆಗಮಿಸಿದ್ದ ಸಂದರ್ಭದಲ್ಲಿ ಭೂಮಿ ಪೂಜೆ ನೆರವೇರಿಸಿದ್ದಾರೆ. ನಾಗನಹಳ್ಳಿಯಲ್ಲಿ ಸ್ಯಾಟಲೈಟ್ ರೈಲ್ವೆ ಟರ್ಮಿನಲ್ ನಿರ್ಮಾಣ ಯೋಜನೆ ಇತ್ತು. ಆದರೆ ಕೋವಿಡ್ ಎದುರಾದ ಹಿನ್ನೆಲೆಯಲ್ಲಿ ಹಾಗೂ ದೊಡ್ಡ ಪ್ರಮಾಣದಲ್ಲಿ ಭೂಸ್ವಾಧೀನ ಕಷ್ಟವಾದ ಕಾರಣ ಸದ್ಯ ಈ ಯೋಜನೆ ಕೈಬಿಡಲಾಗಿದೆ ಎಂದು ಹೇಳಿದರು.

ಸದರಿ 65 ಎಕರೆ ಭೂಮಿಯಲ್ಲಿರುವ ರೈಲ್ವೆ ಕ್ವಾಟರ್ಸ್‌ಗಳನ್ನು ನೆಲಸಮಗೊಳಿಸಿ ನಿಲ್ದಾಣದ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗುವುದು. ಕ್ವಾಟರ್ಸ್‌ನಲ್ಲಿ ಇರುವವರಿಗೆ ಪರ್ಯಾಯ ವ್ಯವಸ್ಥೆ ಹುಡುಕಬೇಕಾಗುತ್ತದೆ. ಕೇಂದ್ರ ಸರ್ಕಾರ ಅಧೀನದ ಸಂಸ್ಥೆಗಳ ಕ್ವಾಟರ್ಸ್‌ಗಳನ್ನು ಬಾಡಿಗೆ ಪಡೆಯುವ ಉದ್ದೇಶವೂ ಇದೆ. ಇದು ತಾತ್ಕಾಲಿಕ ವ್ಯವಸ್ಥೆಯಾಗಿದ್ದು, ರೈಲ್ವೆ ಉದ್ಯೋಗಿಗಳಿಗೆ ಹೊಸದಾಗಿ ಕ್ವಾಟರ್ಸ್‌ಗಳ ನಿರ್ಮಿಸುವ ಯೋಜನೆ ಇದೆ ಎಂದು ತಿಳಿಸಿದರು.

ಅಶೋಕಪುರಂ ರೈಲ್ವೆ ನಿಲ್ದಾಣ: ಅಶೋಕಪುರಂ ರೈಲ್ವೆ ನಿಲ್ದಾಣ ಅಭಿವೃದ್ಧಿ ಯೋಜನೆ ಕೈಗೆತ್ತಿಕೊಂಡಿದ್ದು, ಎರಡು ಹೊಸ ಸ್ಟೆಬಲಿಂಗ್ ಲೈನ್‌ಗಳು ಹಾಗೂ ಒಂದು ಫುಟ್‌ಓವರ್ ಸೇತುವೆ ನಿರ್ಮಿಸಲಾಗುವುದು. ಮೊದಲ ಹಂತದ ಕಾಮಗಾರಿಗೆ 15.17 ಕೋಟಿ ಮಂಜೂರಾಗಿದೆ. ಅಂತೆಯೇ 2ನೇ ಹಂತದ ಕಾಮಗಾರಿಗೆ 13.39 ಕೋಟಿ ರೂ. ಮಂಜೂರಾಗಿದೆ. ಮೊದಲ ಹಂತದ ಕಾಮಗಾರಿ 2023ರ ಫೆಬ್ರವರಿಗೆ ಹಾಗೂ 2ನೇ ಹಂತದ ಕಾಮಗಾರಿ 2023ರ ಜುಲೈ ವೇಳೆಗೆ ಪೂರ್ಣಗೊಳ್ಳಲಿದೆ ಎಂದರು.

ಡಿಸಿ ಅವರೊಂದಿಗೆ ಪರಿಶೀಲನೆ: ಅಶೋಕಪುರಂ ನಿಲ್ದಾಣದಲ್ಲಿ ಎರಡು ಸ್ಟೆಬಲಿಂಗ್ ಲೈನ್ ಮಾಡಲು 300 ಚದುರ ಮೀಟರ್ ಖಾಸಗಿ ಭೂಮಿ ಅಗತ್ಯವಿದ್ದು, ಅದನ್ನು ಖರೀದಿಸಲು ಉದ್ದೇಶಿಸಲಾಗಿದೆ. ಜೊತೆಗೆ 5 ಸಾವಿರ ಚದುರ ಮೀಟರ್ ಸರ್ಕಾರದ ಭೂಮಿ ಇದೆ. ಇದನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ನ.15ರ ನಂತರ ಜಿಲ್ಲಾಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಲಾಗುವುದು. ಭೂಮಿ ಹಸ್ತಾಂತರಕ್ಕೆ ಕ್ರಮ ವಹಿಸುವಂತೆ ಅವರಲ್ಲಿ ಕೋರಲಾಗುವುದು. ಬೆಳಗೊಳ ನಿಲ್ದಾಣದಲ್ಲಿ ಎರಡು ಸ್ಟೆಬಲಿಂಗ್ ಲೈನ್‌ಗಳ ನಿರ್ಮಾಣ ಪೂರ್ಣಗೊಂಡಿದೆ ಎಂದು ವಿವರಿಸಿದರು.

ವಿದ್ಯುದ್ದೀಕರಣ: ಮೈಸೂರು–ಚಾಮರಾಜನಗರ ರೈಲು ಮಾರ್ಗದಲ್ಲಿ ವಿದ್ಯುದ್ದೀಕರಣ ಪೂರ್ಣಗೊಂಡಿದೆ. ಆದರೆ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಒಂದೂವರೆ ಕಿ.ಮೀ.ಗೆ ಅನುಮತಿ ದೊರೆಯುತ್ತಿಲ್ಲ. ವಿಮಾನ ನಿಲುಗಡೆಗೆ ಸಿಗ್ನಲ್ ದೊರೆಯಲು ತಾಂತ್ರಿಕ ಸಮಸ್ಯೆ ಉಂಟಾಗುವ ಕಾರಣಕ್ಕೆ ಅನುಮತಿ ದೊರೆತಿಲ್ಲ. ಆದಷ್ಟು ಶೀಘ್ರದಲ್ಲಿ ಇದಕ್ಕೂ ಪರಿಹಾರ ಕಂಡುಕೊಂಡು ವಿದ್ಯುದ್ದೀಕರಣ ಪೂರ್ಣಗೊಳಿಸಲಾಗುವುದು ಎಂದರು.

ಕುಕ್ಕರಹಳ್ಳಿ ರೈಲ್ವೆ ಗೇಟ್‌ನಲ್ಲಿ ಮೇಲ್ಸೇತುವೆ: ಮೈಸೂರು ವಿವಿ ಕ್ರಾಫರ್ಡ್ ಭವನ ಹಿಂಭಾಗದಲ್ಲಿರುವ ಕುಕ್ಕರಹಳ್ಳಿ ರೈಲ್ವೆ ಗೇಟ್‌ನಲ್ಲಿ ಮೇಲ್ಸತುವೆ ನಿರ್ಮಿಸಲು ನಿರ್ಧಾರ ಆಗಿದೆ. ಇದಕ್ಕೆ ತಗಲುವ 26.54 ಕೋಟಿ ರೂ. ವೆಚ್ಚವನ್ನು ಎನ್‌ಹೆಚ್‌ನ ಪಿಡ್ಲಬ್ಲ್ಯೂಡಿ ವಿಭಾಗ ಭರಿಸಲು ಮುಂದೆ ಬಂದಿದ್ದು, ಪ್ರಸ್ತಾವನೆ ಸಿದ್ಧವಾಗಿದೆ. ಎನ್‌ಹೆಚ್ ಪಿಡ್ಲಬ್ಲ್ಯೂಡಿ ಮತ್ತು ರೈಲ್ವೆ ಮೂಲಕ ಕೆಆರ್‌ಎಸ್ ರಸ್ತೆಯ ರಿಂಗ್ ರಸ್ತೆ ಬಳಿ ಇರುವ ರೈಲ್ವೆ ಗೇಟ್‌ನಲ್ಲಿ ಕೆಳಸೇತುವೆ ನಿರ್ಮಿಸಲು ನಿರ್ಧರಿಸಲಾಗಿದೆ. ಇದಕ್ಕೂ 10 ದಿನಗಳ ಒಳಗೆ ಅನುಮೋದನೆ ದೊರೆಯಲಿದೆ ಎಂದರು.

ವಂದೇ ಭಾರತ್ ರೈಲಿಗೆ ಪ್ರಧಾನಿ ಚಾಲನೆ ನೀಡುತ್ತಿದ್ದಾರೆ. ಸಾಮಾನ್ಯವಾಗಿ ಒಂದು ರೈಲಿನ ಭಾರ 1,400 ಟನ್ ಇರುತ್ತದೆ. ಆದರೆ ಇದು 392 ಟನ್ ಇರುವ ಒಂದು ರೈಲು. ಬುಲೆಟ್ ರೈಲಿಗಿಂತಲೂ ವೇಗ ಇರುತ್ತದೆ. ರೈಲ್ವೆ ಹಳಿಗಳ ಮೇಲೆ ವಿಮಾನ ಹೋದಂತೆ ಅನುಭವ ಆಗುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು. ಡಿಆರ್‌ಎಂ ರಾಹುಲ್ ಅಗರ್ವಾಲ್, ಎಡಿಆರ್‌ಎಂ ವಿನಾಯಕ್ ಆರ್.ನಾಯಕ್, ಎಡಿಆರ್‌ಎ ಇ.ವಿಜಯಾ ಸೇರಿದಂತೆ ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು-ಕುಶಾಲನಗರ ಹೊಸ ರೈಲು ಮಾರ್ಗ; ಮುಂದಿನ ಮಾರ್ಚ್ ವೇಳೆಗೆ ಫೈನಲ್ ಲೋಕೇಷನ್ ಸರ್ವೇ ವರದಿ ಸಿದ್ಧ

ಮೈಸೂರು–ಕುಶಾಲನಗರ ಹೊಸ ರೈಲು ಮಾರ್ಗದ ಫೈನಲ್ ಲೋಕೇಷನ್ ಸರ್ವೇ ವರದಿ ಮುಂದಿನ ಮಾರ್ಚ್‌ನಲ್ಲಿ ಸಿದ್ಧಗೊಳ್ಳಲಿದ್ದು, ಬಳಿಕ ಅನುಮೋದನೆ ಪಡೆದು ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲು ಉದ್ದೇಶಿಸಲಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ಅಂದಾಜು 1,854 ಕೋಟಿ ರೂ. ವೆಚ್ಚದಲ್ಲಿ ಈ ಹೊಸ ಮಾರ್ಗ ನಿರ್ಮಿಸಲು ಈಗಾಗಲೇ ಅನುಮೋದನೆ ದೊರೆತಿದೆ. ಡಿಪಿಆರ್ ಆದ ಬಳಿಕ ವೆಚ್ಚ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಈ ನೂತನ ಮಾರ್ಗದಲ್ಲಿ ಬೆಳಗೊಳ, ಇಲವಾಲ, ಬಿಳಿಕೆರೆ, ಉದ್ದೂರು, ಹುಣಸೂರು, ಸತ್ಯಗಾಲ, ಪಿರಿಯಾಪಟ್ಟಣ ದೊಡ್ಡಹೊನ್ನೂರು ಹಾಗೂ ಕುಶಾಲನಗರ ಸೇರಿದಂತೆ ಒಟ್ಟು 9 ನಿಲ್ದಾಣಗಳು ಬರಲಿವೆ ಎಂದರು.

ಶ್ರದ್ಧಾಂಜಲಿ



ಇವರು ದಿನಾಂಕ: 09.11.2022 ರಂದು ದೈವಾಧೀನರಾಗಿದ್ದು

ಸಂತಾಪ ಸೂಚಿಸುವವರು ಕುಟುಂಬ ಹಾಗೂ ಬಂಧುಮಿತ್ರರು

ಎಂ ದಿವಾಕರ ಕಾಮತ್

ನಿವೃತ್ತ ಪಾಲುದಾರರು, ಜ್ಯೋತಿ ಹೋಂ ಇಂಡಸ್ಟ್ರೀಸ್, ಚಾಮರಾಜನಗರ

ಮೈಸೂರು ಮಿತ್ರ ಶುಕ್ರವಾರ 11, ನವೆಂಬರ್ 2022

ಇಂದು ಕನಕದಾಸರ ಜಯಂತಿ ಆಚರಣೆ

ಮಡಿಕೇರಿ, ನ.10– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಕನಕದಾಸ ಜಯಂತಿ ಕಾರ್ಯಕ್ರಮವು ನ.11 ರಂದು ಬೆಳಗ್ಗೆ 10.30 ಗಂಟೆಗೆ ಕುಶಾಲ ನಗರದ ವಾಲ್ಮೀಕಿ ಭವನದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಎಂ.ಪಿ.ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಆಯನೂರು ಮಂಜುನಾಥ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿಕಾಳಪ್ಪ, ಕುಶಾಲನಗರ ಪ.ಪಂ.ಅಧ್ಯಕ್ಷರಾದ ಜಯವರ್ಧನ, ಮುಳ್ಳುಸೋಗೆ ಗ್ರಾಪಂ ಅಧ್ಯಕ್ಷ ಚೆಲುವರಾಜ್, ಕೂಡು ಮಂಗಳೂರು ಗ್ರಾ.ಪಂ. ಅಧ್ಯಕ್ಷರಾದ ಇಂದಿರಾ ರಮೇಶ್, ಸಂಗೊಳ್ಳಿ ರಾಯಣ್ಣ ಕುರುಬರ ಹಿತರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಆರ್.ಪ್ರಭಾಕರ್, ಕೊಡಗು ಜಿಲ್ಲಾ ಕುರುಬ ಸಂಘದ ಅಧ್ಯಕ್ಷ ಎಚ್.ಎಸ್.ಮಹೇಶ್, ಹೆಬ್ಬಾಲೆ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಕನ್ನಡ ಶಿಕ್ಷಕ ಮೆ.ನ.ವೆಂಕಟನಾಯಕ್, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಜಿ.ಪಂ.ಸಿಇಒ ಡಾ.ಎಸ್.ಆಕಾಶ್ ಇತರರು ಪಾಲ್ಗೊಳ್ಳಲಿದ್ದಾರೆ.

ಗ್ರೇಟರ್ ರಾಜಸೀಟು ಅಭಿವೃದ್ಧಿ ಕಾಮಗಾರಿ ವೀಕ್ಷಿಸಿದ ಡಿಸಿ

ಲೋ ರೋಪ್‌ವೇ, ಕಿಡ್ಸ್ ನೆಟ್ ಕ್ಲೈಂಬಿಂಗ್, ಮಕ್ಕಳ ಸಾಹಸ ಚಟುವಟಿಕೆಗಳಿಗೆ ಅನುಮೋದನೆ

ಮಡಿಕೇರಿ, ನ.10– ರಾಜಸೀಟು ಅಭಿವೃದ್ಧಿ ಸಮಿತಿ ಸಭೆಯು ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅವರ ಅಧ್ಯಕ್ಷತೆಯಲ್ಲಿ ನಗರದ ರಾಜಸೀಟು ಉದ್ಯಾನವನದಲ್ಲಿ ಗುರುವಾರ ನಡೆಯಿತು.

ಗ್ರೇಟರ್ ರಾಜಸೀಟು ಅಭಿವೃದ್ಧಿ ಕಾಮಗಾರಿ ವೀಕ್ಷಣೆ ನಂತರ ನಡೆದ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ರಾಜಸೀಟು ಅಭಿವೃದ್ಧಿ ಸಂಬಂಧಿಸಿದಂತೆ ಲೋ ರೋಪ್‌ವೇ, ಕಿಡ್ಸ್ ನೆಟ್ ಕ್ಲೈಂಬಿಂಗ್ ಸೇರಿದಂತೆ ಮಕ್ಕಳು ಆಟವಾಡುವ ಸಾಹಸ ಚಟುವಟಿಕೆಗಳಿಗೆ ಅನುಮೋದನೆ ನೀಡಿದರು. ರಾಜಸೀಟು ಉದ್ಯಾನವನದ ನಿರ್ಗಮನದ ಬಾಗಿಲು, ಟಿಕೆಟ್ ಕೌಂಟರ್ ಮುಂಭಾಗದಲ್ಲಿ ಸ್ಟೀಲ್ ರೈಲಿಂಗ್ ಅಳವಡಿಸುವುದು, ಕೂರ್ಗ್ ವಿಲೇಜ್‌ನಲ್ಲಿ ಪ್ರವೇಶ ಬಾಗಿಲು ಮತ್ತು ಪುಟಾಣಿ ರೈಲು ಜಾಗದಲ್ಲಿ ಚೈನ್ ಲಿಂಕ್ ಪೆನ್ಸಿಂಗ್ ಅಳವಡಿಸುವುದು, ಪಾಲಿಹೌಸ್ ನಿರ್ಮಾಣ ಮತ್ತಿತರ ಕಾಮಗಾರಿಗಳಿಗೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಅನುಮೋದಿಸಿದರು.

ರಾಜಸೀಟು ಅಭಿವೃದ್ಧಿ ಸಂಬಂಧಿಸಿದಂತೆ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳಬೇಕಿದ್ದರೂ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು, ತಾಂತ್ರಿಕ ಪರಿಣತರಿಂದ ವರದಿ ಪಡೆದು ಕಾಮಗಾರಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಲಹೆ ನೀಡಿದರು.

ರಾಜಸೀಟಿನ ಪುಟಾಣಿ ರೈಲು ಅಭಿವೃದ್ಧಿ ಸಂಬಂಧಿಸಿದಂತೆ 'ಪಿಪಿಪಿ' ಮಾದರಿಯಲ್ಲಿ ನಿರ್ವಹಣೆ ಮಾಡಿದರೆ ಒಳ್ಳೆಯದು, ಇದರಿಂದ ಹೊರಗುತ್ತಿಗೆ ಅವರೇ ನಿರ್ವಹಣೆ ಮಾಡುತ್ತಾರೆ. ಈ ಬಗ್ಗೆ ಗಮನಹರಿಸುವಂತೆ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರಿಗೆ ಅವರು ತಿಳಿಸಿದರು.

ರಾಜಸೀಟಿನಲ್ಲಿ ಪ್ಲಾಸ್ಟಿಕ್ ಬಾಟಲ್‌ನ್ನು ಎಲ್ಲೆಂದರಲ್ಲಿ ಬಿಸಾಡುತ್ತಾರೆ. ಇದನ್ನು ತಡೆಯುವಲ್ಲಿ ಅಲ್ಲಲ್ಲಿ ಡಸ್ಟ್‌ಬಿನ್‌ಗಳನ್ನು ಇಡುವುದು, ಹಾಗೆಯೇ ಶುದ್ಧೀಕರಿಸಿದ ಕುಡಿಯುವ ನೀರಿನ ಘಟಕ ಅಳವಡಿಸುವುದು, ಹಾಗೆಯೇ ಪರಿಸರ ಸ್ನೇಹಿ ಶೌಚಾಲಯ ನಿರ್ಮಾಣಕ್ಕೆ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ ಅವರು ಸೂಚಿಸಿದರು.

ರಾಜಸೀಟು ಬಳಿ ಇರುವ ಕೂರ್ಗ್ ವಿಲೇಜ್‌ನ್ನು ಅಭಿವೃದ್ಧಿಪಡಿಸಿ ಪ್ರವಾಸಿಗರು ಭೇಟಿ ನೀಡುವಂತಾಗಲು ಅಗತ್ಯ ಕ್ರಮ ಕೈಗೊಳ್ಳಬೇಕು. ರಾಜಸೀಟಿನಲ್ಲಿ ಧ್ವನಿವರ್ಧಕ ಅಳವಡಿಸಿ, ಸಣ್ಣ ಸಂಗೀತ ಮಾದರಿಯ ಧ್ವನಿ ಇರಬೇಕು. ಹಾಗೆಯೇ ಬೆಳಕು ವ್ಯವಸ್ಥೆ ಮಾಡಬೇಕು ಎಂದು ಅವರು ಹೇಳಿದರು.

ರಾಜಸೀಟು ಮುಂಭಾಗದಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಬದಲಿ ವ್ಯವಸ್ಥೆ ಮಾಡಲು ಟೆಂಡರ್ ಆಹ್ವಾನಿಸುವಂತಾಗಬೇಕು. ಇದರಿಂದ ರಾಜಸೀಟು ಅಭಿವೃದ್ಧಿಗೆ ಮತ್ತಷ್ಟು ಹಣ ಸಂಗ್ರಹವಾಗಲಿದೆ ಆ ನಿಟ್ಟಿನಲ್ಲಿ ಲೋಕೋಪಯೋಗಿ ಮತ್ತು ನಿರ್ಮಿತಿ ಕೇಂದ್ರದವರು ಅಂದಾಜು ಪಟ್ಟಿ ಸಲ್ಲಿಸುವಂತೆ ಅವರು ಸೂಚಿಸಿದರು. ನೆಹರು ಮಂಟಪದಲ್ಲಿ ಬೆಳಗ್ಗೆ 8 ರಿಂದ ರಾತ್ರಿ 7 ಗಂಟೆವರೆಗೆ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ಮಾಡಬೇಕು. ಇನ್ನಷ್ಟು ಅಭಿವೃದ್ಧಿ ಕೆಲಸ ಕೈಗೊಳ್ಳಬೇಕು. ನೆಹರು ಮಂಟಪಕ್ಕೆ ಒಬ್ಬ ರಕ್ಷಕರನ್ನು ನಿಯೋಜಿಸುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

'ರಾಜರ ಗದ್ದುಗೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸುವಲ್ಲಿ ಮುಂದಾಗಬೇಕು. ಸಿಸಿ ಟಿವಿ ಅಳವಡಿಸಬೇಕು. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ರಾಜರ ಗದ್ದುಗೆಗೆ ಭೇಟಿ ನೀಡುವಂತಾಗಲು ಇನ್ನಷ್ಟು ಆಕರ್ಷಣೀಯ ಮಾಡುವಲ್ಲಿ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಡಾ.ಬಿ.ಸಿ.ಸತೀಶ ಸೂಚಿಸಿದರು.



ಜಿ.ಪಂ. ಸಿಇಒ ಡಾ.ಎಸ್.ಆಕಾಶ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶಬಾನಾ ಎಂ.ಷೇಕ್, ಕಾಫಿ ಮಂಡಳಿ ಉಪ ನಿರ್ದೇಶಕ ಚಂದ್ರಶೇಖರ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್ ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪಾಷಾ, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಚಿನ್, ಲೋಕೋಪಯೋಗಿ ಇಲಾಖೆಯ ಎಂಜಿನಿಯರ್‌ಗಳಾದ ಚೆನ್ನಕೇಶವ, ದೇವರಾಜು, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರಾದ ಮುತ್ತಪ್ಪ, ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್ ರೇಖಾ, ಪ್ರವಾಸೋದ್ಯಮ ಇಲಾಖೆಯ ಜತೀನ್ ಇತರರು ಹಲವು ಮಾಹಿತಿ ನೀಡಿದರು. ತೋಟಗಾರಿಕೆ ಇಲಾಖೆಯ ಅಧೀಕ್ಷಕರಾದ ಪ್ರಕಾಶ್, ಗಣೇಶ್, ಸತೀಶ್ ಇತರರಿದ್ದರು.

ಕೊಲೆ ಯತ್ನ ಆರೋಪಿಗೆ 5 ವರ್ಷ ಸಜೆ, 30 ಸಾವಿರ ದಂಡ

ಗೋಣಿಕೊಪ್ಪ, ನ.10– ಕೊಲೆ ಯತ್ನ ಆರೋಪ ಸಾಬೀತಾದ ಹಿನ್ನೆಲೆ ಕೈಕೇರಿ ಗ್ರಾಮದ ಎ.ಆರ್. ಪ್ರಭು (39) ಅವರಿಗೆ ವಿರಾಜಪೇಟೆಯಲ್ಲಿರುವ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 5 ವರ್ಷ ಸಾದಾ ಸಜೆ, 30 ಸಾವಿರ ದಂಡ ವಿಧಿಸಿದೆ.

ತನ್ನ ಪತ್ನಿಯ ಜೊತೆ ಅಕ್ರಮ ಸಂಬಂಧ ಹೊಂದಿದ್ದಾನೆ ಎಂದು ತಿಳಿದು 2019 ರಲ್ಲಿ ಗೋಣಿಕೊಪ್ಪ ಟಾಸ್ ಬಿಲ್ಡಿಂಗ್‌ನಲ್ಲಿ ಎ.ಆರ್. ಪ್ರಭು ಗೋಣಿಕೊಪ್ಪದ 2ನೇ ವಿಭಾಗದ ನಿವಾಸಿ ರಿಶನ್ (42) ಅವರ ಮೇಲೆ ಕತ್ತಿಯಿಂದ ಹಲ್ಲೆ ಮಾಡಿದ್ದ. ತಲೆಯ ಹಿಂಭಾಗ ಮತ್ತು ಎಡಕೈಗೆ ಗಾಯವಾಗಿತ್ತು.

ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಉಪ ನಿರೀಕ್ಷಕ ಬಿ.ಎಸ್. ಶ್ರೀಧರ್ ಅವರು ಎ.ಆರ್. ಪ್ರಭು ವಿರುದ್ಧ ಐಪಿಸಿ ಸೆಕ್ಷನ್ 307 ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ವೇಳೆ ಆರೋಪಿ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ಸುಜಾತ ಅವರು ಆಪಾದಿತನಿಗೆ 5 ವರ್ಷ ಸಾದಾ ಸಜೆ, 30 ಸಾವಿರ ದಂಡ ವಿಧಿಸಿ ಬುಧವಾರ ಆದೇಶಿಸಿದ್ದಾರೆ. ಸರ್ಕಾರಿ ಅಭಿಯೋಜಕ ಡಿ. ನಾರಾಯಣ, ಯಾಸೀನ್ ಅಹಮದ್ ವಾದಿಸಿದ್ದರು.

ಪೈಸಾರಿ ಜಾಗದಲ್ಲಿ ನಿರ್ಮಿಸಿದ್ದ ಅಕ್ರಮ ಕಟ್ಟಡ ತೆರವು

ಗೋಣಿಕೊಪ್ಪ, ನ.10– ಅರ್ವತೊಕ್ಲು ಗ್ರಾಮದ ಪೈಸಾರಿ ಜಾಗದಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡಿದ್ದ ಕಾಡ್ಲಯ್ಯಪ್ಪ ಸ್ಪೋರ್ಟ್ಸ್ ಆಂಡ್ ರಿಕ್ರಿಯೇಷನ್ ಅಸೋಸಿಯೇಷನ್ ಕಟ್ಟಡವನ್ನು ಗುರುವಾರ ಅಧಿಕಾರಿಗಳು ತೆರವುಗೊಳಿಸಿದರು.



ಉಚ್ಚ ನ್ಯಾಯಾಲಯ ಆದೇಶದಂತೆ ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ಎಡಿಸಿ ನಂಜುಂಡೇಗೌಡ, ಮಡಿಕೇರಿ ತಹಸೀಲ್ದಾರ್ ಮಹೇಶ್, ಪೊನ್ನಂಪೇಟೆ ತಹಸೀಲ್ದಾರ್ ಪ್ರಶಾಂತ್ ನೇತೃತ್ವದಲ್ಲಿ ಕಟ್ಟಡವನ್ನು ತೆರವುಗೊಳಿಸಲಾಯಿತು. 5 ಸೆಂಟ್ ಸರ್ಕಾರಿ ಜಾಗವನ್ನು ನಿವೃತ್ತ ಪೊಲೀಸ್ ಅಧಿಕಾರಿ ಅರ್ಜುನ್ ಎಂಬುವವರಿಗೆ ಮಂಜೂರು ಮಾಡಲಾಗಿತ್ತು. ಆದರೂ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರಲಿಲ್ಲ. ಈ ಜಾಗದಲ್ಲಿ ಕಾಡ್ಲಯ್ಯಪ್ಪ ಸ್ಪೋರ್ಟ್ಸ್ ಆಂಡ್ ರಿಕ್ರಿಯೇಷನ್ ಅಸೋಸಿಯೇಷನ್ ವತಿಯಿಂದ ಕಟ್ಟಡ ನಿರ್ಮಿಸಿಕೊಳ್ಳಲಾಗಿತ್ತು. ಈ ಬಗ್ಗೆ ಫಲಾನುಭವಿ ಅರ್ಜುನ್ ಉಚ್ಚ ನ್ಯಾಯಾಲಯದಲ್ಲಿ ಹೂಡಿದ್ದ ಧಾವೆ ಹಿನ್ನೆಲೆಯಲ್ಲಿ ಕಟ್ಟಡ ತೆರವುಗೊಳಿಸುವಂತೆ ತೀರ್ಪು ನೀಡಿತ್ತು.

ಇದರಂತೆ ಅಧಿಕಾರಿಗಳು ಗುರುವಾರ ಕಟ್ಟಡವನ್ನು ತೆರವುಗೊಳಿಸಿದರು. ಬುಧವಾರ ಸಾಯಂಕಾಲ ಅಧಿಕಾರಿಗಳು ತೆರವಿಗೆ ಆಗಮಿಸಿದ್ದ ಸಂದರ್ಭ ಅಸೋಷಿಯೇಷನ್ ಸದಸ್ಯರು ಕಟ್ಟಡದಲ್ಲಿನ ವಸ್ತುಗಳನ್ನು ತೆಗೆಯಲು ಕಾಲಾವಕಾಶ ಕೇಳಿದ್ದರು. ಅದರಂತೆ ಕಟ್ಟಡವನ್ನು ವಶಕ್ಕೆ ಪಡೆದುಕೊಂಡು ಗುರುವಾರ ಪೊಲೀಸ್ ಇಲಾಖೆ ಭದ್ರತೆಯಲ್ಲಿ ತೆರವುಗೊಳಿಸಲಾಯಿತು.

ಎರಡು ವಾರದಲ್ಲಿ ಹದಗೆಟ್ಟ ವಿರಾಜಪೇಟೆ ರಸ್ತೆ ದುರಸ್ತಿಗೊಳಿಸದಿದ್ದರೆ ಜೆಡಿಎಸ್‌ನಿಂದ ಪ್ರತಿಭಟನೆ



ವಿರಾಜಪೇಟೆ, ನ10– ವಿರಾಜಪೇಟೆ ತಾಲೂಕು ಹಾಗೂ ಜಿಲ್ಲಾ ಮಟ್ಟದ ಎಲ್ಲಾ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು, ವಾಹನಗಳು ಮತ್ತು ಸಾರ್ವಜನಿಕರ ಸಂಚಾರ ದುಸ್ತರವಾಗಿದೆ. ಎರಡು ವಾರದೊಳಗೆ ಈ ಹದಗೆಟ್ಟ ರಸ್ತೆಗಳನ್ನು ದುರಸ್ತಿಗೊಳಿಸದಿದ್ದರೆ ಜೆಡಿಎಸ್ ಪಕ್ಷದ ತಾಲೂಕು ಸಮಿತಿಯಿಂದ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಗುವುದು ಎಂದು ಜಾತ್ಯತೀತ ಜನತಾದಳದ ರಾಜ್ಯ ವಕ್ತಾರ–ಕಾರ್ಯದರ್ಶಿ ಸಂಕೇತ್ ಪೂವಯ್ಯ ತಿಳಿಸಿದ್ದಾರೆ.

ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯ ಪಾಲಕ ಅಭಿಯಂತರ ವೈ.ಎಸ್.ಸಿದ್ದೇಗೌಡರಿಗೆ ತಮ್ಮ ಬೆಂಬಲಿಗರೊಂದಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ನಾವು ಪ್ರಚಾರದ ಹೋರಾಟ ಮಾಡುತ್ತಿಲ್ಲ. ಆದರೆ ಬಹಳ ನೋವಿನಿಂದ ಹೇಳುತ್ತಿದ್ದೇವೆ. ರಸ್ತೆಗಳ ಗುಂಡಿ ಮುಚ್ಚಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಬೇರೆ ದೇಶಕ್ಕಿಂತ ಹೆಚ್ಚು ವಾಹನ ತೆರಿಗೆಯನ್ನು ನಮ್ಮ ದೇಶದಲ್ಲಿ ಕೊಡಲಾಗುತ್ತಿದೆ. ಸರಕಾರ ಅಧಿಕಾರಿಗಳು ಅಂಕಿ–ಅಂಶ ನೀಡುತ್ತಾರೆ. ಆದರೆ ಅದು ಕಾರ್ಯ ರೂಪಕ್ಕೆ ಬಂದಿಲ್ಲ, ಈ ಮನವಿಯನ್ನು ಶಾಸಕರ ಗಮನಕ್ಕೆ ತಂದು ಸರಕಾರಕ್ಕೆ ಕೂಡಲೇ ತಲುಪಿಸುವಂತೆ ಹೇಳಿದರು.

ಜೆಡಿಎಸ್ ತಾಲೂಕು ಸಮಿತಿ ಅಧ್ಯಕ್ಷ ಪಿ.ಎ. ಮಂಜುನಾಥ್ ಮಾತನಾಡಿ, ಇಲಾಖೆಗೆ ಸೇರಿದ ಪಟ್ಟಣಕ್ಕೆ ಒಳಗೊಂಡಂತೆ ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಯೋಗ್ಯವಿಲ್ಲ. ಗರ್ಭಿಣಿ ಸ್ತ್ರೀಯರು ರೋಗಿಗಳನ್ನು ತುರ್ತು ಜಿಲ್ಲಾ ಆಸ್ಪತ್ರೆಗೆ ಸಾಗಿಸಲು ಸಾಧ್ಯವಾಗದೆ ಹರಸಾಹಸ ಪಡಬೇಕಾಗಿದೆ. ಅನೇಕ ವಾಹನಗಳು ಅವಘಡದಿಂದಾಗಿ ಅಂಗ ವಿಕಲರಾಗಿದ್ದಾರೆ. ಅನೇಕ ದ್ವಿ ಚಕ್ರವಾಹನ ಚಾಲಕರು ಜೀವ ಕೈಯಲ್ಲಿಡಿದು ಸಂಚಾರಿಸುವಂತಾಗಿದೆ. ಅದರಿಂದ ಇನ್ನು ಎರಡು ವಾರದಲ್ಲಿ ರಸ್ತೆ ಅಭಿವೃದ್ಧಿಗೊಳಿಸುವಂತಾಗಬೇಕು. ಇಲ್ಲವಾದಲ್ಲಿ ಪಕ್ಷದ ವತಿಯಿಂದ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸುವುದಾಗಿ ಮನವಿಯಲ್ಲಿ ಎಚ್ಚರಿಸಿದ್ದಾರೆ.

ಜೆಡಿಎಸ್ ಪಕ್ಷದ ಮುಖಂಡರಾದ ಪಂದ್ಯಂಡ ರವಿ ಮಾದಪ್ಪ, ಆರ್.ಕೆ.ಸಕ್ಲೇನ್, ಅಪ್ಪಡೆರವಂಡ ಸನ್ನು ಕುಶಾಲಪ್ಪ, ಟಿ.ಆರ್.ಹರ್ಷ, ಸಾಧಲಿ, ಅಲ್ಪಸಂಖ್ಯಾತ ಘಟಕದ ತಾಲೂಕು ಅಧ್ಯಕ್ಷ ಮಜೀದ್, ಜುಬೈದ ನುಬುವತ್, ಪಾಣತ್ತಲೆ ಸತ್ಯ ಮತ್ತಿತರರು ಉಪಸ್ಥಿತರಿದ್ದರು.

ಜಿಂಕೆ ಚರ್ಮ ಅಕ್ರಮ ಮಾರಾಟ ಯತ್ನ ಆರೋಪಿ ಬಂಧನ, ಜಿಂಕೆ ಚರ್ಮ ವಶ

ಮಡಿಕೇರಿ,ನ.10– ಅಕ್ರಮವಾಗಿ ಜಿಂಕೆ ಚರ್ಮವನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಓರ್ವ ಆರೋಪಿಯನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದ್ದು, ಆತನಿಂದ ಒಂದು ಜಿಂಕೆ ಚರ್ಮವನ್ನು ವಶಕ್ಕೆ ಪಡೆಯಲಾಗಿದೆ.



ಮಡಿಕೇರಿಯ ಸುದರ್ಶನ ವೃತ್ತದಿಂದ ಸಿದ್ದಾಪುರ ಮಾರ್ಗಕ್ಕೆ ತೆರಳುವ ರಸ್ತೆಯಲ್ಲಿರುವ ಬಸ್ ತಂಗುದಾಣದ ಬಳಿ ವ್ಯಕ್ತಿಯೊಬ್ಬ ಜಿಂಕೆ ಚರ್ಮ ಮಾರಾಟಕ್ಕೆ ಯತ್ನಿಸುತ್ತಿರುವ ಬಗ್ಗೆ ಮಾಹಿತಿ ತಿಳಿದು ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಸಿಬ್ಬಂದಿಗಳು ದಾಳಿ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ಪ್ರಕರಣದಲ್ಲಿ ನಂಜನಗೂಡು ಮೂಲದ ವೆಂಕಟೇಶ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತ ಆರೋಪಿ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ. ಶರತ್‌ಚಂದ್ರ ನಿರ್ದೇಶನದ ಮೇರೆಗೆ ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಕೆ.ಬಿ ವಿಶ್ವನಾಥ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿ.ಎಸ್.ಐ ಸಿ.ಯು.ಸವಿ ಹೆಡ್‌ಕಾನ್ಸ್‌ಟೇಬಲ್‌ಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ ಹಾಗೂ ಕಾನ್ಸ್‌ಟೇಬಲ್ ಸ್ವಾಮಿ, ಮಂಜುನಾಥ ಅವರುಗಳು ಪಾಲ್ಗೊಂಡಿದ್ದರು.

ಮತ್ತೆ ರಾಜ್ಯ ರಾಜಕಾರಣಕ್ಕೆ ಧ್ರುವನಾರಾಯಣ್

ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ?

ಚಾಮರಾಜನಗರ, ನ10– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಾಧ್ಯಕ್ಷರೂ ಆದ, ಮಾಜಿ ಸಂಸದ ಆರ್.ಧ್ರುವ ನಾರಾಯಣ್ ಅವರು ರಾಜ್ಯ ರಾಜಕಾರಣಕ್ಕೆ ಮತ್ತೆ ಪ್ರವೇಶಿಸುವುದು ಬಹುತೇಕ ಖಚಿತವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆ ನಂಜನಗೂಡು ಮೀಸಲು ಕ್ಷೇತ್ರದಿಂದ ಧ್ರುವನಾರಾಯಣ್ ಸ್ಪರ್ಧಿಸಲಿದ್ದಾರೆ. ಇದಕ್ಕಾಗಿ ಅವರು ವೇದಿಕೆಯನ್ನು ಸಿದ್ದಪಡಿಸಿಕೊಳ್ಳುತ್ತಿರುವುದು ಸ್ಪಷ್ಟವಾಗಿದೆ.



> ನಾನು ಎರಡು ಬಾರಿ ಶಾಸಕನಾಗಿ, ಎರಡು ಬಾರಿ ಸಂಸದನಾಗಿ ಚುನಾಯಿತನಾಗಿದ್ದೇನೆ. 2009ರ ಅವಧಿಯಲ್ಲಿ ನಾನೂ ಶಾಸಕನಾಗಿದ್ದರೂ ಸಹ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಪಕ್ಷದ ವರಿಷ್ಠರು ನನಗೆ ಅವಕಾಶ ಕಲ್ಪಿಸಿದ್ದರು. ಅಲ್ಲಿಂದ ಇಲ್ಲಿಯವರೆಗೂ ರಾಷ್ಟ್ರ ರಾಜಕಾರಣದಲ್ಲಿ ಸಕ್ರಿಯವಾಗಿದ್ದೇನೆ. ಇದೀಗ ನಾನು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಪಕ್ಷದ ವರಿಷ್ಠರ ತೀರ್ಮಾನ ಮಾಡುತ್ತಾರೆ. ವರಿಷ್ಠರ ತೀರ್ಮಾನಕ್ಕೆ ನಾನು ಬದ್ಧನಾಗಿರುತ್ತೇನೆ. –ಆರ್. ಧ್ರುವನಾರಾಯಣ್.

2009ರ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಗಳಿಸುವ ಮೂಲಕ ರಾಷ್ಟ್ರ ರಾಜಕಾರಣಕ್ಕೆ ಪ್ರವೇಶಿಸಿದ್ದರು. ಇದಾದ ನಂತರ 2014ರ ಲೋಕಸಭಾ ಚುನಾವಣೆಯಲ್ಲೂ ಸಹ ಜಯಗಳಿಸಿ ತಮ್ಮ ರಾಷ್ಟ್ರ ರಾಜಕಾರಣವನ್ನು ಮುಂದುವರೆಸಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಅಲ್ಪ ಮತಗಳ ಅಂತರದಿಂದ ಪರಾಜಿತಗೊಂಡಿದ್ದರು. ಈಗ ಅವರ ಚಿತ್ತ ರಾಷ್ಟ್ರ ರಾಜಕಾರಣದಿಂದ ರಾಜ್ಯ ರಾಜಕಾರಣದತ್ತ ವಾಲಿದ್ದು, 2023ರ ವಿಧಾನ ಸಭಾ ಚುನಾವಣೆ ಮೂಲಕ ರಾಜ್ಯ ಕಾರಣಕ್ಕೆ ಮತ್ತೊಮ್ಮೆ ಇಳಿಯಲಿದ್ದಾರೆ.

ಕೇಂದ್ರದಲ್ಲಿ ಮುಂದಿನ ಚುನಾವಣೆಯಲ್ಲೂ ಸಹ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ವಾತಾವರಣ ಕಡಿಮೆ ಇದೆ ಇದಲ್ಲದೇ ರಾಷ್ಟ್ರಾದ್ಯಂತ ಈಗಲೂ ಸಹ ನರೇಂದ್ರ ಮೋದಿ ಅವರ ಹವಾ ಮುಂದುವರೆದಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದರೆ, ಕೇವಲ ಸಂಸದರಾಗೆ ಉಳಿಯ ಬೇಕಾಗುತ್ತದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ನಿರೀಕ್ಷೆ ಇರುವುದ ರಿಂದ ಧ್ರುವನಾರಾಯಣ್ ಅವರು ಸಚಿವರಾಗ ಬಹುದು ಎಂಬ ಕಾರಣಕ್ಕೆ ರಾಷ್ಟ್ರ ರಾಜಕಾರಣಕ್ಕೆ ಗುಡ್‌ಬೈ ಹೇಳಿ ರಾಜ್ಯ ರಾಜಕಾರಣದತ್ತ ಒಲವು ತೋರಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿದೆ.

ತಾವು ಪ್ರತಿನಿಧಿಸುತ್ತಿದ್ದ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳು ಒಳಪಡುತ್ತವೆ. ಲೋಕಸಭಾ ಕ್ಷೇತ್ರದ ವಿಸ್ತಾರ ದೊಡ್ಡದಾಗಿರುವುದರಿಂದ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದರೂ ಸಹ ಅದು ಮತದಾರರ ಕಣ್ಣಿಗೆ ದೊಡ್ಡ ಪ್ರಮಾಣದಲ್ಲಿ ಕಾಣಿಸುವುದಿಲ್ಲ. ವಿಧಾನಸಭಾ ಕ್ಷೇತ್ರವಾದರೆ ಅದರ ಗಾತ್ರ ಚಿಕ್ಕದಾಗಿರುತ್ತದೆ. ಮಾಡಿದ ಅಭಿವೃದ್ಧಿ ಕಾರ್ಯಗಳು ಕ್ಷೇತ್ರದ ಜನರಿಗೆ ಗೊತ್ತಾಗುತ್ತದೆ. ತಾವು ಸಂಸದರಾಗಿದ್ದ ಅವಧಿಯಲ್ಲಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದರೂ ಸಹ, ಉತ್ತಮ ಸಂಸದ ಎಂಬ ಕೀರ್ತಿ ಪಡೆದರೂ ಸಹ 2019ರ ಲೋಕಸಭಾ ಚುನಾವಣೆಯಲ್ಲಿ 1816 ಮತಗಳ ಅಂತರದಿಂದ ಸೋಲಬೇಕಾಯಿತು. ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯ ಮಾಡಿದ್ದರೂ ಸಹ ಸೋಲ ಬೇಕಾಯಿತಲ್ಲಾ ಎಂಬ ಬೇಸರ ಅವರಲ್ಲಿರುವ ಕಾರಣವೂ ಸಹ ಅವರು ರಾಷ್ಟ್ರ ರಾಜಕಾರಣದಿಂದ ದೂರ ಉಳಿಯಲು ತೀರ್ಮಾನಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಮೈಸೂರು ಭಾಗದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪ ಅವರನ್ನು ಹೊರತು ಪಡಿಸಿದರೆ ಬೇರೆ ಪ್ರಬಲ ದಲಿತ ನಾಯಕರಿಲ್ಲ. ನಾನು ರಾಜ್ಯ ರಾಜಕಾರಣಕ್ಕೆ ಮರಳಿದರೆ ಮೈಸೂರು ಭಾಗದಲ್ಲಿ ಪಕ್ಷದಿಂದ ನನಗೆ ಹೆಚ್ಚಿನ ಪ್ರಾಶಸ್ತ್ಯ ಸಿಗಲಿದೆ ಎಂಬ ಚಿಂತನೆ ಅವರಲ್ಲಿದೆ.

ಧ್ರುವನಾರಾಯಣ್ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕೊಳ್ಳೇಗಾಲ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬ ಒತ್ತಾಯವನ್ನು ಅವರ ಬೆಂಬಲಿಗರು ಮಾಡುತ್ತಿದ್ದಾರೆ. ಆದರೆ ಧ್ರುವನಾರಾಯಣ್ ಅವರು ಕೊಳ್ಳೇಗಾಲ ಕ್ಷೇತ್ರದಿಂದ ಸ್ಪರ್ಧಿಸಲು ಮೂವರು ಮಾಜಿ ಶಾಸಕರು (ಎ.ಆರ್.ಕೃಷ್ಣಮೂರ್ತಿ, ಬಾಲರಾಜು, ಎಸ್. ಜಯಣ್ಣ) ಪ್ರಬಲ ಆಕಾಂಕ್ಷಿಗಳಾಗಿರುವ ಕಾರಣ ಆ ಕ್ಷೇತ್ರದತ್ತ ಹೆಚ್ಚಿನ ಒಲವು ತೋರುತ್ತಿಲ್ಲ ಎನ್ನಲಾಗಿದೆ. ನಂಜನಗೂಡು ಮೀಸಲು ಕ್ಷೇತ್ರದಿಂದ ಸ್ಪರ್ಧಿಸಲು ಧ್ರುವನಾರಾಯಣ್ ಒಲವು ತೋರಿದ್ದಾರೆ ಎನ್ನಲಾಗಿದೆ. ಇದಕ್ಕಾಗಿ ಅವರು ಈಗಾಗಲೇ ಆ ಕ್ಷೇತ್ರಾದ್ಯಂತ ಹೆಚ್ಚಾಗಿ ಪ್ರವಾಸ ನಡೆಸುತ್ತಿದ್ದಾರೆ. ಕ್ಷೇತ್ರದ ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡಿದ್ದಾರೆ ಎನ್ನಲಾಗಿದೆ.



ಕೃಷಿ ಪತ್ತಿನ ಸಂಘದ ನೂತನ ಅಧ್ಯಕ್ಷರಾಗಿ ಸೋಮಶೇಖರ್, ಉಪಾಧ್ಯಕ್ಷರಾಗಿ ಶೀಲಾ ಅವಿರೋಧ ಆಯ್ಕೆ

ಕೊಳ್ಳೇಗಾಲ. ನ.10– ಕೊಳ್ಳೇಗಾಲ ನಗರದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಭೀಮನಗರದ ಸೋಮಶೇಖರ್, ಉಪಾಧ್ಯಕ್ಷರಾಗಿ ಶೀಲಾ ಸುರೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗುರುವಾರ ಬೆಳಗ್ಗೆ ನಗರದ ಬಸ್ತೀಪುರ ರಸ್ತೆಯಲ್ಲಿರುವ ಸಹಕಾರಿ ಸಂಘದ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷ ಸ್ಥಾನಕ್ಕೆ ಸೋಮಶೇಖರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶೀಲಾ ಸುರೇಶ್ ಮಾತ್ರ ನಾಮಪತ್ರ ಸಲ್ಲಿಸಿದ ಹಿನ್ನೆಲೆ ಚುನಾವಣಾಧಿಕಾರಿ ನಾಗೇಶ್ ಅವಿರೋಧ ಆಯ್ಕೆ ಘೋಷಿಸಿದರಲ್ಲದೆ ಆದೇಶ ಪ್ರತಿ ನೀಡಿ ಅಭಿನಂದಿಸಿದರು.

ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಿಗೆ ಭೀಮನಗರ ಯಜಮಾನರು, ಮುಖಂಡರುಗಳು, ಅಭಿಮಾನಿಗಳು ಶಾಲು, ಹಾರ ಹಾಕಿ ಮೈಸೂರು ಪೇಟ ತೊಡಿಸಿ ಸಿಹಿ ಹಂಚಿ ಅಭಿನಂದಿಸಿದರು.

ಈ ಸಂಧರ್ಭದಲ್ಲಿ ನಿರ್ಗಮಿತ ಅಧ್ಯಕ್ಷ ಚಿಕ್ಕಬಸವೇಗೌಡ, ನಿರ್ದೇಶಕರುಗಳಾದ ಶಿವಮೂರ್ತಿ, ಮಹೇಶ್, ಮಹದೇವಸ್ವಾಮಿ, ರಮೇಶ್, ಶೈಲಜಾ, ಮಹದೇವಪ್ಪ, ಮಹೇಶ್, ಬಾಲಸುಬ್ರಹ್ಮಣ್ಯಸ್ವಾಮಿ, ಸಂಘದ ಕಾರ್ಯನಿರ್ವಾಹಣಾಧಿಕಾರಿ ಬಿ.ನಾಗರಾಜು ಇನ್ನಿತರರು ಇದ್ದರು

ನ.13ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ನ.10– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನ.13ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಚಾಮರಾಜನಗರ ಟೌನ್–1, ಕೋಡಿಮೋಳೆ, ರಾಮಸಮುದ್ರ, ಮಾದಾಪುರ, ಕಾಗಲವಾಡಿ, ಸೋಮವಾರಪೇಟೆ (ಟೌನ್–2), ಹರದನಹಳ್ಳಿ, ಬೇಡರಪುರ, ಟಿ.ಕೆ.ಮೋಳೆ, ಶಿವಪುರ, ಗೂಳಿಪುರ ಎನ್.ಜೆ.ವೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಇಂದು ನಗರದಲ್ಲಿ ದಾಸಶ್ರೇಷ್ಠ ಕನಕದಾಸರ ಜಯಂತಿ

ಚಾಮರಾಜನಗರ, ನ.10– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಾಸಶ್ರೇಷ್ಠ ಶ್ರೀ ಕನಕದಾಸ ಜಯಂತೋತ್ಸವ ಸಮಿತಿ ಮತ್ತು ಜಿಲ್ಲೆಯ ವಿವಿಧ ಸಂಸ್ಥೆಗಳ ಸಹಕಾರದೊಂದಿಗೆ ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ನ.11ರಂದು ನಗರದಲ್ಲಿ ಆಯೋಜಿಸಲಾಗಿದೆ. ನ.11ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಪ್ರವಾಸಿಮಂದಿರದಲ್ಲಿ ವಿವಿಧ ಕಲಾತಂಡ ಗಳೊಡನೆ ನಡೆಯಲಿರುವ ಕನಕದಾಸರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.



ಮೈಸೂರು ಜಿಲ್ಲೆಯ ಕೆ.ಆರ್.ನಗರದ ಕಾಗಿನೆಲೆ ಕನಕ ಗುರುಪೀಠದ ಶ್ರೀ ಶಿವಾನಂದ ಪುರಿ ಸ್ವಾಮಿಯವರು ದಿವ್ಯ ಸಾನ್ನಿಧ್ಯ ವಹಿಸುವರು. ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು.

ಲೋಕಸಭಾ ಸದಸ್ಯರಾದ ವಿ. ಶ್ರೀನಿವಾಸಪ್ರಸಾದ್, ಶಾಸಕರಾದ ಆರ್. ನರೇಂದ್ರ, ಎನ್. ಮಹೇಶ್, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಎಸ್. ನಿರಂಜನಕುಮಾರ್, ಮರಿತಿಬ್ಬೇಗೌಡ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿ. ನಿಜಗುಣರಾಜು, ನಗರಸಭೆ ಅಧ್ಯಕ್ಷರಾದ ಸಿ.ಎಂ. ಆಶಾ, ಉಪಾಧ್ಯಕ್ಷರಾದ ಪಿ. ಸುಧಾ, ಸದಸ್ಯರಾದ ಮಮತ ಬಾಲಸುಬ್ರಮಣ್ಯಂ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ನಿವೃತ್ತ ಶಿಕ್ಷಕರಾದ ಶಿವಣ್ಣ ಇಂದ್ವಾಡಿ ಅವರು ಮುಖ್ಯ ಭಾಷಣ ಮಾಡುವರು. ಆರ್. ಮಹೇಂದ್ರ ಮತ್ತು ತಂಡದವರು ದಾಸರ ಪದಗಳನ್ನು ಹಾಡುವರು ಎಂದು ಪ್ರಕಟಣೆ ತಿಳಿಸಿದೆ.

ಅಂತಾರಾಷ್ಟ್ರೀಯ ಕನ್ನಡ ರಾಜ್ಯೋತ್ಸವ, ಅನುಭೂತಿ ಶಿಬಿರಕ್ಕೆ ಬೀಳ್ಕೊಡಿಗೆ



ಚಾಮರಾಜನಗರ, ನ.10– ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಅಬು ಪರ್ವತ ರಾಜಸ್ಥಾನದಲ್ಲಿ ನ.13 ರಿಂದ 17ರವರೆಗೆ ಕನ್ನಡ ರಾಜ್ಯೋತ್ಸವ ಹಾಗೂ ಆತ್ಮ ಪರಮಾತ್ಮ ಅನುಭೂತಿ ಶಿಬಿರಕ್ಕೆ 19 ಜನರಿಗೆ ಬೀಳ್ಕೊಡಲಾಯಿತು.

ಏಷ್ಯಾದಲ್ಲೇ 2ನೇ ಸ್ಥಾನದಲ್ಲಿರುವ ಮಧ್ಯ ಕಂಬವಿಲ್ಲದೆ ನಿರ್ಮಾಣಗೊಂಡಿರುವ ಡೈಮಂಡ್ ಜೂಬಲಿ ಹಾಲ್‌ನಲ್ಲಿ 5 ದಿನಗಳು ನಡೆಯುವ ಈ ಕಾರ್ಯಕ್ರಮದಲ್ಲಿ ಕರ್ನಾಟಕದಿಂದ 30000ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಲಿದ್ದಾರೆ. ನಗರದ ಸೇವಾಧಾರಿ ತಂಡದ ನೇತೃತ್ವವನ್ನು ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ವಹಿಸಿದ್ದಾರೆ. ತಂಡದಲ್ಲಿ ಓಂಶಾಂತಿ ನ್ಯೂಸ್ ಸರ್ವೀಸ್‌ನ ಬಿಕೆ ಆರಾಧ್ಯ ಶಿವಕುಮಾರ್, ಗೋವಿಂದರಾಜ ಜಯರಾಂ ನಾಗರಾಜ್ ಮಹದೇವಸ್ವಾಮಿ ಆಶಾ ಸುಧಾ ಬಸಮಣಿ ನಿರ್ಮಲ ಸರಳ ಮಂಜುಳ ಸರಸ್ವತೀ ಪ್ರಮಿಳ ಸುಕನ್ಯ ಪ್ರಕಾಶ್ ಮುಂತಾದವರು ಇದ್ದಾರೆ.

ನ.14 ರಿಂದ 19 ರವರೆಗೆ ನಾಣ್ಯಗಳ ಮೇಳ

ಚಾಮರಾಜನಗರ, ನ.10– ನಗರದ ಭಾರತೀಯ ಸ್ಟೇಟ್ ಬ್ಯಾಂಕ್, ರಥದ ಬೀದಿಯ ಶಾಖೆಯಲ್ಲಿ (ಶಾಖೆ ಕೋಡ್:40062) ನ.4ರಿಂದ ನ.19 ರವರೆಗೆ ನಾಣ್ಯಗಳ ಮೇಳವನ್ನು ಏರ್ಪಡಿಸಲಾಗಿದೆ ಎಂದು ಶಾಖಾ ವ್ಯವಸ್ಥಾಪಕರಾದ ಸಕ್ಸೇನ ತಿಳಿಸಿದ್ದಾರೆ. 5, 10 ಮತ್ತು 20 ರೂ. ಮುಖ ಬೆಲೆಯ ನಾಣ್ಯಗಳನ್ನು ಯಾವುದೇ ಮೊತ್ತಕ್ಕೆ ಬದಲಾಯಿಸಬಹುದು. ರೂ.10 ಮತ್ತು 20ರ ನಾಣ್ಯಗಳೊಂದಿಗೆ (ಕನಿಷ್ಠ 1 ಬ್ಯಾಗ್) ವಿನಿಮಯ ಮಾಡಿಕೊಂಡು ಬೆಳಗ್ಗೆ 11.00 ರಿಂದ ಮಧ್ಯಾಹ್ನ 3.30 ರವರೆಗೆ ಉಡುಗೊರೆ ಪಡೆಯಬಹುದು ಎಂದು ತಿಳಿಸಿದ್ದಾರೆ.

ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಿಂದ ಮುಕ್ತ

ಚಾಮರಾಜನಗರ, ನ.10– ನಗರದ ಜಿಲ್ಲಾ ಆಡಳಿತ ಭವನದಲ್ಲಿ ಇರುವ ಜೆ.ಹೆಚ್. ಪಟೇಲ್ ಸಭಾಂಗಣದ ಮುಂಭಾಗ ಗ್ರಾಮಲೆಕ್ಕಾಧಿಕಾರಿಯ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಆರೋಪ ಹೊತ್ತಿದ್ದ ಆರೋಪಿ ವರದರಾಜು ಅವರನ್ನು ಆರೋಪ ಮುಕ್ತಗೊಳಿಸಿ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಆದೇಶ ಹೊರಡಿಸಿ ಬಿಡುಗಡೆ ಮಾಡಲಾಗಿದೆ.

ದಿನಾಂಕ:02–08–2017 ನಗರದ ಜಿಲ್ಲಾ ಆಡಳಿತ ಭವನದಲ್ಲಿರುವ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಬರ ಪರಿಹಾರದ ಸಭೆ ಇದ್ದು, ಸಭೆಯಲ್ಲಿ ಗ್ರಾಮ ಲೆಕ್ಕಾಧಿಕಾರಿ ಪ್ರವೀಣ್‌ಕುಮಾರ್ ಹಾಜರಿದ್ದರು. ಬರ ಪರಿಹಾರ ಸಭೆ ಮುಗಿದ ನಂತರ ಸಂಜೆ ಸುಮಾರು 5:45ರ ಸಮಯದಲ್ಲಿ ಚಾಮರಾಜನಗರ ತಾಲ್ಲೂಕಿನ ಬ್ಯಾಡಮೂಡ್ಲು ಗ್ರಾಮದ ವರದರಾಜು ಎಂಬುವವರು ಬಸವಾಪುರ ಗ್ರಾಮದ ಗ್ರಾಮಲೆಕ್ಕಾಧಿಕಾರಿ ಪ್ರವೀಣ್‌ಕುಮಾರ್ ಅವರನ್ನು ಅಡ್ಡಗಟ್ಟಿ ತಡೆದು ಅವಾಚ್ಯ ಶಬ್ದಗಳಿಂದ ನಿಂದಿಸಿ ಬಸವಪುರ ಗ್ರಾಮಕ್ಕೆ ನೀರು ಹಾಕಿಸಿದ್ದೇನೆ ಬಿಲ್‌ಗೆ ಸಹಿ ಮಾಡಿಕೊಟ್ಟಿಲ್ಲ ಎಂದು ಜಗಳ ತೆಗೆದು ಬಿಲ್‌ಗೆ ಸಹಿ ಹಾಕದೇ ಇದ್ದರೆ ಹೇಗೆ ಕೆಲಸ ಮಾಡುತ್ತೀಯ ಎಂದು ಹೊಡೆಯಲು ಪ್ರಯತ್ನಿಸಿ ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡ್ಡಿ ಪಡಿಸಿದ್ದಾರೆ ಎಂದು ಚಾಮರಾಜನಗರ ಪಟ್ಟಣ ಠಾಣೆಯ ವೃತ್ತ ನಿರೀಕ್ಷಕ ಮಹದೇವಯ್ಯರವರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 341, 504, 353 ರಡಿಯಲ್ಲಿ ದೋಷಾರೋಪಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ವಾದ ವಿವಾದಗಳನ್ನು ಆಲಿಸಿದ ನ್ಯಾಯಾಧೀಶರಾದ ಚಂಪಕರವರು ಆರೋಪ ಸಾಬೀತಾಗದ ಕಾರಣ ನವಂಬರ್ 3ರಂದು ಆರೋಪಿಯ ಮೇಲೆ ಆಪಾದಿಸಲ್ಪಟ್ಟ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ. ಆರೋಪಿಯ ಪರವಾಗಿ ವಕೀಲ ಉಮ್ಮತ್ತೂರು ಇಂದುಶೇಖರ್ ವಾದ ಮಂಡಿಸಿದ್ದಾರೆ.

ಮೈಸೂರು ಮಿತ್ರ

ಮೈಸೂರಲ್ಲಿ ಅದ್ಧೂರಿ ಟಿಪ್ಪು ಜಯಂತಿ, ಕನ್ನಡ ರಾಜ್ಯೋತ್ಸವ ಆಚರಣೆ

ಯಾರು ಏನೇ ಹೇಳಲಿ, ಟಿಪ್ಪು ನಾಡಿನ ಛಲದಂಕ ಮಲ್ಲ, ಸ್ವಾಭಿಮಾನಿ ಕನ್ನಡಿಗ

● ರೈಲಿನ ಹೆಸರು ಬದಲಾವಣೆ ಮಾಡಿದಾಕ್ಷಣ ಟಿಪ್ಪು ಹೆಸರಿಗೆ ಚ್ಯುತಿ ಆಗದು ● ಬಿಜೆಪಿ ಎಂಎಲ್‌ಸಿ ಅಡಗೂರು ವಿಶ್ವನಾಥ್ ಅಭಿಮತ

ಮುಸ್ಲಿಂ ಸಮುದಾಯದ ಅಸ್ಮಿತೆ ಉಳಿಸಿಕೊಳ್ಳಲು ಮೈಸೂರಲ್ಲಿ 100 ಅಡಿ ಟಿಪ್ಪು ಪ್ರತಿಮೆ ಸ್ಥಾಪನೆ

ಶಾಸಕ ತನ್ವೀರ್ ಸೇಠ್ ಘೋಷಣೆ

ಮೈಸೂರು, ನ.10– ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಮುಸ್ಲಿಂ ಸಮುದಾಯದ ಅಸ್ಮಿತೆ ಉಳಿಸಿಕೊಳ್ಳಲು ಮೈಸೂರಿನಲ್ಲಿ ಟಿಪ್ಪು ಸುಲ್ತಾನ್‌ರ 100 ಅಡಿ ಎತ್ತರದ ಪ್ರತಿಮೆ ನಿರ್ಮಿಸಲಾಗುವುದು ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

ಮೈಸೂರಿನ ರಾಜೀವ್‌ನಗರ ಅಲ್ ಬದರ್ ಮೈದಾನದಲ್ಲಿ ಟಿಪ್ಪು ಜಯಂತಿ ಮತ್ತು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಇಸ್ಲಾಂ ಧರ್ಮದಲ್ಲಿ ಪ್ರತಿಮೆ ನಿರ್ಮಾಣಕ್ಕೆ ಅವಕಾಶವಿಲ್ಲ. ಇದ್ದಿದ್ದರೆ ಮನೆಗೊಂದರಂತೆ ಟಿಪ್ಪು ಪ್ರತಿಮೆ ನಿರ್ಮಾಣವಾಗುತ್ತಿತ್ತು. ನಮ್ಮನ್ನು ಒಗ್ಗಟ್ಟಾಗಿಸುವ ಶಕ್ತಿ ಟಿಪ್ಪು ಹೆಸರಿಗಿದೆ. ಇಂದು ವಿವಿಧ ಪಕ್ಷಗಳಲ್ಲಿರುವ ಒಂದು ಸಮುದಾಯದ ಮುಖಂಡರು ಟಿಪ್ಪು ಹೆಸರಲ್ಲಿ ಒಂದಾಗಿರುವುದೇ ಇದಕ್ಕೆ ಸಾಕ್ಷಿ. ಟಿಪ್ಪು ಹೆಸರಿಗೆ ಅನೇಕ ಅಪಚಾರಗಳನ್ನು ಮಾಡಲಾಗುತ್ತಿದೆ. ಸುಳ್ಳು ಕತೆಗಳನ್ನು ಸೃಷ್ಟಿಸಿ, ಜನರನ್ನು ತಪ್ಪು ದಾರಿಗೆ ಎಳೆಯಲಾಗುತ್ತಿದೆ. ಟಿಪ್ಪು ಅಭಿಮಾನಿಗಳು, ನಮ್ಮ ಸಮುದಾಯ ಎಲ್ಲವನ್ನೂ ಮೌನವಾಗಿ ಸಹಿಸುತ್ತಿದೆ. ಕಾಲ ಬಂದಾಗ ಅದಕ್ಕೆ ಸ್ಪಷ್ಟ ಉತ್ತರ ನೀಡುತ್ತೇವೆ ಎಂದರು.

ಟಿಪ್ಪು ಸುಲ್ತಾನರು ಇಸ್ಲಾಂ ಧರ್ಮದ ಪವಿತ್ರ ಗ್ರಂಥ ಕುರಾನ್ ಮುಂದಿಟ್ಟು ಸರ್ವಶಕ್ತನಾದ ಅಲ್ಲಾಹುವನ್ನು ಸಾಕ್ಷೀಕರಿಸಿ ಜನಪರ ಆಡಳಿತ ನಡೆಸಿದರು. ಮೈಸೂರು ರಾಜ್ಯವನ್ನಾಳಿದರೂ 260 ವರ್ಷಗಳ ಹಿಂದೆಯೇ ಶ್ರೀರಂಗಪಟ್ಟಣದ ಗುಂಬಜ್ ದ್ವಾರದ ಮೇಲೆ ರಿಯಾಸತೇ ದಖನ್ ಕರ್ನಾಟಕ್ ಎಂದು ಬರೆಸಿದ್ದಾರೆ. ಅಂದರೆ ಕರ್ನಾಟಕ ಎಂಬ ಹೆಸರಿನ ಕಲ್ಪನೆಯೇ ಇಲ್ಲದ ಅವರ ಆಳ್ವಿಕೆಯಲ್ಲಿ ಈ ರಾಜ್ಯವನ್ನು ಕರ್ನಾಟಕ ಎಂದು ಮೊಟ್ಟ ಮೊದಲ ಬಾರಿಗೆ ಸಂಬೋಧಿಸಿದ ಕೀರ್ತಿ ಟಿಪ್ಪುಗೆ ಸಲ್ಲುತ್ತದೆ ಎಂದರು.

ಪ್ರತಾಪ್‌ಸಿಂಹ ಟಿಪ್ಪು ಚರಿತ್ರೆಯನ್ನು ಸರಿಯಾಗಿ ಓದಲಿ: ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಟಿಪ್ಪು ಹೆಸರನ್ನು ಬೇಕೆಂದೇ ತೆಗೆದಿದ್ದೀವಿ. ಟಿಪ್ಪು ಏನು ಮೈಸೂರಿನವರಾ? ಎಂದು ಕೇಳಿದ್ದ ಸಂಸದ ಪ್ರತಾಪ್ ಸಿಂಹ ಏನು ಮೈಸೂರಿನವರಾ? ಎಂದು ಟಾಂಗ್ ನೀಡಿದರು. ದೂರದ ಸಕಲೇಶಪುರದಿಂದ ಬಂದು ಸ್ವಂತ ಪರಿಶ್ರಮವಿಲ್ಲದೆ ರಾಜಕಾರಣ ಮಾಡಿಲ್ಲ. ಇಲ್ಲಿ ಮೋದಿ ಹೆಸರೇಳಿಕೊಂಡು ರಾಜಕೀಯ ಮಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ಟಿಪ್ಪು ಸುಲ್ತಾನರ ಚರಿತ್ರೆಯನ್ನು ಅವರು ಸರಿಯಾಗಿ ಓದಿಲ್ಲ. ಅಂದಿನ ಟಿಪ್ಪು ಆಳ್ವಿಕೆಯಲ್ಲಿ ಬೇರೆ ಬೇರೆ ದೇಶಗಳ ಜಿಡಿಪಿಗಿಂತ ಮೈಸೂರು ರಾಜ್ಯದ ಜಿಡಿಪಿ ಐದು ಪಟ್ಟು ಹೆಚ್ಚಿತ್ತು. ತನ್ನ ರಾಜ್ಯದಲ್ಲಿ ಪಾನ ನಿಷೇಧ ಮಾಡಿದ ಜಗತ್ತಿನ ಮೊಟ್ಟ ಮೊದಲ ದೊರೆ ಟಿಪ್ಪು ಸುಲ್ತಾನ್. 35 ಸಾವಿರ ಕೆರೆ ಕಟ್ಟೆಗಳನ್ನು ಕಟ್ಟಿಸಿದ್ದಾರೆ. ಅವರ ರಾಜ್ಯದಲ್ಲಿ ಒಟ್ಟು ಶೇ.40ರಷ್ಟು ಭೂ ಪ್ರದೇಶದಲ್ಲಿ ಕೃಷಿ ಚಟುವಟಿಕೆ ನಡೆಯುತ್ತಿತ್ತು. ಪ್ರತಾಪ್‌ಸಿಂಹ ಮೊದಲು ಆರ್‌ಎಸ್‌ಎಸ್‌ನವರಾದ ಭಗವಾನ್ ಎಸ್.ಗಿದ್ವಾನಿ ಬರೆದಿರುವ 'ದಿ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್' ಕೃತಿಯನ್ನು ಓದಲಿ ಎಂದರು.



ಟಿಪ್ಪು ಜಯಂತಿ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಶಾಸಕ ತನ್ವೀರ್‌ಸೇಠ್, ಬಿಜೆಪಿ ಎಂಎಲ್‌ಸಿ ಅಡಗೂರು ವಿಶ್ವನಾಥ್, ಎಸ್‌ಡಿಪಿಐ ರಾಜ್ಯ ಮುಖಂಡ ಅಬ್ದುಲ್ ಮಜೀದ್, ಜೆಡಿಎಸ್ ರಾಜ್ಯ ಕಾರ್ಯದರ್ಶಿ ಅಬ್ದುಲ್ ಖಾದರ್ ಶಾಹಿದ್, ಮಾಜಿ ಮೇಯರ್ ಅಯೂಬ್ ಖಾನ್ ಇನ್ನಿತರರನ್ನು ಕಾಣಬಹುದು.

ಮೈಸೂರು, ನ.10(ಆರ್‌ಕೆಬಿ)– ಟಿಪ್ಪು ಸುಲ್ತಾನ್ ಕನ್ನಡ ನಾಡಿನ ಛಲದಂಕ ಮಲ್ಲ. ಸ್ವಾಭಿಮಾನಕ್ಕೆ ಮತ್ತೊಂದು ಹೆಸರೇ ಟಿಪ್ಪು ಸುಲ್ತಾನ್. ಯಾರೇ ಏನೇ ಮಾಡಿದರೂ ಟಿಪ್ಪು ಸುಲ್ತಾನ್ ಹೆಸರು ಕನ್ನಡ ನಾಡಿನಲ್ಲಿ ಅಜರಾಮರ ಎಂದು ವಿಧಾನಪರಿಷತ್ ಬಿಜೆಪಿ ಸದಸ್ಯ ಅಡಗೂರು ವಿಶ್ವನಾಥ್ ಟಿಪ್ಪುವನ್ನು ಹಾಡಿ ಹೊಗಳಿದರು.

ಮೈಸೂರಿನ ಟಿಪ್ಪು ರಾಜ್ಯೋತ್ಸವ ವೇದಿಕೆ ರಾಜೀವ್‌ನಗರದ ಅಲ್‌ಬದರ್ ವೃತ್ತದ ಬಳಿ ಮೈದಾನದಲ್ಲಿ ಟಿಪ್ಪು ಸುಲ್ತಾನ್ ಜಯಂತಿ ಮತ್ತು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಗತ್ತಿನಲ್ಲಿ ಶತ್ರುಗಳಿಗೆ ಮಂಡಿಯೂರದ ಜಗತ್ತಿನ ಏಕೈಕ ನಾಯಕ ಟಿಪ್ಪು ಮಾತ್ರ. ಯಾರೂ ಕೂಡ ಇತಿಹಾಸವನ್ನು ತಿರುಚುವ ಕೆಲಸ ಮಾಡಬಾರದು. ಕರ್ನಾಟಕದಲ್ಲಿ ಆರ್ಥಿಕ ಅಭಿವೃದ್ಧಿ ಮಾಡಿದ್ದು ಟಿಪ್ಪು. ಕನ್ನಂಬಾಡಿ ಕಟ್ಟೆಯ ಭೂಮಿ ಪೂಜೆ ಮಾಡಿದ್ದು ಟಿಪ್ಪು. ಯಾರೇ ಏನೇ ಮಾಡಿದರು ಟಿಪ್ಪು ಸುಲ್ತಾನ್ ಹೆಸರು ಕನ್ನಡ ನಾಡಿನಲ್ಲಿ ಅಜರಾಮರ. ರೈಲಿನ ಹೆಸರು ಬದಲಾವಣೆ ಮಾಡಿದ ಕೂಡಲೇ ಅವರ ಹೆಸರಿಗೆ ಏನೂ ಚ್ಯುತಿ ಆಗಲ್ಲ ಎಂದು ಹೇಳಿದರು.

ಟಿಪ್ಪು ಸುಲ್ತಾನ್ ಆಡಳಿತ, ಧೈರ್ಯ ಶೌರ್ಯ ಯಾರೂ ಕೂಡ ಅಲ್ಲಗಳೆಯಲು ಸಾಧ್ಯವಿಲ್ಲ. ಟಿಪ್ಪು ಸಾವಿರಾರು ಮಂದಿಯನ್ನು ಕೊಂದು ಹಾಕಿದ, ಸಾವಿರಾರು ಜನರನ್ನು ಮತಾಂತರ ಮಾಡಿದ ಎಂದು ಹೇಳುತ್ತಾರಲ್ಲ, ಅಂದಿನ ಜನಸಂಖ್ಯೆ ಎಷ್ಟಿತ್ತು ಹಾಗಾದರೆ. ಶೃಂಗೇರಿ ಮಠಕ್ಕೂ ಟಿಪ್ಪು ಕೊಡುಗೆ ಅಪಾರ. ಆದರೆ ಸುಖಾ ಸುಮ್ಮನೆ ಕೆಲವರು ಮಾತನಾಡುವುದು ಸರಿಯಲ್ಲ. ವಸ್ತ್ರ ಸಂಹಿತೆ ಜಾರಿ ಮಾಡಿದ್ದೂ ಟಿಪ್ಪು ಎಂದು ಗುಣಗಾನ ಮಾಡಿದರು.

ಟಿಪ್ಪುವನ್ನು ಗುಣಗಾನ ಮಾಡಲು ಯಾವ ಪಕ್ಷದವರಾದರೇನು? ಟಿಪ್ಪು ಸ್ವಾಭಿಮಾನಿ ಕನ್ನಡಿಗ, ಮೈಸೂರು ಹುಲಿ. ಜಾತಿ, ಧರ್ಮ, ಪಕ್ಷಗಳನ್ನು ಮೀರಿದ ವ್ಯಕ್ತಿತ್ವ ಅವರದ್ದು. ಚರಿತ್ರೆಯನ್ನು ಯಾರೂ ಬದಲಿಸಲು ಸಾಧ್ಯವಿಲ್ಲ. ಶೃಂಗೇರಿಯಲ್ಲಿ ಈಗಲೂ ಸಲಾಂ ಆರತಿ ನಡೆಯುತ್ತಿದೆ. ನಂಜನಗೂಡು ಶ್ರೀಕಂಠೇಶ್ವರನಿಗೆ ಹಕೀಂ ನಂಜುಂಡ ಅಂತ ಹೆಸರಿಟ್ಟವರು ಯಾರು? ಯಾರೋ ಏನೋ ಹೇಳುತ್ತಾರೆ ಅಂತ ಚರಿತ್ರೆ ಬದಲಾಗಿ ಬಿಡುವುದಿಲ್ಲ ಎಂದು ಹೇಳಿದರು.

ಸಂಸದ ಪ್ರತಾಪ್‌ಸಿಂಹ ಕೊಡಗಿನಲ್ಲಿ ಟಿಪ್ಪು ಸಾವಿರಾರು ಜನರ ಹತ್ಯಾಕಾಂಡ ನಡೆಸಿದವನು ಎಂದಿದ್ದಾರೆ. ಆಗ ಮೈಸೂರು ಸಾಮ್ರಾಜ್ಯದ ಜನಸಂಖ್ಯೆ ಎಷ್ಟಿತ್ತು ಅನ್ನುವ ಸಾಮಾನ್ಯ ಜ್ಞಾನ ಬೇಡವೇ? ಎಂದು ಅಡಗೂರು ವಿಶ್ವನಾಥ್ ಜರಿದರು.

ಕಾರ್ಯಕ್ರಮದಲ್ಲಿ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್‌ಸೇಠ್, ಬಿಜೆಪಿ ಎಂಎಲ್‌ಸಿ ಅಡಗೂರು ವಿಶ್ವನಾಥ್, ಎಸ್‌ಡಿಪಿಐ ರಾಜ್ಯ ನಾಯಕ ಅಬ್ದುಲ್ ಮಜೀದ್, ಚಿಂತಕರಾದ ಪ್ರೊ.ಮಹೇಶ್‌ಚಂದ್ರಗುರು, ಪ್ರೊ.ನಂಜರಾಜ ಅರಸ್, ಧರ್ಮಗುರುಗಳಾದ ಮೌಲಾನಾ ಸಲಾಂ ಸಾಬ್, ಮೌಲಾನಾ ಅರ್ಷದ್ ಸಾಹೇಬ್, ಬಸವಲಿಂಗಸ್ವಾಮೀಜಿ, ಕ್ರೈಸ್ತ ಪ್ರಗತಿಪರ ಸಂಘಟಕ ಬಾರ್ದಾ ಮಯ್ಯಾರ್, ಆಮ್ ಆದ್ಮಿ ಪಾರ್ಟಿಯ ಧರ್ಮಸಿರಿ, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಮಾಜಿ ಉಪಮೇಯರ್ ಅನ್ವರ್ ಬೇಗ್, ಕಾರ್ಯಕ್ರಮದ ಸಂಚಾಲಕ ಅಬ್ದುಲ್ ಖಾದರ್ ಶಾಹಿದ್, ನಗರಪಾಲಿಕೆ ಸದಸ್ಯರೂ ಆದ ಮಾಜಿ ಮೇಯರ್ ಅಯೂಬ್‌ಖಾನ್, ನಗರಪಾಲಿಕೆ ಸದಸ್ಯರಾದ ಆಫ್ತಾಬ್, ಸುಹೇಲ್ ಬೇಗ್, ಮಾಜಿ ಸದಸ್ಯ ಶೌಕತ್ ಪಾಷ, ಮುಖಂಡರಾದ ಎಂ.ಎಫ್. ಕಲೀಮ್, ಅಫ್ರೋಜ್ ಖಾನ್, ಫಸೀಲ್ ಖಾನ್, ಆಜಂ, ಶಹಿನ್‌ಷಾ ಅಹಮದ್, ಅಫ್ತಾಬ್, ಇಮ್ರಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

❝ ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರು ಸತ್ಯ ಹೇಳುವುದನ್ನು ಕಲಿಯಬೇಕು. ಸತ್ಯದ ಹೆಸರಿನಲ್ಲಿ ಸುಳ್ಳು ಹೇಳುವುದು, ಇತಿಹಾಸ ತಿರುಚುವುದು ಸರಿಯಲ್ಲ. ಅವರೇನು ಟಿಪ್ಪು ಬಗ್ಗೆ ಪುಸ್ತಕ ಬರೆಯೋದು? ಟಿಪ್ಪು ಕಾಲದಲ್ಲಿ ಕಾರ್ಯಪ್ಪ ಹುಟ್ಟಿದ್ದರೇ? ಟಿಪ್ಪುವಿನ ನಿಜ ಕನಸುಗಳು ನಾಟಕವನ್ನು ನಾನು ಖಂಡಿಸುತ್ತೇನೆ. ಅವರು ಏನೇ ಬರೆಯಲಿ, ಏನೇ ನಾಟಕ ಆಡಲೀ, ಆದರೆ ಟಿಪ್ಪು ಸುಲ್ತಾನನ ಧೈರ್ಯ, ಹೋರಾಟ, ಸಾಧನೆಗಳನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಅದು ಅಜರಾಮರ. **–ಹೆಚ್.ವಿಶ್ವನಾಥ್, ಬಿಜೆಪಿ ಎಂಎಲ್‌ಸಿ**

❝ ಟಿಪ್ಪು ಉತ್ತಮ ಆಡಳಿತಗಾರ, ದೀನ ದಲಿತರ ಬಂಧು, ಹಸಿವು ಮುಕ್ತ, ನಿರುದ್ಯೋಗ ಮುಕ್ತ, ಅಸಮಾನತೆ ಮುಕ್ತ ಮೈಸೂರು ರಾಜ್ಯ ಕಟ್ಟಿದವರು. ಆತ ಎಂದಿಗೂ ಹಿಂದೂ ವಿರೋಧಿ ಅಲ್ಲವೇ ಅಲ್ಲ. ಶೃಂಗೇರಿ ಮಠಕ್ಕೆ ಅಪಾಯ ಬಂದಾಗ ತಕ್ಷಣ ಅಲ್ಲಿಗೆ ಹೋಗಿ ತುಂಗಾ ನದಿಯಲ್ಲಿ ಬಿಸಾಡಿದ್ದ ದೇವಿ ಶಾರದೆಯನ್ನು ಹೊರತಂದು ಪುನರ್ ಸ್ಥಾಪಿಸಿದವರು. 150ಕ್ಕೂ ಹೆಚ್ಚು ಹಿಂದೂ ದೇಗುಲಗಳನ್ನು ಸ್ಥಾಪಿಸಿದವರು. ಆದರೆ ಟಿಪ್ಪುವನ್ನು ಹಿಂದೂ ವಿರೋಧಿ ಎಂದು ಬಿಂಬಿಸುವ ಸುಳ್ಳು ಹೇಳುವವರನ್ನು ಮೊದಲು ಗಲ್ಲಿಗೇರಿಸಬೇಕು. ಟಿಪ್ಪು ಮತಾಂಧನಲ್ಲ. ಏಕೆಂದರೆ ಆತ ಕಾವೇರಿ ಕಣಿವೆಯಲ್ಲಿ ಎಲ್ಲಾ ಜಾತಿ ಜನರಿಗೂ ಫಲವತ್ತಾದ ಭೂಮಿ ಕೊಟ್ಟಿದ್ದನು. ಟಿಪ್ಪುವಿಗಿಂತ ಕನ್ನಡ ಅಭಿಮಾನಿ ಮತ್ತೊಬ್ಬ ಇಲ್ಲ. ಅಷ್ಟೊಂದು ಕನ್ನಡ ಪ್ರೇಮಿ. ಆತನ ಆಡಳಿತ ಕಾಲದಲ್ಲಿ ಎಲ್ಲ ಪತ್ರಗಳನ್ನು ಕನ್ನಡದಲ್ಲಿಯೇ ಬರೆಯಲು ಆದೇಶಿಸಿದ್ದ. ಆತನ ತ್ಯಾಗವನ್ನು ಮಹಾತ್ಮಗಾಂಧಿ ಕೂಡ ಹೊಗಳಿದ್ದರು. **– ಪ್ರೊ.ಮಹೇಶ್‌ಚಂದ್ರ ಗುರು, ಚಿಂತಕ**

❝ ಟಿಪ್ಪು ಸುಲ್ತಾನ್ ವಸ್ತ್ರಸಂಹಿತೆ ಜಾರಿಗೊಳಿಸಿ, ಹೆಣ್ಣು ಮಕ್ಕಳಿಗೆ ಗೌರವ ನೀಡಿದವರು. ಆತ ಮಾಡಿದ ಸಾಧನೆ ನೋಡಿದರೆ ಅವರೇನಾದರೂ ಹಿಂದೂವಾಗಿ ಹುಟ್ಟಿದ್ದರೆ ಇದೇ ಮೋದಿ ಸರ್ಕಾರ ಪ್ರಶಸ್ತಿ ಕೊಡುತ್ತಿದ್ದರೇನೋ? **– ಪ್ರೊ.ಪಿ.ವಿ.ನಂಜರಾಜ ಅರಸು, ಚಿಂತಕ**

❝ ಮೋದಿ ಹೇಳುತ್ತಿರುವ ಸಬ್‌ಕಾ ಸಾಥ್, ಸಬ್ ಕಾ ವಿಕಾಸ್ ಅಲ್ಲ.. ಅದು ಸಬ್‌ಕಾ ಸಾಥ್ ತೀನ್ ಲೋಗೋಂಕಾ ವಿಕಾಸ್ ಎನ್ನಬಹುದು. ಬರೀ ಸುಳ್ಳು ಹೇಳುವ ಪ್ರಧಾನಿ. ರೈಲಿನಿಂದ ಟಿಪ್ಪು ಹೆಸರು ಅಳಿಸಿದರೆ, ಇತಿಹಾಸ ಅಳಿಸಿ ಹೋಗುವಂಥದ್ದಲ್ಲ. ಟಿಪ್ಪು ಅಜರಾಮರ. **–ಮಂಜು ಕಿರಣ್, ರೈತ ಮುಖಂಡ**

'ಟಿಪ್ಪು ನಿಜ ಕನಸುಗಳು' ಕೃತಿ, ನಾಟಕದ ವಿರುದ್ಧ ಹೋರಾಟ

ಮೈಸೂರು: ರಂಗಾಯಣ ನಿರ್ದೇಶ ಕರು ಬರೆದಿರುವ 'ಟಿಪ್ಪು ನಿಜ ಕನಸುಗಳು' ಕೃತಿ ಹಾಗೂ ನಾಟಕ ತಡೆಯಲು ಕಾನೂನು ಹೋರಾಟ ನಡೆಸುತ್ತೇವೆ ಎಂದು ನರಸಿಂಹರಾಜ ಕ್ಷೇತ್ರದ ಶಾಸಕ, ಮಾಜಿ ಸಚಿವ ತನ್ವೀರ್‌ಸೇಠ್ ತಿಳಿಸಿದ್ದಾರೆ.

ಮೈಸೂರಿನಲ್ಲಿ ಗುರುವಾರ ಮಾಧ್ಯಮ ಗಳೊಂದಿಗೆ ಮಾತನಾಡಿದ ಅವರು, ರಂಗಾಯಣ ನಮ್ಮ ಯುವ ಕಲಾವಿದರಿಗೆ ಒಂದು ನೆಲೆಯಾಗಬೇಕಿರುವ ಸ್ಥಳ. ಅಲ್ಲಿ ಅಧಿಕಾರ ದುರುಪಯೋಗ ಮಾಡಿ, ಅವ ರಿಗೆ ಇಷ್ಟಬಂದಂತೆ ಬಳಸಿಕೊಳ್ಳುತ್ತಿರುವುದು ವಿವಾದವಾಗಿದೆ. ನ.13ರಂದು ರಂಗಾಯ ಣದ ನಿರ್ದೇಶಕರು ಬರೆದಿರುವ 'ಟಿಪ್ಪು ನಿಜ ಕನಸುಗಳು' ಕೃತಿ ಬಿಡುಗಡೆಯಾಗ ಲಿದೆ. ಇದೇ ಪುಸ್ತಕ ಆಧರಿಸಿ, ನ.20ರಂದು 'ಟಿಪ್ಪು ನಿಜ ಕನಸುಗಳು' ನಾಟಕ ಪ್ರದರ್ಶನ ನಡೆಯಲಿದೆ. ಅದನ್ನು ತಡೆಯಲು ನಾವು ಕಾನೂನು ಹೋರಾಟ ನಡೆಸುತ್ತೇವೆ ಎಂದರು.

ಟಿಪ್ಪು ಹೆಸರನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು: ಟಿಪ್ಪು ಜಯಂತಿ ಆಚರಣೆ ಮಾಡಿ ಅಂತ ನಾವು ಸರ್ಕಾರಕ್ಕೆ ಅರ್ಜಿ ಹಾಕಿಲ್ಲ. ಜಯಂತಿಯನ್ನು ರದ್ದು ಮಾಡಿದ ನಂತರವೂ ನಾವು ನಿರಂತರವಾಗಿ ಟಿಪ್ಪು ಜಯಂತಿಯನ್ನು ಆಚರಿಸಿಕೊಂಡು ಬರುತ್ತಿದ್ದೇವೆ. ಟಿಪ್ಪು ಸುಲ್ತಾನ್ ದೇಶದ ಸ್ವಾತಂತ್ರ್ಯ ಹೋರಾಟಗಾರ. ಅವರ ಸಾಧನೆಗಳು ಚರಿತ್ರೆಯಲ್ಲಿ ದಾಖಲಾಗಿವೆ. ಚರಿತ್ರೆಯನ್ನು ತಿದ್ದುವುದು, ತಿರುಚುವುದು ಆವರಿಗೂ ಶೋಭೆ ತರುವುದಿಲ್ಲ. ರಾಜ್ಯ ಸರ್ಕಾರ ಟಿಪ್ಪು ಹೆಸರನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು. ರಂಗಾಯಣ ಟಿಪ್ಪು ಹೆಸರಿನ ಚರಿತ್ರೆಯ ವಿರುದ್ಧವಾದ ವಿಚಾರಗಳನ್ನು ನಾಟಕ ಮಾಡಲು ಹೊರಟಿರುವುದು ಸರಿಯಲ್ಲ ಎಂದು ತನ್ವೀರ್‌ಸೇಠ್ ಅಭಿಪ್ರಾಯಪಟ್ಟರು.

ಮಾನಸಿಕ ಅಸ್ವಸ್ಥೆಯನ್ನು ಕೊಂದ ಸಹೋದರಿ, ಭಾವ

ಎರಡು ವರ್ಷದ ನಂತರ ಪ್ರಕರಣ ಬಯಲು

ಮೈಸೂರು, ನ.10– ಮಾನಸಿಕ ಅಸ್ವಸ್ಥೆಯನ್ನು ಆಕೆಯ ಸಹೋದರಿ ಹಾಗೂ ಭಾವ ಸೇರಿ ಹತ್ಯೆ ಮಾಡಿರುವ ಘಟನೆ 2 ವರ್ಷದ ನಂತರ ಬೆಳಕಿಗೆ ಬಂದಿದೆ.

ಚಾಮರಾಜನಗರ ಟೌನ್‌ನ ಲಕ್ಷ್ಮಿ ಹತ್ಯೆಗೀಡಾದವರಾಗಿದ್ದು, ಈಕೆಯನ್ನು ಸಹೋದರಿ ರೂಪಾ ಮತ್ತು ಭಾವ ಸಿದ್ದರಾಜು ಮೈಸೂರು ತಾಲೂಕು ರಾಯನಹುಂಡಿಯಲ್ಲಿ ಹತ್ಯೆ ಮಾಡಿ ಶವವನ್ನು ಶೌಚಾಲಯದ ಗುಂಡಿಯಲ್ಲಿ ಹೂತು ಹಾಕಿದ್ದಾರೆ ಎಂದು ಆರೋಪಿಸಲಾಗಿದೆ.

ವಿವರ: ಚಾಮರಾಜನಗರದ ಹೇಮಾ (47) ಅವರ ಪುತ್ರಿ ಲಕ್ಷ್ಮಿಯನ್ನು 2012ರಲ್ಲಿ ತಮಿಳುನಾಡಿನ ತಿರುವಣ್ಣಾಮಲೈನ ರಾಜೇಶ್ ಎಂಬಾತನಿಗೆ ಮದುವೆ ಮಾಡಿಕೊಡಲಾಗಿತ್ತು. ಈಕೆಗೆ 7 ವರ್ಷದ ಪ್ರೀತಂ ಎಂಬ ಮಗನಿದ್ದಾನೆ. 5 ವರ್ಷದ ಹಿಂದೆ ಮಾನಸಿಕ ಅಸ್ವಸ್ಥಳಾಗಿದ್ದಾಳೆ ಎಂಬ ಕಾರಣಕ್ಕಾಗಿ ಗಂಡ ಆಕೆಯನ್ನು ತವರು ಮನೆಗೆ ಬಿಟ್ಟು ಹೋದ ನಂತರ ಮತ್ತೆ ಸಂಪರ್ಕಕ್ಕೆ ಸಿಕ್ಕಿಲ್ಲ.

ಹೇಮಾ ಅವರ 2ನೇ ಪುತ್ರಿ ರೂಪಾಳನ್ನು ಸಿದ್ದರಾಜು ಎಂಬಾತ ಪ್ರೀತಿಸಿ ಮದುವೆಯಾಗಿ ರಾಯನಹುಂಡಿಯ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಹೇಮಾ ಅವರು ಮೊಮ್ಮಗನನ್ನು ತಮ್ಮ ಬಳಿ ಇಟ್ಟುಕೊಂಡು ಮಗಳು ಲಕ್ಷ್ಮಿಯನ್ನು ರೂಪಾ ಮನೆಯಲ್ಲಿ ಬಿಟ್ಟಿದ್ದರು. 2020ರಲ್ಲಿ ಲಕ್ಷ್ಮಿ ನಾಪತ್ತೆಯಾಗಿದ್ದಾಳೆಂದು ಹೇಮಾ ಅವರಿಗೆ ರೂಪಾ ತಿಳಿಸಿದ್ದಳು. ಕೆಲವು ದಿನಗಳ ನಂತರ ಮಂಗಳೂರಿಗೆ ಕೆಲಸಕ್ಕೆ ಹೋಗುವುದಾಗಿ ತೆರಳಿದ್ದ ರೂಪಾ ಪತಿ ಸಿದ್ದರಾಜು ಕೂಡ ನಾಪತ್ತೆಯಾಗಿದ್ದ. ಸಿದ್ದರಾಜು ನಾಪತ್ತೆ ಬಗ್ಗೆ ಚಾಮರಾಜನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಈ ನಡುವೆ ಇದೇ ನ.6ರಂದು ಸಿದ್ದರಾಜುವನ್ನು ಪತ್ತೆ ಮಾಡಿದ್ದ ಚಾಮರಾಜನಗರ ಪೊಲೀಸರು ವಿಚಾರಣೆ ಮಾಡಿ ಕಳುಹಿಸಿದ್ದರು ಎಂಬ ವಿಷಯ ತಿಳಿದ ಹೇಮಾ, ತಮ್ಮ ಪುತ್ರಿ ರೂಪಾಳನ್ನು ಸಂಪರ್ಕಿಸಿ ನಿನ್ನ ಗಂಡನೇನೋ ಸಿಕ್ಕಿಬಿಟ್ಟ, ಆದರೆ ಲಕ್ಷ್ಮಿ ಇನ್ನೂ ಸಿಕ್ಕಿಲ್ಲವಲ್ಲ ಎಂದಾಗ ರೂಪಾ, 'ಲಕ್ಷ್ಮಿ ಬಗ್ಗೆ ಯಾಕೆ ಯೋಚಿಸುತ್ತೀಯಾ ಅದು ಮುಗಿದುಹೋದ ಕಥೆ. 2 ವರ್ಷದ ಹಿಂದೆ ದಸರಾ ಹಬ್ಬದ ಸಂದರ್ಭದಲ್ಲಿ ಲಕ್ಷ್ಮಿ ಹುಚ್ಚು ಹಿಡಿದಂತೆ ಆಡುತ್ತಾ ಬಟ್ಟೆ ಬಿಚ್ಚಿಹಾಕಿ ಕೂಗಾಡುತ್ತಿದ್ದಳು. ಇವಳಿಂದ ಮಾನ ಮರ್ಯಾದೆ ಹೋಗುತ್ತಿದೆ ಎಂದು ನನ್ನ ಗಂಡ (ಸಿದ್ದರಾಜು) ಲಕ್ಷ್ಮಿಯ ಕೈಕಾಲುಗಳನ್ನು ಕಟ್ಟಿಹಾಕಿ ಬಾಯಿಗೆ ಬಟ್ಟೆ ತುರುಕಿ ಮನೆಯಲ್ಲಿ ಕೂಡಿ ಹಾಕಿಬಿಟ್ಟು ನಾವಿಬ್ಬರೂ ಹೊರಗೆ ಹೋಗಿದ್ದೆವು. ವಾಪಸ್ ಬಂದು ನೋಡಿದಾಗ ಅವಳು ಸತ್ತು ಹೋಗಿದ್ದಳು. ರಾತ್ರಿ 12 ಗಂಟೆ ಸುಮಾರಿನಲ್ಲಿ ನಾವು ವಾಸವಿದ್ದ ರಾಯನಹುಂಡಿ ಗ್ರಾಮದ ಬಾಡಿಗೆ ಮನೆ ಹಿಂದಿನ ಶೌಚಾಲಯದ ಗುಂಡಿಯಲ್ಲಿ ಶವವನ್ನು ಹೂತು ಹಾಕಿದೆವು. ಈ ವಿಷಯವನ್ನು ಯಾರಿಗೂ ಹೇಳಬೇಡ' ಎಂದು ತಾಯಿಗೆ ತಿಳಿಸಿದ್ದಾಳೆ.

ಮಗಳ ಹತ್ಯೆ ವಿಚಾರ ತಿಳಿದು ಹೇಮಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವರುಣಾ ಠಾಣೆ ಪೊಲೀಸರು ತನಿಖೆ ಮುಂದುವರೆಸಿಕೊಂಡಿದ್ದಾರೆ.

ವರ್ಕ್ ಫ್ರಂ ಹೋಂ ಆಫರ್ ನೀಡಿ ಮಹಿಳೆಗೆ 1.05 ಲಕ್ಷ ರೂ. ವಂಚನೆ

ಮೈಸೂರು,ನ.10–ಇನ್‌ಸ್ಟಾಗ್ರಾಂನಲ್ಲಿ ವರ್ಕ್ ಫ್ರಂ ಹೋಂ ಜಾಹೀರಾತು ನೀಡಿ ಆನ್‌ಲೈನ್ ಮೂಲಕ ಮಹಿಳೆಗೆ 1.05 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ ಲೈಷಾ ನಾರಂಗ್ (33) ಅವರು ಇನ್‌ಸ್ಟಾಗ್ರಾಂನಲ್ಲಿ ವರ್ಕ್ ಫ್ರಂ ಹೋಂ ಜಾಹೀರಾತನ್ನು ನೋಡಿ ಅಲ್ಲಿದ್ದ ಲಿಂಕ್ ಮೇಲೆ ಕ್ಲಿಕ್ ಮಾಡಿದ್ದಾರೆ. ನಂತರ ಅವರನ್ನು ಸಂಪರ್ಕಿಸಿದ ವಂಚಕರು ಅಮೆಜಾನ್‌ನಲ್ಲಿ ವಸ್ತುಗಳನ್ನು ಖರೀದಿಸಿದರೆ ಕಮೀಷನ್ ಸಿಗುತ್ತದೆ ಎಂದು ನಂಬಿಸಿ 1.05 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಡ್ಯ ವರದಿ: ಮದ್ದೂರು ತಾಲೂಕು ತೊಪ್ಪನಹಳ್ಳಿ ಗ್ರಾಮದ ಗೃಹಿಣಿ ಶೈಲಜಾ(40) ಅವರ ಮೊಬೈಲ್‌ಗೆ ಅ.2ರಂದು ಹಾಯ್ ಎಂದು ಸಂದೇಶ ಬಂದಿದೆ. ಸಂದೇಶಕ್ಕೆ ಅವರು ಸ್ಪಂದಿಸಿದಾಗ ತನ್ನನ್ನು ಡೇವಿಡ್ ಎಂದು ಪರಿಚಯಿಸಿಕೊಂಡ ವ್ಯಕ್ತಿ ಲಂಡನ್‌ನಲ್ಲಿ ವೈದ್ಯನಾಗಿರುವುದಾಗಿ ನಂಬಿಸಿದ್ದಾನೆ. ಕೆಲ ದಿನಗಳ ನಂತರ ಶೈಲಜಾ ಅವರಿಗೆ ಉಡುಗೊರೆ ಕಳುಹಿಸಿರುವುದಾಗಿಯೂ ಅದಕ್ಕೆ ಶುಲ್ಕ ಕಟ್ಟಿ ಪಡೆಯುವಂತೆಯೂ ಮೆಸೇಜ್ ಮಾಡಿದ್ದಾನೆ. ಆನಂತರ ಶೈಲಜಾ ಅವರನ್ನು ಸಂಪರ್ಕಿಸಿದ ವಂಚಕರು ವಿವಿಧ ಶುಲ್ಕಗಳನ್ನು ಅ.10ರಿಂದ 17ರವರೆಗೆ ಹಂತ ಹಂತವಾಗಿ 2.41 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಈ ಸಂಬಂಧ ಮಂಡ್ಯ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂಪ್ಯೂಟರ್ ಸೇರಿ ಲಕ್ಷ ಮೌಲ್ಯದ ಪದಾರ್ಥ ಕಳವು

ಮೈಸೂರು,ನ.10–ಟ್ರಸ್ಟ್ ಕಚೇರಿಯೊಂದರಲ್ಲಿ ಕಂಪ್ಯೂಟರ್ ಸೇರಿದಂತೆ 1.03 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಕಳವು ಮಾಡಿರುವ ಘಟನೆ ಮೈಸೂರಿನ ಕಲ್ಯಾಣಗಿರಿಯಿಂದ ವರದಿಯಾಗಿದೆ.

ಕಲ್ಯಾಣಗಿರಿ ನಿವಾಸಿ ಅಪ್ಸರ್ (58) ಎಂಬುವರು ಬಡಜನರು ಹಾಗೂ ನಿರ್ಗತಿಕರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಟ್ರಸ್ಟ್‌ವೊಂದನ್ನು ನಡೆಸುತ್ತಿದ್ದಾರೆ. ನ.7ರಂದು ಟ್ರಸ್ಟ್‌ನ ಬಾಗಿಲು ಹಾಕಿಕೊಂಡು ಹೋಗಿದ್ದು, ಮರುದಿನ ಬಂದು ನೋಡಿದಾಗ ಖದೀಮರು ಕಚೇರಿಯ ಹಿಂಬಾಗಿಲ ಬಳಿಯ ಕಿಟಕಿಗೆ ಕೈ ತೂರಿಸಿ ಬಾಗಿಲು ತೆರೆದು ಒಳನುಗ್ಗಿ ಕಂಪ್ಯೂಟರ್ ಹಾಗೂ ಇತರೆ ವಸ್ತುಗಳನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಪಂ ಕಚೇರಿ ಬೀಗ ಮುರಿದು ಕಂಪ್ಯೂಟರ್ ಕಳವು

ಗುಂಡ್ಲುಪೇಟೆ.ನ.10–ಗುಂಡ್ಲುಪೇಟೆ ತಾಲೂಕು ಮೂಖಹಳ್ಳಿ ಗ್ರಾಪಂ ಕಚೇರಿಯ ಬೀಗ ಮುರಿದು ಕಂಪ್ಯೂಟರ್‌ಗಳನ್ನು ಕಳವು ಮಾಡಲಾಗಿದೆ. ಗ್ರಾಪಂ ಸಿಬ್ಬಂದಿ ನ.7ರಂದು ಕಚೇರಿ ಬಾಗಿಲು ಹಾಕಿಕೊಂಡು ಹೋಗಿದ್ದು, ಮರುದಿನ ಬಂದಾಗ ಕಚೇರಿ ಬಾಗಿಲು ಮುರಿದು 2 ಕಂಪ್ಯೂಟರ್ ಹಾಗೂ ಇತರೆ ಪರಿಕರಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮಗಳ ತಾಣವಾಗಿದ್ದ ಕಟ್ಟಡದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ; ಆದರೆ ವೈದ್ಯರೇ ಇಲ್ವಲ್ಲಾ...





ಮೈಸೂರು,ನ.10(ಜಿಎ)–ಅಕ್ರಮ ಚಟುವಟಿಕೆಗಳ ತಾಣವಾಗಿದ್ದ ಕಟ್ಟಡವನ್ನು ಮಾಜಿ ಮೇಯರ್ ಹಾಗೂ ಹಾಲಿ ಪಾಲಿಕೆ ಸದಸ್ಯೆ ಇಂದು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಮಾರ್ಪಾಡು ಮಾಡಿದ್ದು, ಆದರೆ ವೈದ್ಯರು ಬರಲು ಮಾತ್ರ ಹಿಂದೇಟು ಹಾಕುತ್ತಿದ್ದಾರೆ.

ಕುವೆಂಪುನಗರದ 59ನೇ ವಾರ್ಡ್ ವ್ಯಾಪ್ತಿಗೆ ಹೊಂದಿಕೊಂಡಿರುವ ಕೆಹೆಚ್‌ಬಿ ಕಾಲೋನಿಯ 4ನೇ ಹಂತದ 3ನೇ ಅಡ್ಡರಸ್ತೆಯಲ್ಲಿ ನಿರ್ಮಾಣವಾಗಿರುವ 2 ಅಂತಸ್ತಿನ ಸಾರ್ವಜನಿಕ ಗ್ರಂಥಾಲಯದ ಕಟ್ಟಡ ಕಳೆದ 5 ವರ್ಷದಿಂದ ಪಾಳು ಬಿದ್ದಿದ್ದು, ಅಕ್ರಮ ಚುವಟಿಕೆಗಳ ತಾಣವಾಗಿತ್ತು. ಆದರೆ, ಮಾಜಿ ಮೇಯರ್ ಹಾಗೂ ಸದರಿ ವಾರ್ಡ್‌ನ ಹಾಲಿ ಪಾಲಿಕೆ ಸದಸ್ಯೆ ಸುನಂದ ಪಾಲ ನೇತ್ರ ತಮ್ಮ ಅನುದಾನ ಬಳಸಿಕೊಂಡು ಅದರ ರೂಪವನ್ನೇ ಬದಲಿಸಿ, ಆರೋಗ್ಯ ಕೇಂದ್ರವಾಗಿ ಪರಿವರ್ತಿಸಿದ್ದು, ವೈದ್ಯರು ಮಾತ್ರ ಬರುತ್ತಿಲ್ಲ.

ಈ ಕಟ್ಟಡದ ಸಂಬಂಧ 2021ರ ನವೆಂಬರ್ 3ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ 'ಲಕ್ಷಾಂತರ ರೂ. ಖರ್ಚು ಮಾಡಿ ನಿರ್ಮಿಸಿದ ಗ್ರಂಥಾಲಯ ಕಟ್ಟಡ ಈಗ ಅಕ್ರಮ ಚಟುವಟಿಕೆಗಳ ತಾಣ' ಶೀರ್ಷಿಕೆ ಅಡಿ ವರದಿ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಸ್ಥಳೀಯ ಪಾಲಿಕೆ ಸದಸ್ಯರಾದ ಸುನಂದಾ ಪಾಲನೇತ್ರ, ಕಟ್ಟಡದ ನಿರ್ಮಾಣ ವಿನ್ಯಾಸ ನೋಡಿದರೆ ಗ್ರಂಥಾಲಯದ ಬದಲು ವಾರ್ಡ್‌ಗೆ ಅಗತ್ಯವಿರುವ ಆರೋಗ್ಯ ಕೇಂದ್ರ ಆರಂಭಿಸುವ ಸಂಬಂಧ ಅಧಿಕಾರಿಗಳ ಜೊತೆ ಚರ್ಚಿಸಿ, ಮುಂದಿನ ವರ್ಷದ ಜನವರಿ ತಿಂಗಳೊಳಗೆ ನಿರ್ಧರಿಸಲಾಗುವುದು ಎಂದು ತಿಳಿಸಿದರು. ಅದರಂತೆ ಇಂದು ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ ಮಾಡಿದ್ದಾರೆ.



ಸುನಂದಾ ಪಾಲನೇತ್ರ

ಸುತ್ತಲೂ ಗಿಡ–ಗಂಟಿಗಳು ಬೆಳೆದು ಕಾಡಾಗಿತ್ತು. ಕಳೆದ ಐದು ವರ್ಷದಿಂದ ಪಾಳು ಬಿದ್ದಿದ್ದು, ಅನೈತಿಕ ಚುವಟಿಕೆಗಳ ತಾಣವಾಗಿತ್ತು. ಕುಡುಕರ ಹಾವಳಿ ಹೆಚ್ಚಾಗಿತ್ತು. ಸಂಜೆಯಾದರೆ ಈ ಕಡೆ ಜನರು ತಿರುಗಾಡಲು ಭಯಪಡುವಂತಹ ವಾತಾವರಣ ನಿರ್ಮಾಣವಾಗಿತ್ತು. ಆದರೆ, ಅದನ್ನು ಸಂಪೂರ್ಣ ಸ್ವಚ್ಛಗೊಳಿಸಿ, ಅದರ ಚಿತ್ರಣವನ್ನೇ ಬದಲಿಸಿ, ಈಗ ಪ್ರಾಥಮಿಕ ಆರೋಗ್ಯ ಕೇಂದ್ರ ಆರಂಭಿಸುತ್ತಿರುವುದರಿಂದ ಸಾರ್ವಜನಿಕರಿಂದಲೂ ಮೆಚ್ಚುಗೆಗೆ ಪಾತ್ರವಾಗುತ್ತಿದ್ದು, ನಿತ್ಯವೂ 25ಕ್ಕೂ ಅಧಿಕ ಮಂದಿ ಭೇಟಿ ನೀಡುತ್ತಿದ್ದಾರೆ ಎಂದು ನಗರ ಪಾಲಿಕೆ ಸದಸ್ಯೆ ಸುನಂದ ಪಾಲನೇತ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಾರ್ಡ್‌ನಲ್ಲಿರುವ ಜನತೆಗೆ ಏನಾದರೂ ಮಾಡಬೇಕು ಎಂಬ ಆಲೋಚನೆ ಮಾಡಿ, ಅಂದಾಜು 15 ಲಕ್ಷ ರೂ. ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ ಮಾಡಿದ್ದು, ವೈದ್ಯರು ಮಾತ್ರ ಬರುತ್ತಿಲ್ಲ. ನಮ್ಮ ಕೆಲಸಕ್ಕೆ ಅಧಿಕಾರಿಗಳು ಸಾಥ್ ನೀಡಬೇಕು. ಆದರೆ, ಅವರ ಸಹಕಾರ ಸಿಗುತ್ತಿಲ್ಲ. ಇಲ್ಲಿ ಸೂಕ್ತ ವ್ಯವಸ್ಥೆ ಇಲ್ಲ ಎಂದು ವೈದ್ಯರು ಬರುತ್ತಿಲ್ಲ. ಈ ಸಂಬಂಧ ಜಿಲ್ಲಾ ಆರೋಗ್ಯಾಧಿಕಾರಿ ಪ್ರಸಾದ್ ಅವರ ಗಮನಕ್ಕೂ ತರಲಾಗಿದ್ದು, ಇದಕ್ಕೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆರೋಗ್ಯ ಕೇಂದ್ರಕ್ಕೆ ಬೇಕಿರುವ ಸಲಕರಣೆಗಳಲ್ಲಿ ಒಂದೊಂದನ್ನೇ ಅಳವಡಿಸುತ್ತಿದ್ದು, ಎರಡು ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ವೈದ್ಯರನ್ನು ಕರೆತರಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಯಾವುದೂ ಆಗದಿದ್ದರೆ, ಮುಖ್ಯಮಂತ್ರಿಗಳ ಬಳಿ ತೆರಳಿ ಇಲ್ಲಿನ ಸಮಸ್ಯೆ ಬಗ್ಗೆ ತಿಳಿಸಿ ಮನವರಿಕೆ ಮಾಡಿಕೊಡುತ್ತೇನೆ ಎಂದರು.

ಪೋಲೀಸ್ ಇಲಾಖೆಯ ಖಾಲಿ ಹುದ್ದೆಗಳು ಶೀಘ್ರ ಭರ್ತಿ

ಮೈಸೂರಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಪ್ರಕಟ



ಮೈಸೂರು,ನ.10(ಆರ್‌ಕೆ)–ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರದಲ್ಲೇ ಭರ್ತಿ ಮಾಡಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಮೈಸೂರಿನ ಹೆಬ್ಬಾಳು ಮುಖ್ಯ ರಸ್ತೆಯ ಸಾರ್ವಜನಿಕ ಗ್ರಂಥಾಲಯದ ಬಳಿ 2.15 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಿರುವ ಹೆಬ್ಬಾಳು ಪೊಲೀಸ್ ಠಾಣೆ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಪೊಲೀಸ್ ಇಲಾಖೆಯಲ್ಲಿ ಶೇ.35ರಷ್ಟು ಹುದ್ದೆಗಳು ಖಾಲಿ ಇದ್ದವು. ಹಾಗಾಗಿ ಇರುವ ಸಿಬ್ಬಂದಿಗೆ ಕರ್ತವ್ಯದ ಒತ್ತಡ ಹೆಚ್ಚಾಗಿತ್ತು ಎಂದರು.

ನಮ್ಮ ಸರ್ಕಾರವು ಪ್ರತಿ ವರ್ಷ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡಿ ಪೊಲೀಸ್ ಇಲಾಖೆಗೆ ಶಕ್ತಿ ತುಂಬುವ ಕೆಲಸ ಮಾಡಿದೆ. ಈ ಇಲಾಖೆಯಲ್ಲಿ ಪ್ರಸ್ತುತ 12 ಸಾವಿರ ಹುದ್ದೆಗಳು ಮಾತ್ರ ಖಾಲಿ ಇದ್ದು, ಇದೀಗ 5000 ಪೊಲೀಸ್ ಕಾನ್‌ಸ್ಟೇಬಲ್‌ಗಳ ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಬಾಕಿ ಇರುವ 7 ಸಾವಿರ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು ಎಂದು ನುಡಿದರು.

ನಮ್ಮ ಸರ್ಕಾರ ಬಂದ ನಂತರ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳಿಗಾಗಿ ವಸತಿ ವ್ಯವಸ್ಥೆ ಕಲ್ಪಿಸಿದ್ದು, ಒಂದು ರೂಂ ಬದಲು ಎರಡು ರೂಂಗಳಿರುವ ಮನೆಗಳನ್ನು ನಿರ್ಮಿಸಿಕೊಡಲಾಗಿದೆ. 4000 ಕೋಟಿ ರೂ. ವೆಚ್ಚದಲ್ಲಿ 11,000 ಮನೆಗಳು, 200 ಕೋಟಿ ರೂ. ವೆಚ್ಚದಲ್ಲಿ ರಾಜ್ಯಾದ್ಯಂತ 117 ಪೊಲೀಸ್ ಠಾಣೆಗಳಿಗೆ ಹೊಸ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಲಾಗಿದೆ ಎಂದರು.

ಸಮಾಜದ ಶಾಂತಿ, ನೆಮ್ಮದಿ ಹಾಳು ಮಾಡಲೆತ್ನಿಸಿದ ಪಿಎಫ್‌ಐನಂತಹ ಕೆಲ ಮತೀಯ ಸಂಘಟನೆಗಳನ್ನು ಪೊಲೀಸರು ಸಮರ್ಥವಾಗಿ ಎದುರಿಸಿ ಕಾನೂನು ಸುವ್ಯವಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಅದರಿಂದಾಗಿ ರಾಜ್ಯದ ಜನರು ಶಾಂತಿ, ನೆಮ್ಮದಿಯಿಂದ ನೆಲೆಸುವಂತಾಗಿದೆ ಎಂದರು.

ಇಂದಿನ ಯುವಶಕ್ತಿ ಮಾದಕ ವಸ್ತುಗಳ ಚಟಕ್ಕೆ ಬಲಿಯಾಗುತ್ತಿದ್ದು, ಈ ಜಾಲ ನಿಯಂತ್ರಿಸಿ ದೇಶದ ಯುವ ಜನತೆಯನ್ನು ರಕ್ಷಿಸಲು ಪೊಲೀಸರು ಹರಸಾಹಸಪಡುತ್ತಿದ್ದಾರೆ. ದುಷ್ಟ ಶಕ್ತಿಗಳಿಂದ ಜನರನ್ನು ರಕ್ಷಿಸಲು ಕೆಲ ಕಾನೂನಿನ ಅಸ್ತ್ರಗಳನ್ನು ಬಳಸಲಾಗುತ್ತಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಲಾಗಿದೆ ಎಂದು ನುಡಿದರು.

ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಪಾಲಿಕೆ ಸದಸ್ಯರಾದ ಪ್ರೈಶ್ರೀನಿವಾಸ್, ಪ್ರೇಮಾ ಶಂಕರೇಗೌಡ, ಲಕ್ಷ್ಮಿ ಶಿವಣ್ಣ, ಕೆ.ವಿ.ಶ್ರೀಧರ್, ಮಾಜಿ ಪಾಲಿಕೆ ಸದಸ್ಯರಾದ ಎಂ.ಶಿವಣ್ಣ, ಮಹದೇವಪ್ಪ, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಅರುಣ್ ಚಕ್ರವರ್ತಿ, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಡಿಸಿಪಿ ಎಂ.ಎಸ್.ಗೀತಾಪ್ರಸನ್ನ, ಎನ್.ಆರ್. ಉಪ ವಿಭಾಗದ ಎಸಿಪಿ ಎಂ.ಶಿವಶಂಕರ್, ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಕೆ.ಆರ್.ಪ್ರಸಾದ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





'ಬನಾರಸ್' ವೀಕ್ಷಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ..!

ಕಳೆದ ವಾರ ಬಿಡುಗಡೆಯಾದ 'ಬನಾರಸ್' ಚಿತ್ರಕ್ಕೆ ಎಲ್ಲಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ದೇಶಾದ್ಯಂತ ಸುಂದರವಾದ ದೃಶ್ಯಕಾವ್ಯ ಕಟ್ಟಿಕೊಟ್ಟಿರೋ 'ಬನಾರಸ್' ವೀಕ್ಷಕರ ಹೃದಯ ಗೆದ್ದಿದೆ. ಈ ಚಿತ್ರವನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ನಾಯಕ ಝೈದ್‌ಖಾನ್ ಜೊತೆ ಮಲ್ಟಿಪ್ಲೆಕ್ಸ್ ಥೇಟರಿನಲ್ಲಿ ಕೂತು ವೀಕ್ಷಿಸಿದ್ದಾರೆ. ಈ ಸಮಯದಲ್ಲಿ ಅವರ ಜೊತೆ ಚಿತ್ರ ತಂಡದ ಇತರ ಸದಸ್ಯರು ಸಹ ಹಾಜರಿದ್ದರು.

ಈ ಸಿನಿಮಾದಲ್ಲಿ ಜಮೀರ್ ಅಹ್ಮದ್ ಖಾನ್ ಅವರ ಪುತ್ರ ಝೈದ್‌ಖಾನ್ ನಾಯಕನಾಗಿ ನಟಿಸಿದ್ದಾರೆ. ಇದು ಅವರ ಚೊಚ್ಚಲು ಸಿನಿಮಾ. ಮೊದಲ ಸಿನಿಮಾದಲ್ಲಿಯೇ ಅನುಭವಿ ಹೀರೋ ರೀತಿ ಝೈದ್ ನಟಿಸಿದ್ದಾರೆ. ಅವರ ಮತ್ತು ನಾಯಕಿ ಸೋನಲ್ ಮಾಂಥೆರೋ ಜೋಡಿ ಚೆನ್ನಾಗಿ ಮೂಡಿಬಂದಿದೆ. 'ಬೆಲ್ ಬಾಟಂ' ಖ್ಯಾತಿಯ ಜಯತೀರ್ಥ ಅವರ ಕಥೆ ಕುತೂಹಲಕಾರಿಯಾಗಿ ಮೂಡಿಬಂದಿದೆ. ಚಿತ್ರ ಎಲ್ಲಿಯೂ ಬೋರ್ ಆಗಲ್ಲ ಎಂದು ಹೇಳಿರುವ ಸಿದ್ದರಾಮಯ್ಯ ಚಿತ್ರದಲ್ಲಿನ ಸಸ್ಪೆನ್ಸ್ ಅಂಶವನ್ನು ಹೆಚ್ಚು ಇಷ್ಟಪಟ್ಟಿದ್ದಾರೆ.

ಹಾರರ್ 'ಸ್ಪೂಕಿ ಕಾಲೇಜ್'ನಲ್ಲಿ 'ಮೆಲ್ಲುಸಿರೆ ಸವಿಗಾನ'...

ರಂಗಿತರಂಗ ಖ್ಯಾತಿಯ ಪ್ರಕಾಶ್ ನಿರ್ಮಾಣದ ಹಾರರ್ ಕಥಾಹಂದರ ಹೊಂದಿರುವ, ಭರತ್ ಜಿ. ನಿರ್ದೇಶಿಸಿರುವ 'ಸ್ಪೂಕಿ ಕಾಲೇಜ್' ಚಿತ್ರದ ಚಿತ್ರೀಕರಣ ಮುಕ್ತಾಯವಾಗಿ, ತೆರೆಗೆ ಬರಲು ಅಣಿಯಾಗುತ್ತಿದೆ. ಧಾರವಾಡದ 100 ವರ್ಷಕ್ಕೂ ಮೀರಿದ ಇತಿಹಾಸವಿರುವ ಪುರಾತನ ಈ ಕಾಲೇಜಿನಲ್ಲಿ ಈ ಚಿತ್ರದ ಬಹುತೇಕ ಚಿತ್ರೀಕರಣ ನಡೆದಿದೆ. ಚಿತ್ರದ ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣವನ್ನು ದಾಂಡೇಲಿಯ ಅಭಯಾರಣ್ಯದಲ್ಲಿ ನಡೆಸಲಾಗಿದೆ.

ಟೀಸರ್ ಮೂಲಕ ಈಗಾಗಲೇ ದೊಡ್ಡಮಟ್ಟದ ಕುತೂಹಲ ಹುಟ್ಟಿಸಿರುವ ಈ ಚಿತ್ರದಲ್ಲಿ ಡಾ||ರಾಜಕುಮಾರ್ ಅವರ "ವೀರಕೇಸರಿ" ಚಿತ್ರದ ಜನಪ್ರಿಯ 'ಮೆಲ್ಲುಸಿರೆ ಸವಿಗಾನ' ಹಾಡನ್ನು ರೀಮಿಕ್ಸ್ ಮಾಡಿ ಬಳಸಿಕೊಳ್ಳಲಾಗಿದೆ. ಈ ಹಾಡಿನಲ್ಲಿ ಏಕ್ ಲವ್ ಯಾ ರೀಷ್ಮಾ ನಾಣಯ್ಯ ಹೆಜ್ಜೆ ಹಾಕಿದ್ದಾರೆ. ನವೆಂಬರ್ 14ರಂದು ಈ ಹಾಡು ಬಿಡುಗಡೆಯಾಗಲಿದೆ.

ಭೂಷಣ್ ಅವರ ನೃತ್ಯ ನಿರ್ದೇಶನದಲ್ಲಿ, 250 ಕ್ಕೂ ಅಧಿಕ ತಂತ್ರಜ್ಞರ ಪಾಲ್ಗೊಳ್ಳುವಿಕೆಯಲ್ಲಿ, ಅದ್ಭುತವಾದ ಸೆಟ್‌ನಲ್ಲಿ ಈ ಹಾಡು ಚಿತ್ರೀಕರಣವಾಗಿದೆ. 'ರಂಗಿತರಂಗ' , 'ಅವನೇ ಶ್ರೀಮನ್ನಾರಾಯಣ' ಚಿತ್ರಗಳ ನಿರ್ಮಾಪಕ ಹೆಚ್.ಕೆ.ಪ್ರಕಾಶ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ನಿರ್ದೇಶಕ ಭರತ್ ರಚಿಸಿದ್ದಾರೆ. ಮನೋಹರ್ ಜೋಶಿ ಅವರ ಛಾಯಾಗ್ರಹಣ, ಅಜನೀಶ್ ಲೋಕನಾಥ್ ಅವರ ಸಂಗೀತ ನಿರ್ದೇಶನ, ವಿಶ್ವಾಸ್ ಕಶ್ಯಪ್ ಅವರ ಕಲಾ ನಿರ್ದೇಶನ ಹಾಗೂ ಶ್ರೀಕಾಂತ್ (ಕೆಜಿಎಫ್) ಅವರ ಸಂಕಲನ ಈ ಚಿತ್ರಕ್ಕಿದೆ. ವಿವೇಕ್ ಸಿಂಹ 'ಸ್ಪೂಕಿ ಕಾಲೇಜ್' ನಾಯಕನಾಗಿದ್ದು 'ದಿಯಾ' ನಾಯಕಿ ಖುಷಿ ರವಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಅಜಯ್ ಪೃಥ್ವಿ, ಹನುಮಂತೇಗೌಡ, ಕೆ.ಎಸ್.ಶ್ರೀಧರ್, ವಿಜಯ್ ಚೆಂಡೂರ್, ಶರಣ್ಯ ಶೆಟ್ಟಿ, ರಘು ರಮಣಕೊಪ್ಪ ಹಾಗೂ 'ಕಾಮಿಡಿ ಕಿಲಾಡಿಗಳು' ಹಲವಾರು ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.



ನವೆಂಬರ್ 18ಕ್ಕೆ 'ದಿ ಫಿಲಂ ಮೇಕರ್'

ಲಾಕ್‌ಡೌನ್‌ನಲ್ಲಿ ಸೆರೆ ಹಿಡಿಯಲಾದ ಹಲವು ವಿಶೇಷತೆಗಳಿಂದ ಕೂಡಿದ 'ದಿ ಫಿಲಂ ಮೇಕರ್' ಸಿನಿಮಾ ಬಿಡುಗಡೆಗೆ ಸಿದ್ದವಾಗಿದೆ. ಆರ್ಯ ಎಸ್.ರೆಡ್ಡಿ ನಿರ್ದೇಶನದ ಈ ಚಿತ್ರ ನವೆಂಬರ್ 18ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ.

ಕೇವಲ ಒಬ್ಬನೇ ಪಾತ್ರಧಾರಿ ಇರುವ, ಒಂದೇ ಲೊಕೇಷನ್, ಮೂರು ಜನ ಟೆಕ್ನಿಷಿಯನ್‌ಗಳಿಂದ ತಯಾರಾದ ಚಿತ್ರ 'ದಿ ಫಿಲಂ ಮೇಕರ್'. ಕನ್ನಡದಲ್ಲಿ ಇದು ವಿಶೇಷ ಪ್ರಯತ್ನವಾಗಿದ್ದು, ಈ ಮೂಲಕ ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಪಟ್ಟಿಗೂ ಸೇರಿದೆ.

ಇದೆಲ್ಲವೂ ನಿರ್ದೇಶಕ ಆರ್ಯ ಎಸ್ ರೆಡ್ಡಿ ಕನಸು. ಅದನ್ನು ಬಹಳ ಸೃಜನಾತ್ಮಕವಾಗಿ, ಯಶಸ್ವಿಯಾಗಿ ನಿಭಾಯಿಸಿ ಬಿಡುಗಡೆಯ ಹಂತಕ್ಕೆ ತಂದಿದ್ದಾರೆ. ಚಿತ್ರಕ್ಕೆ ಕಥೆ ಬರೆದು ನಿರ್ದೇಶನ, ಸಂಕಲನದ ಜೊತೆಗೆ ಛಾಯಾಗ್ರಾಹಕನಾಗಿ ಸಂಪೂರ್ಣ ಜವಾಬ್ದಾರಿ ಹೊತ್ತು ಸಿನಿಮಾ ಪೂರ್ಣಗೊಳಿಸಿದ್ದಾರೆ.

ಲಾಕ್‌ಡೌನ್‌ನಲ್ಲಿ ಹೊರಗೆಲ್ಲೂ ಹೋಗುವ ಹಾಗಿರಲಿಲ್ಲ. ಏನಾದ್ರು ಮಾಡಬೇಕಲ್ಲ ಎಂದಾಗ ಈ ರೀತಿ ಒಂದು ಎಕ್ಸ್ ಪಿರಿಮೆಂಟ್ ಮಾಡಲು ಪ್ಲ್ಯಾನ್ ಮಾಡಿದೆ. ಸಮಯಕ್ಕೆ ಸರಿಯಾಗಿ ನಟ ಸುನೀಲ್ ಸಿಕ್ಕರು. ಒಬ್ಬ ವ್ಯಕ್ತಿಯನ್ನಿಟ್ಟುಕೊಂಡು ಒಂದೇ ಸ್ಥಳದಲ್ಲಿ 21 ದಿನಗಳ ಕಾಲ ಈ ಚಿತ್ರವನ್ನು ಸೆರೆ ಹಿಡಿಯಲಾಗಿದೆ. 1 ಗಂಟೆ 40 ನಿಮಿಷ ಇರುವ ಈ ಚಿತ್ರ ಹಲವು ಚಿತ್ರೋತ್ಸವದಲ್ಲಿ ತೆರೆಕಂಡು ಪ್ರಶಂಸೆ ಜೊತೆಗೆ ಪ್ರಶಸ್ತಿಯನ್ನು ಪಡೆದುಕೊಂಡಿದೆ ಎಂದು ನಿರ್ದೇಶಕ ಆರ್ಯ ಎಸ್ ರೆಡ್ಡಿ ತಿಳಿಸಿದ್ದಾರೆ.

ನಾಯಕ ಸುನೀಲ್‌ಗೌಡ ಮಾತನಾಡಿ ನಾನು ರಂಗಭೂಮಿ ಕಲಾವಿದ. ಸಿಂಗಲ್ ಕ್ಯಾರೆಕ್ಟರ್ ಪ್ಲೇ ಮಾಡೋದು ಅಷ್ಟು ಸುಲಭದ ಮಾತಲ್ಲ. ಆರಂಭದಲ್ಲಿ ಕಷ್ಟ ಆಯ್ತು. ಆದರೆ ನಿರ್ದೇಶಕರು ನನಗೆ ಟ್ರೈನ್ ಮಾಡಿದ್ರು. ಒಂದೊಳ್ಳೆ ಪ್ರಯತ್ನ, ಪ್ರಯೋಗವನ್ನು ಈ ಚಿತ್ರದಲ್ಲಿ ಮಾಡಿದ್ದೇವೆ ಎಂದು ಸುನೀಲ್ ತಿಳಿಸಿದ್ದಾರೆ.

ಈ ವಾರ ವಿಭಿನ್ನ ಹಾರರ್ ಚಿತ್ರ 'ಓ'

ಇದುವರೆಗೆ ಬಂದಿರುವ ಎಲ್ಲಾ ಹಾರರ್ ಸಿನಿಮಾಗಳಿಗಿಂತ ನಮ್ಮದು ಬೇರೆ ಥರದ ಚಿತ್ರ. ಆರಂಭದ 20 ನಿಮಿಷ ಪಾತ್ರಗಳ ಪರಿಚಯ ಮಾಡಿ. ಅಲ್ಲಿಂದ ಕೊನೆಯ ಸೀನ್‌ವರೆಗೆ ಹಾರರ್ ಕಥೆ ಸಾಗುತ್ತದೆ ಎಂದು 'ಓ' ಚಿತ್ರದ ನಿರ್ದೇಶಕ ಮಹೇಶ್ ಸಿ.ಅಮ್ಮಲ್ಲಿದೊಡ್ಡಿ ಅವರು ಈಚೆಗೆ ನಡೆದ ಚಿತ್ರದ ಬಿಡುಗಡೆಪೂರ್ವ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

ವಾಮಾಚಾರದ ಜೊತೆಗೆ ಹಾರರ್ ಕಂಟೆಂಟ್ ಒಳಗೊಂಡ 'ಓ' ಚಿತ್ರದಲ್ಲಿ ಮಿಲನಾ ನಾಗರಾಜ್ ಹಾಗೂ ಅಮೃತಾ ಅಯ್ಯಂಗಾರ್ ಸಹೋದರಿಯರಾಗಿ ಕಾಣಿಸಿಕೊಂಡಿದ್ದಾರೆ. ನಾಯಕನಾಗಿ ಸಿದ್ದು ಮೂಲಿಮನಿ ಅಭಿನಯಿಸಿದ್ದಾರೆ. ಹಾರರ್, ಥ್ರಿಲ್ಲರ್ ಕಥೆಯಿರುವ ಈ ಚಿತ್ರಕ್ಕೆ ಮಹೇಶ್ ಸಿ.ಅಮ್ಮಲ್ಲಿದೊಡ್ಡಿ ಅವರು ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್‌ಕಟ್ ಹೇಳಿದ್ದಾರೆ. ಈ ಚಿತ್ರದ ಹಾಡೊಂದಕ್ಕೆ ಪುನೀತ್‌ರಾಜ್‌ಕುಮಾರ್ ದನಿ ನೀಡಿದ್ದಾರೆ. ಕಿರಣ್ ತಲಕಾಡು ಅವರು ಕಥೆ ಬರೆದು ಏಕಾಕ್ಷರ ಫಿಲಂಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಒಂದು ಮನೆಯಲ್ಲಿ ಅಕ್ಕತಂಗಿಯರ ನಡುವೆ ನಡೆಯುವ ವಿದ್ಯಾಮಾನಗಳ ಕಥಾಹಂದರ ಇದಾಗಿದ್ದು, ಚಿತ್ರದಲ್ಲಿ ವಾಮಾಚಾರ ಮಾಡುವುದು ತಪ್ಪು ಎಂದು ತೋರಿಸಿದ್ದೇವೆ. ಒಂದೊಳ್ಳೇ ಸಿನಿಮಾ ಮಾಡಬೇಕೆಂದು ನಾವೆಲ್ಲ ಕೂತು ಈ ಸ್ಕ್ರಿಪ್ಟ್ ರೆಡಿ ಮಾಡಿದೆವು. ಆದರೆ



ಇಲ್ಲಿ ಹೊಸಬರಿಗೆ ಯಾರೂ ಬೆಂಬಲ ನೀಡುತ್ತಿಲ್ಲ ಎಂದು ನಿರ್ದೇಶಕರು ಬೇಸರ ವ್ಯಕ್ತಪಡಿಸಿದರು,

ನಂತರ ಮಾತನಾಡಿದ ನಿರ್ಮಾಪಕ ಕಿರಣ್ ತಲಕಾಡು ಚಿತ್ರವನ್ನು ಯುಎಫ್‌ಓನಲ್ಲಿ ನೋಡಿದಾಗ ಎಫೆಕ್ಟ್ ಅದ್ಭುತವಾಗಿತ್ತು. ಚಿತ್ರ ನೋಡುವಾಗ ಎಲ್ಲರೂ ಎಂಜಾಯ್ ಮಾಡುತ್ತಾರೆ. ಈ ವರ್ಷದ ಉತ್ತಮ ಹಾರರ್ ಚಿತ್ರ ಇದಾಗಲಿದೆ ಎಂಬ ನಂಬಿಕೆಯಿದೆ ಎಂದು ಹೇಳಿದರು. ನಾಯಕಿ ಮಿಲನಾ ನಾಗರಾಜ್ ಮಾತನಾಡಿ ಈ ಜಾನರ್ ಸಿನಿಮಾ ನೋಡಲೆಂದೇ ಒಂದಷ್ಟು ಜನ ಇರುತ್ತಾರೆ. ಅಂಥವರಿಗೆ ಈ ಚಿತ್ರ ತುಂಬಾನೇ ಇಷ್ಟವಾಗುತ್ತದೆ. ಅದ್ಭುತ ಅನಿಸುತ್ತೆ, ಒಂದೊಳ್ಳೇ ಉದ್ದೇಶ ಇಟ್ಟುಕೊಂಡು ಮಾಡಿದಂಥ ಚಿತ್ರ. ಹಾರರ್ ಸಿನಿಮಾದಲ್ಲಿ ಮಾಡೋದು ತುಂಬಾ ಕಷ್ಟ ಎಂದು ಹೇಳಿದರು.



'ಡೆಡ್ಲಿ ಕಿಲ್ಲರ್' ಟೀಸರ್ ಜಗ್ಗೇಶ್ ಬಿಡುಗಡೆ

ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಅವರ ಸಾರಥ್ಯದ 'ಡೆಡ್ಲಿ ಕಿಲ್ಲರ್' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ನವರಸನಾಯಕ ಜಗ್ಗೇಶ್ ಅವರು ಟೀಸರ್ ರಿಲೀಸ್ ಮಾಡಿ ಮಾತನಾಡುತ್ತ 'ಬದುಕಿನಲ್ಲಿ ನಮಗೆ ತುಂಬಾ ಜನ ಸ್ನೇಹಿತರು ಸಿಗುತ್ತಾರೆ. ಆದರೆ ನಾವು ಬಿದ್ದಾಗ ನಮ್ಮ ಜೊತೆ ಇರ್ತಾರಲ್ಲ ಅವರೇ ನಿಜವಾದ ಸ್ನೇಹಿತರು. ಥ್ರಿಲ್ಲರ್‌ಮಂಜು, ನಾನು ಆರಂಭದಿಂದಲೂ ಸ್ನೇಹಿತರು. ಆ ದಿನಗಳಲ್ಲಿ ನಾನೂ ತುಂಬಾ ನಿರಾಸೆ, ಸಂಕಟಗಳನ್ನು ಅನುಭವಿಸಿದ್ದೇವೆ ಎಂದು ಹೇಳಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಅಭಯ್‌ವೀರ್, ನಿವೀಕ್ಷಾ ಚಿತ್ರದ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಚಿತ್ರ ಕುರಿತಂತೆ ಮಾತನಾಡಿದ ಥ್ರಿಲ್ಲರ್ ಮಂಜು, 5 ಜನ ವಿಲನ್‌ಗಳ ಜೊತೆಗೊಬ್ಬ ಹುಡುಗಿಯನ್ನು ಪೊಲೀಸರು ಆಂಧ್ರದಲ್ಲಿ ಬಂಧಿಸಿ ಕರ್ನಾಟಕಕ್ಕೆ ಕರೆತರುವಾಗ ಮಾರ್ಗಮದ್ಯೆ ಅವರು ಕಾಡಿನಲ್ಲಿ ಎಸ್ಕೇಪ್ ಆಗುತ್ತಾರೆ. ಅಲ್ಲಿಂದ ಅವರು ಕಾಡಿನಲ್ಲೇ ಇರುವ ಮನೆಯೊಂದರಲ್ಲಿ ಆಶ್ರಯ ಪಡೆಯುವ ಜೊತೆಗೆ ಆ ಮನೆಯಲ್ಲೇ ಎಲ್ಲರೂ ಲಾಕ್ ಆಗಿಬಿಡುತ್ತಾರೆ. ಅಲ್ಲಿ ಅವರಿಗೆ ವಿಚಿತ್ರ ಅನುಭವಗಳಾಗುತ್ತವೆ. ಅಲ್ಲಿಂದ ಮುಂದೆ ಅವರು ಪೋಲೀಸರಿಗೆ ಸಿಗ್ತಾರಾ, ಇಲ್ವಾ ಅನ್ನೋದೇ ಕುತೂಹಲ. ಚಿತ್ರದ ಬಹುತೇಕ ಕಥೆಯನ್ನು ಕಾಡು ಹಾಗೂ ಮನೆಯೊಂದರಲ್ಲಿ ಶೂಟ್ ಮಾಡಿದ್ದೇವೆ. ಚಿತ್ರದಲ್ಲಿ ಒಟ್ಟು 3 ಹಾಡುಗಳಿದ್ದು, ವಿನು ಮನಸು ಸಂಗೀತ ಸಂಯೋಜಿಸಿದ್ದಾರೆ ಎಂದು ಹೇಳಿದರು. ನಾಯಕ ಅಭಯ ಮಾತನಾಡಿ, ನಿರ್ಮಾಪಕರು ಸಿನಿಮಾ ಬಗ್ಗೆ ಒಳ್ಳೇ ಅಭಿರುಚಿ ಇಟ್ಟುಕೊಂಡಿದ್ದಾರೆ. ಛಾಯಾಗ್ರಾಹಕ ಮಲ್ಲಿಕಾರ್ಜುನ್ ಅವರು ನಮ್ಮನ್ನು ತುಂಬಾ ಚೆನ್ನಾಗಿ ತೋರಿಸಿದ್ದಾರೆ. ವಿನು ಮನಸು ಅದ್ಭುತ ಮ್ಯೂಸಿಕ್ ಮಾಡಿದ್ದಾರೆ. ಚಿತ್ರದಲ್ಲಿ 6 ವಿಭಿನ್ನ ಸಾಹಸ ದೃಶ್ಯಗಳಿವೆ.

ಚಿತ್ರದಲ್ಲಿ 'ಡೆಡ್ಲಿ ಕಿಲ್ಲರ್' ನಾನೇ. ಆತ ಹೇಗೆ, ಏಕೆ ಡೆಡ್ಲಿಕಿಲ್ಲರ್ ಆದ ಅನ್ನೋದೇ ಕಥೆ ಎಂದು ವಿವರಿಸಿದರು. ನಿರ್ಮಾಪಕ ಪ್ರಶಾಂತ್ ಮಾತನಾಡುತ್ತ ನಾಯಕ ಅಭಯ್ ನನ್ನ ಸ್ನೇಹಿತರು. ಅವರು ಹೇಳಿದ ಸ್ಟೋರಿ ಲೈನ್ ನನಗೆ ಇಷ್ಟವಾಯಿತು. ಪ್ರತಿ ಹಂತದಲ್ಲೂ ಥ್ರಿಲ್ಲಿಂಗ್ ಇದೆ ಎಂದು ಹೇಳಿದರು.

ನಾಯಕಿ ನಿವೀಕ್ಷಾ ಮಾತನಾಡಿ ಚಿತ್ರದಲ್ಲಿ ನಾನು ಗಂಡನನ್ನು ತುಂಬಾ ಇಷ್ಟಪಡುವ ಮಹಿಳೆಯ ಪಾತ್ರ ಮಾಡಿದ್ದೇನೆ. ನಮ್ಮ ಮನೆ ಕಾಡಿನಲ್ಲಿರುತ್ತದೆ. ಅಲ್ಲಿ ಏನು ನಡೆಯಿತು ಅಂತ ಚಿತ್ರದಲ್ಲಿ ಹೇಳಿದ್ದಾರೆ ಎಂದು ಹೇಳಿಕೊಂಡರು. ಸಂಗೀತ ನಿರ್ದೇಶಕ ವಿನು ಮನಸು ಮಾತನಾಡಿ ಚಿತ್ರದಲ್ಲಿ 3 ಹಾಡುಗಳಿದ್ದು, 2 ಲವ್ಸಾಂಗ್ ಮತ್ತು ಒಂದು ಹಾರರ್ ಸಾಂಗ್ ಮಾಡಿದ್ದೇನೆ, ವಿಶೇಷವಾಗಿ ದೆವ್ವದ ಕೈಲಿ ಇಂಗ್ಲೀಷ್ ಹಾಡನ್ನು ಹಾಡಿಸಿದ್ದೇವೆ ಎಂದರು.

'ರೇಮೋ' ಟ್ರೈಲರ್ ಬಿಡುಗಡೆ ಮಾಡಿದ ಶಿವರಾಜ್‌ಕುಮಾರ್




'ವಿಲನ್', ರೋಗ್‌ನಂಥ ಅದ್ದೂರಿ ಚಿತ್ರಗಳನ್ನು ನಿರ್ಮಿಸಿದ ಸಿ.ಆರ್.ಮನೋಹರ್ ನಿರ್ಮಾಣದ, ಪವನ್ ಒಡೆಯರ್ ಸಾರಥ್ಯದ ಮ್ಯೂಸಿಕಲ್ ಲವ್‌ಸ್ಟೋರಿ ರೇಮೋ ಚಿತ್ರವು ಇದೇ ತಿಂಗಳ 25 ರಂದು ಬಿಡುಗಡೆಯಾಗಲಿದೆ. ಇಶಾನ್–ಆಶಿಕಾ ರಂಗನಾಥ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದ ಟ್ರೈಲರ್‌ಗೆ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಚಾಲನೆ ನೀಡಿದರು. ನಾಯಕ ಇಶಾನ್ ಮಾತನಾಡುತ್ತ ರೇಮೋ ನನ್ನ ಎರಡನೇ ಚಿತ್ರ. ಚಿತ್ರದ ಮುಹೂರ್ತಕ್ಕೂ ಶಿವಣ್ಣ ಬಂದಿದ್ದರು. ಈಗಲೂ ಬಂದು ಟ್ರೈಲರ್ ರಿಲೀಸ್ ಮಾಡಿಕೊಟ್ಟಿದ್ದಾರೆ. ನೀನು ಹೀರೋ ಆಗು ಅಂತ ಹಿಂದೊಮ್ಮೆ ಅವರು ಹೇಳಿದ ಮಾತೇ ನಾನಿಲ್ಲಿ ನಿಲ್ಲಲು ಸ್ಫೂರ್ತಿಯಾಯಿತು. ಮುಂದೆ ನಾನೆಷ್ಟೇ ಸಿನಿಮಾ ಮಾಡಿದರೂ ರೇಮೋ ಯಾವಾಗಲೂ ನನ್ನ ಹೃದಯಕ್ಕೆ ಹತ್ತಿರವಾಗಿರುತ್ತೆ. ರಾಕ್‌ಸ್ಟಾರ್ ರೇವಂತ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು.

ನಂತರ ಮಾತನಾಡಿದ ಪವನ್ ಒಡೆಯರ್, ರೇಮೋ ಚಿತ್ರದಲ್ಲಿ ನಾಯಕ ರೇವಂತ್ ಹಾಗೂ ಮೋಹನಾ ನಡುವಿನ ಒಂದು ಅದ್ಭುತವಾದ ಪ್ರೇಮಕಥೆಯಿದೆ. ಎಮೋಷನಲ್ ಲವ್‌ಸ್ಟೋರಿ, ರಿವೆಂಜ್ ಲವ್‌ಸ್ಟೋರಿ, ಸೆಂಟಿಮೆಂಟ್ ಲವ್‌ಸ್ಟೋರಿ ಹೀಗೆ ನಾನಾ ಥರದ ಪ್ರೇಮಕಥೆಗಳಿವೆ, ಅದರಲ್ಲಿ ಇದು ಮ್ಯೂಸಿಕಲ್ ಲವ್ ಸ್ಟೋರಿ. ಜೊತೆಗೆ ಲೇಯರ್ಸ್ ಆಫ್ ಎಮೋಷನ್ಸ್ ಇದೆ. ಹಿಂದೆಯೇ ಚಿತ್ರೀಕರಣ ಆರಂಭಿಸಿದ್ದೆವು. ಈಗ ಚಿತ್ರ ಬಿಡುಗಡೆಯಾಗುತ್ತಿದೆ. ಹೈದರಾಬಾದ್, ಜಮ್ಮು-ಕಾಶ್ಮೀರ, ಸೌತ್ ಆಫ್ರಿಕಾ, ಸಿಂಗಾಪುರ ಮುಂತಾದೆಡೆ ಚಿತ್ರೀಕರಣ ನಡೆಸಿದ್ದೇವೆ. ಮ್ಯಾಜಿಕಲ್ ಕಂಪೋಸರ್ ಅರ್ಜುನ್ ಜನ್ಯ ಅವರ ಸಂಗೀತದ ಆರು ಅದ್ಭುತ ಹಾಡುಗಳು ಚಿತ್ರದಲ್ಲಿವೆ. ಇಶಾನ್–ಆಶಿಕಾ ಜೋಡಿಯನ್ನು ತೆರೆಮೇಲೆ ನೋಡಿದವರು ಫಿದಾ ಆಗುವುದು ಖಂಡಿತಾ. ವೈದಿ ಅವರ ಛಾಯಾಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಸಂಕಲನ 'ರೇಮೊ' ಚಿತ್ರದ ಅಂದವನ್ನು ಮತ್ತಷ್ಟು ಹೆಚ್ಚಿಸಿದೆ.

ಸಿನಿಪದಬಂಧ-449

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ವಿಜೇತರು: ನವೀನ್ ಜಿ.ಸಿ., ಪಾರಿಜಾತ ಬುಕ್‌ಸ್ಟಾಲ್, ಕೆಕೆ ರಸ್ತೆ, ಬೆಟ್ಟದಪುರ, ಪಿರಿಯಾಪಟ್ಟಣ ತಾಲೂಕು-571102


ಎಡದಿಂದ ಬಲಕ್ಕೆ

1.ರಾಜ್ ಬಿ.ಶೆಟ್ಟಿ ಈ ಗಾದೆಯಲ್ಲಿ ಕೈಲಾಗದವರ ಮೇಲೆ ದರ್ಪ ತೋರಿದ್ದಾರೆ 7
4.ನಯ ವಂಚಕ ಪ್ರಾಣಿಯ ಮಧ್ಯೆ ಚರ್ಮವಾದ್ಯವಿದೆ 3
6.ಜಗ್ಗೇಶ್ – ಪ್ರಿಯಾಂಕ ಅಭಿನಯದಲ್ಲಿ ಅಪ್ಸರೆಗೆ ವಿವಾಹವಾಗಿದೆ 6
9.'ಸಿಂಹ'ನ ಅಭಿಮಾನಿಗಳ ಪಡೆ 4
10.ದರ್ಶನ್ – ಆರತಿ ಠಾಕೂರ್ ಅಭಿನಯದ ಚಿತ್ರ 3
11.ತಾಯಿ – – – 3
14. ವಾಯುವಿನೊಂದಿಗೆ ತೇಲಿ ಬಂದ 'ಗಾಸಿಪ್' 4
15.ಎಸ್. ಕೆ.ನಾಡಿಗ್ ಕಥೆಗೆ ಅನಂತ್ ನಾಗ್,ಶಬಾನಾ ಆಜ್ಮಿ ಅಭಿನಯವಿದೆ. 6
18.ವಿನಯ್ ರಾಜ್ ಕುಮಾರ್ ವಿರುದ್ಧ ನುಸ್ರತ್ 3
19.70ರ ದಶಕದ ಈ ಕಾರು ಇತ್ತೀಚೆಗೆ ತೆರೆಯ ಮೇಲೂ ಓಡಿದೆ 7

ಮೇಲಿನಿಂದ ಕೆಳಕ್ಕೆ

1.ಭೂತಯ್ಯನ ಮಗ ಅಯ್ಯು ಚಿತ್ರದಲ್ಲಿ ವಿಷ್ಣುವಿನ ಪಾತ್ರ 2
2.ಸಿದ್ದಲಿಂಗಯ್ಯ ಚಿತ್ರದಲ್ಲಿ ಮುತ್ತಣ್ಣ 'ಮಹಾಪೌರ' 3
3.ಸೃಷ್ಟಿ – ಸ್ಥಿತಿ – ಲಯ 8
4.'ಹೋಗದಿರಿ ಸೋದರರೇ ಹೋಗದಿರಿ ಬಂಧುಗಳೇ....",ಎಂಬ ಗೀತೆಯ ಚಿತ್ರ 4
5.ನಾಗರಾಜ್ ಕೋಟೆಯ 'ಉಸಿರು' ಆಧರಿಸಿರುವ ಮಕ್ಕಳ ಚಿತ್ರ 3
7.ರಾಜೇಶ್ ಅಭಿನಯದಲ್ಲಿ ಭೃಗು ಕುಲದಲ್ಲಿ ಹುಟ್ಟಿದ ಋಷಿ 8
8.ಕಿವಿಯ ಅಲಂಕಾರಿಕ ಸಾಮಗ್ರಿ ಇಲ್ಲಿ ತಲೆಕೆಳಗು 5
12.ರಾಗಿಣಿ ದ್ವಿವೇದಿ ಅಪ್ಪಟ 'ಚಿನ್ನ' 3
13.ರಾಜ್ ಕುಮಾರ್ ಅಭಿನಯವಿರುವ ಆಕಾಶಕಾಯದಲ್ಲಿ ಗ್ರಹವೊಂದು ಸೇರಿಕೊಂಡಿದೆ 4
16. ದಿಲ್ಲಿ ಮೇಡಂ ಸ್ಲೇಟಿನೊಂದಿಗೆ ತಂದ ಸಾಧನ 3
17. ಅಂಡಮಾನ್ ಚಿತ್ರದ ನಾಯಕಿ ಟಿವಿ ಕಂಪನಿಯೊಂದನ್ನು ಪರಿಚಯಿಸುತ್ತಿದ್ದಾಳೆ 2

ಸಿನಿ ಪದಬಂಧ 448ರ ಸರಿ ಉತ್ತರ



ಕಟ್ಟಡ ಕಾರ್ಮಿಕರು ಸರ್ಕಾರಿ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಿ

ರಾಜ್ಯ ಕಟ್ಟಡ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಜಿ.ಸಿದ್ದರಾಜು ಕರೆ

ತಿ.ನರಸೀಪುರ, ನ.10– ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾಗಿರುವ ಕಟ್ಟಡ ಕಾರ್ಮಿಕರಿಗಾಗಿ ಸರ್ಕಾರ ಹಲವು ಸೌಲಭ್ಯಗಳನ್ನು ನೀಡುತ್ತಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ರಾಜ್ಯ ಕಟ್ಟಡ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಜಿ.ಸಿದ್ದರಾಜು ಕರೆ ನೀಡಿದರು.

ಪಟ್ಟಣದ ನಂಜನಗೂಡು ಮುಖ್ಯರಸ್ತೆಯ ಎಪಿಎಂಸಿ ಮಳಿಗೆಯಲ್ಲಿ ಕರ್ನಾಟಕ ರಾಜ್ಯ ಭಾರತ ಮಾತ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದ ನೂತನ ಕಚೇರಿ ಉದ್ಘಾಟನೆ ಹಾಗೂ 67ನೇ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಕಟ್ಟಡ ಕಾರ್ಮಿಕರು ಅಸಂಘಟಿತ ವಲಯಕ್ಕೆ ಸೇರಿದ್ದು, ಸರ್ಕಾರ ಅವರಿಗೆ ಹೆಚ್ಚಿನ ಸೌಲಭ್ಯ ಒದಗಿಸಬೇಕು. ಕಾರ್ಮಿಕ ಇಲಾಖೆಯಿಂದ ನೋಂದಣಿಯಾದ ಕಾರ್ಮಿಕರಿಗೆ ಸರ್ಕಾರ ಸಾಕಷ್ಟು ಸೌಲಭ್ಯ ನೀಡುತ್ತಿದೆ. ಇದರ ಸದ್ಬಳಕೆಯಾಗಬೇಕು ಎಂದರು.

ಕಟ್ಟಡ ನಿರ್ಮಾಣ ಅಥವಾ ಇತರೆ ನಿರ್ಮಾಣ ಕಾರ್ಮಿಕರು, ರಾಜ್ಯ ಕಾರ್ಮಿಕ ಇಲಾಖೆಯಲ್ಲಿ ಹೆಸರು ನೋಂದಣಿ ಮಾಡಿಕೊಳ್ಳುವ ಮೂಲಕ ಬದುಕನ್ನು ಹಸನಾಗಿಸಿಕೊಳ್ಳಬೇಕು. ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕ ಇಲಾಖೆ ಹಲವು ಯೋಜನೆಗಳನ್ನು ಜಾರಿ ಮಾಡುತ್ತಿದೆ. ಈ ಯೋಜನೆಗಳ ಸದುಪಯೋಗಕ್ಕಾಗಿ ಕಾರ್ಮಿಕರೆಲ್ಲರೂ ಹೆಸರು ನೋಂದಣಿ ಮಾಡಿಸುವ ಮೂಲಕ ಸೌಲಭ್ಯಗಳ ಸದುಪಯೋಗ ಪಡೆದು ಉತ್ತಮ ಜೀವನ ನಡೆಸುವಂತೆ ತಿಳಿಸಿದರು.

ಸಂಘದ ಉಪಾಧ್ಯಕ್ಷ ಬಿ.ಮಹದೇವಸ್ವಾಮಿ, ಇಂಜಿನಿಯರ್ ನಂದೀಶ್ ಮಾತನಾಡಿದರು. ಇದೇ ವೇಳೆ ಸಂಘದ ಹಿರಿಯ ಕಾರ್ಮಿಕರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಎನ್.ರಾಜೇಶ್, ಹಿರಿಯ ಗುತ್ತಿಗೆದಾರ ರಾಜಣ್ಣ, ಕಾರ್ಯಾಧ್ಯಕ್ಷ ರಾಚಪ್ಪ, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ನಟರಾಜು, ಕಾರ್ಯದರ್ಶಿ ಸಿದ್ದರಾಜು, ಸಹ ಕಾರ್ಯದರ್ಶಿ ನಿಂಗ ರಾಜು, ಸಂಘಟನಾ ಕಾರ್ಯದರ್ಶಿ ಜೆ.ರಾಚಯ್ಯ, ತಾಲೂಕು ಸಂಚಾಲಕ ರಾಜೇಶ್, ನಿರ್ದೇಶಕರಾದ ರಾಚಯ್ಯ, ಗೋವಿಂದರಾಜು, ಶಿವಕುಮಾರ್, ಮಾದೇಶ್ ರೇವಣ್ಣ, ಮಹದೇವು, ನಾಗರಾಜು, ಸ್ವಾಮಿನಾಯ್ಕ ಮಹದೇವ, ಎಂ.ರಾಜೇಶ್, ಆರ್.ಎಂ.ನಿಂಗರಾಜು, ಶೋಭಾ, ಶಂಕರ್ ಸೇರಿದಂತೆ ಕಾರ್ಮಿಕರು, ಮೇಸ್ತ್ರಿಗಳು, ಗುತ್ತಿಗೆದಾರರು ಹಾಜರಿದ್ದರು.



"ಕಾರ್ಮಿಕರು ನಮ್ಮ ದೇಶದ ಸಂಪತ್ತು. ದೇಶದ ಮುನ್ನಡೆ ಹಾಗೂ ಅಭಿವೃದ್ಧಿಗೆ ಕಾರ್ಮಿಕರ ಕೊಡುಗೆ ಅಪಾರ. ಕಾರ್ಮಿಕ ಬಂಧುಗಳು ತಮ್ಮ ಆರೋಗ್ಯದ ಕಡೆ ಗಮನಹರಿಸಿ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳುವ ಕಡೆ ಹೆಚ್ಚಿನ ಗಮನ ಹರಿಸಿ. ಬಿಸಿಲು, ಮಳೆ, ಚಳಿ ಎನ್ನದೇ ಹಗಲು ರಾತ್ರಿ ದುಡಿಯುತ್ತಿರುವ ಕಾರ್ಮಿಕ ಬಂಧುಗಳು ಕಾರ್ಮಿಕ ಇಲಾಖೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಸರ್ಕಾರದಿಂದ ದೊರಕಬಹುದಾದ ಸೌಲಭ್ಯ ಪಡೆಯಿರಿ.

– ತಾಯೂರು ಪ್ರಕಾಶ್, ರಾಜ್ಯ ವಾಲ್ಮೀಕಿ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ.

ಸಾಲ ಮರುಪಾವತಿಗೆ ಬ್ಯಾಂಕ್ ನೋಟೀಸ್

ದಯಾಮರಣಕ್ಕೆ ರಾಷ್ಟ್ರಪತಿಗೆ ವೃದ್ಧೆ ಮನವಿ

ಹುಣಸೂರು, ನ.10– ಮನೆ ನಿರ್ಮಾಣಕ್ಕಾಗಿ ಬ್ಯಾಂಕ್ ಆಫ್ ಬರೋಡಾದಿಂದ 14 ಲಕ್ಷ ರೂ. ಸಾಲ ಪಡೆದಿದ್ದು, 6 ಲಕ್ಷ ರೂ. ಸಾಲ ಮರು ಪಾವತಿಸಿದ್ದರೂ, ಮನೆ ಹರಾಜು ಮಾಡುವುದಾಗಿ ಬ್ಯಾಂಕ್‌ನಿಂದ ಪದೇ ಪದೆ ನೋಟೀಸ್ ಜಾರಿ ಮಾಡಿ ಹಿಂಸೆ ನೀಡಲಾಗುತ್ತಿದೆ. ಹೀಗಾಗಿ ದಯಾಮರಣ ನೀಡುವಂತೆ ರಾಷ್ಟ್ರಪತಿಗಳಿಗೆ ನಗರದ ನಿವಾಸಿ ಜಯಮ್ಮ ಎಂಬುವರು ಮನವಿ ಮಾಡಿದ್ದಾರೆ.



ನಗರದ ನರಸಿಂಹಸ್ವಾಮಿ ಬಡಾವಣೆ ನಿವಾಸಿ ಲೇ.ಶಿವಣ್ಣ ಎಂಬುವರ ಪತ್ನಿ ಜಯಮ್ಮ (67) ಅವರ ಪುತ್ರ ದೇವರಾಜು ಎಂಬುವರು ಮನೆ ನಿರ್ಮಾಣ ಮಾಡಲು ನಗರದ ಬ್ಯಾಂಕ್ ಆಫ್ ಬರೋಡಾ ದಲ್ಲಿ ಕಳೆದ ಮೂರು ವರ್ಷಗಳ ಹಿಂದೆ 15 ವರ್ಷಗಳ ಅವಧಿಗೆ 14 ಲಕ್ಷ ರೂ. ಸಾಲ ಪಡೆದಿದ್ದರು. ಈಗಾಗಲೇ ಅವರು 6 ಲಕ್ಷ ರೂ. ಸಾಲ ಮರುಪಾವತಿಸಿದ್ದಾರೆ. ಉಳಿದ ಹಣ ಪಾವತಿಸಲು ಇನ್ನೂ ಕಾಲಾವಕಾಶವಿದ್ದರೂ ಬ್ಯಾಂಕ್ ಸಿಬ್ಬಂದಿ ಸಾಲ ಮರುಪಾವತಿ ಸುವಂತೆ ಒತ್ತಾಯಿಸಿದ್ದಾರೆ. ಇವರ ಒತ್ತಾಯಕ್ಕೆ ಮಣಿದು ದೇವರಾಜು ಅವರು ಕಳೆದ ತಿಂಗಳು ಲಕ್ಷ ರೂ. ಸಾಲ ಪಾವತಿಸಿದ್ದರೂ ಕೂಡ ಬ್ಯಾಂಕ್‌ನಿಂದ ಪದೇ ಪದೆ ನೋಟೀಸ್ ಜಾರಿ ಮಾಡಲಾಗಿದೆ. ಅಲ್ಲದೇ ಮನೆ ಹರಾಜು ಮಾಡುವುದಾಗಿ ಬ್ಯಾಂಕ್ ಸಿಬ್ಬಂದಿ ಮನೆ ಮುಂದೆ ನೋಟಿಸ್ ಅಂಟಿಸಿದ್ದಾರೆ. ಇದನ್ನು ಕಂಡು ಗಾಬರಿಗೊಂಡ ಜಯಮ್ಮನವರು ಅಲ್ಲೇ ಕುಸಿದು ಬಿದ್ದು ಅನಾರೋಗ್ಯಕ್ಕೆ ಒಳಗಾಗಿದ್ದರು. ತಕ್ಷಣ ಅವರನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ಮೈಸೂರಿನ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಕೊಡಿಸಿದ್ದು, ಚೇತರಿಸಿಕೊಂಡಿದ್ದಾರೆ. ಇದೀಗ ಜಯಮ್ಮನವರು ದಯಾಮರಣ ನೀಡುವಂತೆ ಉಪವಿಭಾಗಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಸಂವಿಧಾನ ರಕ್ಷಣೆಗಾಗಿ ಬಿಎಸ್‌ಪಿ ಬೆಂಬಲಿಸಿ

ಮಲ್ಕುಂಡಿ, ನ.10– ಸಂವಿಧಾನ ರಕ್ಷಣೆಗಾಗಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳನ್ನು ದೂರವಿಟ್ಟು ಮುಂಬರುವ ಚುನಾವಣೆಯಲ್ಲಿ ಬಿಎಸ್‌ಪಿ ಬೆಂಬಲಿಸುವಂತೆ ಪಕ್ಷದ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ ಕರೆ ನೀಡಿದರು.



ನಂಜನಗೂಡು ವಿಧಾನಸಭಾ ಕ್ಷೇತ್ರದ ಹೆಡಿಯಾಲದಲ್ಲಿ ಪಕ್ಷದ ತಾಲೂಕು ಘಟಕದಿಂದ ಆಯೋಜಿಸಿದ್ದ ಭೀಮರಥ ಜಾಗೃತಿ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 70 ವರ್ಷಕ್ಕೂ ಹೆಚ್ಚು ಕಾಲ ದೇಶ ಆಳಿದ ಕಾಂಗ್ರೆಸ್ ಭಾರತ್ ಜೋಡೋ ಯಾತ್ರೆ ಮಾಡುತ್ತಿರುವುದಾದರೂ ಏಕೆ? ಎಂದು ಪ್ರಶ್ನಿಸಿದ ಅವರು, ಪ್ರಧಾನಿ ಮೋದಿ ಅವರು ಚುನಾವಣೆ ಸಂದರ್ಭ ಯುವಕರಿಗೆ ಉದ್ಯೋಗ ನೀಡುತ್ತೇನೆ. ಕಪ್ಪು ಹಣ ತಂದು ಬಡತನ ನಿರ್ಮೂಲನೆ ಮಾಡುತ್ತೇನೆ ಎಂದು ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದು ಈಗ ದೇಶ ಲೂಟಿ ಮಾಡುತ್ತಿದ್ದಾರೆ. ಅಲ್ಲದೇ ರಾಜ್ಯದಲ್ಲಿ 40 ಪರ್ಸೆಂಟ್ ಕಮಿಷನ್ ದಂಧೆ ನಡೆಯುತ್ತಿದೆ ಎಂದು ಗುತ್ತಿಗೆದಾರರು ಮೋದಿಗೆ ಪತ್ರ ಬರೆದರೂ ಯಾವುದೇ ಕ್ರಮ ಕೈಗೊಳ್ಳದೆ ಮೌನವಾಗಿದ್ದಾರೆ ಎಂದು ಆರೋಪಿಸಿದರು.

ರಾಜ್ಯದ ಎಲ್ಲಾ ಇಲಾಖೆಯಲ್ಲೂ ಭ್ರಷ್ಟಾಚಾರ ತಾಂಡವಾಡುತ್ತಿದೆ. ಈ ನಡುವೆ ಬಿಜೆಪಿ ಜನಸಂಕಲ್ಪ ಯಾತ್ರೆಗೆ ಹೊರಟಿರುವುದು ಯಾರ ಒಳ್ಳೆಗಾಗಿ ಎಂದು ತಿಳಿಯುತ್ತಿಲ್ಲ. ಸರ್ಕಾರ ನಿಮ್ಮ ಕೈಯಲ್ಲಿದೆ ಸಂವಿಧಾನದ ಮೂಲಕ ದೇಶ ರಕ್ಷಿಸಬೇಕಿದೆ. ರಾಜ್ಯದ ಜನತೆ ಜೊತೆ ಚೆಲ್ಲಾಟವಾಡುತ್ತಿರುವ ಸರ್ಕಾರಗಳನ್ನು ಕಿತ್ತೊಗೆಯಬೇಕು ಎಂದರು.

ಬಿಎಸ್‌ಪಿ ಮುಖಂಡ ಮಾನಸಂದ್ರ ಮುನಿಯಪ್ಪ, ಜಿಲ್ಲಾ ಉಪಾಧ್ಯಕ್ಷ ಶ್ರೀಕಂಠು, ತಾಲೂಕು ಅಧ್ಯಕ್ಷ ಶಿವಣ್ಣ, ಚನ್ನಬಸವ, ಜಯಮೂರ್ತಿ ಸೇರಿದಂತೆ ಇತರರಿದ್ದರು.

7 ಅಡಿ ಉದ್ದದ ಹೆಬ್ಬಾವು ಪತ್ತೆ



ಹುಣಸೂರು, ನ.10– ತಾಲೂಕಿನ ವಡ್ಡಂಬಾಳು ಗ್ರಾಮದ ರೈತ ತಮ್ಮನಾಯಕರ ಜಮೀನಿನಲ್ಲಿ ಸುಮಾರು 7 ಅಡಿ ಉದ್ದದ ಹೆಬ್ಬಾವು ಪತ್ತೆಯಾಗಿದೆ. ಜಮೀನಿನಲ್ಲಿ ಬೃಹತ್ ಗಾತ್ರದ ಹೆಬ್ಬಾವು ಬೀಡುಬಿಟ್ಟಿರುವ ವಿಷಯ ತಿಳಿದ ಕೂಡಲೇ ಗ್ರಾಮಸ್ಥರು ಅರಣ್ಯ ಇಲಾಖೆಗೆ ವಿಚಾರ ಮುಟ್ಟಿಸಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಆರ್‌ಎಫ್‌ಓ ನಂದಕುಮಾರ್ ಹಾಗೂ ಅರಣ್ಯ ಸಿಬ್ಬಂದಿ ಪಿರಿಯಾಪಟ್ಟಣದ ಆರ್.ಡಿ.ಕೊಪ್ಪಲು ಗ್ರಾಮದ ಶಿವರಾಜು ಎಂಬುವರನ್ನು ಕರೆಸಿದರು. ಈ ಸಂದರ್ಭ ಶಿವರಾಜು ಹೆಬ್ಬಾವನ್ನು ರಕ್ಷಿಸಿ ಕಾಡಿಗೆ ಬಿಟ್ಟಿದ್ದಾರೆ.

ಹನುಮನಪುರದಲ್ಲಿ ಕುಂದು ಕೊರತೆ ಆಲಿಸಿದ ಶಾಸಕ



ನಂಜನಗೂಡು, ನ.10– ತಾಲೂಕಿನ ಹನುಮನಪುರದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರ ಕುಂದು ಕೊರತೆ ಆಲಿಸಿದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಗ್ರಾಮಸ್ಥರು ಪಿ.ಮರಳ್ಳಿಯಿಂದ ಹನುಮನಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಪಡಿಸಿದರೆ ಈ ಭಾಗದ ರೈತ ರಿಗೆ, ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಶಾಸಕರಿಗೆ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಶಾಸಕರು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರಲ್ಲದೆ, ಗ್ರಾಮದ ಸಮಗ್ರ ಅಭಿವೃದ್ಧಿಗೆ ನಾನು ಬದ್ಧ. ಈಗಾಗಲೇ ಗ್ರಾಮದ ಎಲ್ಲಾ ಬೀದಿಗಳಲ್ಲೂ ಕಾಂಕ್ರೀಟ್ ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಲಭ್ಯಗಳಿಗೆ ಹೆಚ್ಚು ಒತ್ತು ನೀಡಲಾಗಿದ್ದು, ಇನ್ನುಳಿದ ಸಣ್ಣಪುಟ್ಟ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುತ್ತೇನೆ ಎಂದರು.

ಈ ವೇಳೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜು, ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಆರ್.ಮಹದೇವ್, ವೀರಶೈವ ಮುಖಂಡ ನಾಗೇಶ್, ಮಧು, ಕುಮಾರ್, ಮಾಜಿ ಗ್ರಾಪಂ ಅಧ್ಯಕ್ಷ ಸಿದ್ದಯ್ಯ ಸ್ವಾಮಿ, ಸಿದ್ದರಾಮೇಗೌಡ, ಗಿರೀಶ್, ಮಲ್ಲುಪುರ, ಬಸವರಾಜು ಇತರರು ಹಾಜರಿದ್ದರು.

ಹಬ್ಬನಕುಪ್ಪೆಯಲ್ಲಿ ಬಿಎಂಸಿ ಕೇಂದ್ರಕ್ಕೆ ಗುದ್ದಲಿ ಪೂಜೆ



ಹನಗೋಡು, ನ.10– ಹಾಲು ಉತ್ಪಾದಕರ ಸಹಕಾರ ಸಂಘಗಳ ಚಟುವಟಿಕೆಗಳಲ್ಲಿ ಮಹಿಳೆಯರು ಮುಖ್ಯ ಪಾತ್ರ ವಹಿಸಬೇಕಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಇಲ್ಲಿಗೆ ಸಮೀಪದ ಹಬ್ಬನಕುಪ್ಪೆ ಗ್ರಾಮದಲ್ಲಿ ಬಿಎಂಸಿ ಕೇಂದ್ರಕ್ಕೆ ಗುದ್ದಲಿ ಪೂಜೆ ಸಲ್ಲಿಸಿ ಮಾತನಾಡಿ, ಗ್ರಾಮಗಳಲ್ಲಿ ಸ್ಥಾಪನೆಗೊಂಡಿರುವ ಡೇರಿ ಹೆಚ್ಚಿನ ಪ್ರಗತಿ ಕಾಣುತ್ತಿದ್ದು, ಮಹಿಳೆಯರು ಸಂಘದ ಸದಸ್ಯರಾಗುವ ಜೊತೆಗೆ ಎಲ್ಲಾ ವ್ಯವಹಾರದಲ್ಲಿ ಭಾಗಿಯಾಗಬೇಕು. ಅಲ್ಲದೇ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್ ಮಾತನಾಡಿದರು. ಸಮಾರಂಭದಲ್ಲಿ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ನಾಗಭೂಷಣ್, ತಾಪಂ ಮಾಜಿ ಉಪಾಧ್ಯಕ್ಷ ಪ್ರೇಮ ಕುಮಾರ್, ಡೈರಿ ಅಧ್ಯಕ್ಷ ಗಣೇಶ್, ತಂಬಾಕು ಮಂಡಳಿ ಸದಸ್ಯ ಹೆಚ್.ಆರ್.ದಿನೇಶ್, ಗ್ರಾಮದ ಮುಖಂಡ ರಾಜೇಗೌಡ, ಮೇಲ್ವಿಚಾರಕ ಗೌತಮ್ ಕಾರ್ಯದರ್ಶಿ, ನಾಗರಾಜ್, ನಟೇಶ್, ಮೋಹನ್ ಕುಮಾರ್, ಸುರೇಂದ್ರ, ಸತೀಶ್, ಕೆಂಪೇಗೌಡ ಮತ್ತಿತರರಿದ್ದರು.

ಹುಣಸೂರಿನಲ್ಲಿ ಉಪವಿಭಾಗಾಧಿಕಾರಿಯಾಗಿ ಕಾರ್ಯ ನಿರ್ವಹಿಸಿ ಬೇರೆಡೆಗೆ ವರ್ಗಾವಣೆಗೊಂಡ ವರ್ಣಿತ್ ನೇಗಿ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ವಕೀಲರ ಸಂಘದ ಅಧ್ಯಕ್ಷ ಯೋಗಣ್ಣಗೌಡ, ನೂತನ ಎಸಿ ರುಚಿ ಬಿಂದಾಲ್, ತಹಸೀಲ್ದಾರ್ ಡಾ.ಅಶೋಕ್, ಕೆ.ಆರ್.ನಗರ ತಹಸೀಲ್ದಾರ್ ಚಂದ್ರಮೌಳಿ, ಯಧುವೀರ್, ಗಿರೀಶ್, ಇಓ ಮನು, ಉಪ ತಹಸೀಲ್ದಾರ್ ಶಕೀಲಾ ಭಾನು, ನರಸಿಂಹಯ್ಯ, ಸಮಾಜ ಕಲ್ಯಾಣಾಧಿಕಾರಿ ಮೋಹನ್, ರೇಣುಕಾ ಪ್ರಸಾದ್, ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಗೋವಿಂದೇಗೌಡ ಇದ್ದರು.



ಶೂಲಯ್ಯ ನಿಧನ

ನಂಜನಗೂಡು, ನ.10– ತಾಲೂಕಿನ ಬಸವನಪುರ ಗ್ರಾಮದ ನಿವಾಸಿ ಶೂಲಯ್ಯ(92) ಮಂಗಳವಾರ ಬೆಳಗ್ಗೆ ನಿಧನರಾದರು.



ಮೃತರು ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯುತ್ ಅವಘಡದಿಂದ ಮೃತಪಟ್ಟವರ ಕುಟುಂಬಕ್ಕೆ ಸಾಂತ್ವನ

ತಿ.ನರಸೀಪುರ, ನ.10– ವಿದ್ಯುತ್ ಅವಘಡದಿಂದ ಮೃತಪಟ್ಟ ತಾಲೂಕಿನ ನೀಲಸೋಗೆ ಗ್ರಾಮದ ರೈತರಾದ ರಾಚೇಗೌಡ ಹಾಗೂ ಮಹದೇವಸ್ವಾಮಿ ಅವರ ಮನೆಗೆ ಬಿಜೆಪಿ ಮುಖಂಡ ಎಸ್.ಅರವಿಂದ್ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.



ಇತ್ತೀಚೆಗೆ ಗ್ರಾಮದಲ್ಲಿ ಭತ್ತದ ಗದ್ದೆಗೆ ಕ್ರಿಮಿನಾಶಕ ಸಿಂಪಡಿಸುವ ವೇಳೆ ವಿದ್ಯುತ್ ತಂತಿ ಸ್ಪರ್ಶಿಸಿ ತಂದೆ, ಮಗ ಸೇರಿದಂತೆ ಮೂವರು ದುರಂತ ಸಾವನ್ನಪ್ಪಿದ್ದರು. ಈ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಭೇಟಿ ನೀಡಿ, ಸಾಂತ್ವನ ಹೇಳಿ ಸಹಾಯಧನ ವಿತರಿಸಿ ಮಾತನಾಡಿದ ಅವರು, ರಾಚೇಗೌಡರ ಮನೆಯಲ್ಲಿ ತಂದೆ, ಮಗ ಇಬ್ಬರೂ ಸಾವನ್ನಪ್ಪಿರುವುದರಿಂದ ಕುಟುಂಬಕ್ಕೆ ಆಧಾರ ಸ್ಥಂಭವೇ ಇಲ್ಲದಂತಾಗಿದೆ. ಇಂತಹ ಸಂದರ್ಭ ಕುಟುಂಬಕ್ಕೆ ಸಹಾಯ ಹಸ್ತ ನೀಡಬೇಕಾದ್ದು ಎಲ್ಲರ ಕರ್ತವ್ಯ ಎಂದರು.

ರಾಚೇಗೌಡರ ಕುಟುಂಬದವರು ಮಾತನಾಡಿ, ಮನೆ ಯಜಮಾನ ಸೇರಿದಂತೆ ಮಗನನ್ನು ಕಳೆದುಕೊಂಡಿದ್ದೇವೆ. ಘಟನೆಯಿಂದ ದಿಕ್ಕೇ ತೋಚದಂತಾಗಿದೆ. ಜೀವನ ನಿರ್ವಹಣೆ ಮಾಡಲು ದಾರಿ ಇಲ್ಲವಾದ್ದರಿಂದ ನಮ್ಮ ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ಉದ್ಯೋಗ ಕೊಡಿಸುವಂತೆ ಅರವಿಂದ್‌ಗೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅರವಿಂದ್, ಮಾನವೀಯ ದೃಷ್ಟಿಯಿಂದ ಕುಟುಂಬದ ಒಬ್ಬರಿಗೆ ಅವಘಡ ಸಂಭವಿಸಿದ ಇಲಾಖೆಯಲ್ಲೇ ಉದ್ಯೋಗ ದೊರಕಿಸಿ ಕೊಡಲು ಸಿಎಂಗೆ ಮನವಿ ಮಾಡುವುದಾಗಿ ಭರವಸೆ ನೀಡಿದರು. ಅಲ್ಲದೇ ಸರ್ಕಾರದಿಂದ ದೊರಕಬಹುದಾದ ಹೆಚ್ಚಿನ ಪರಿಹಾರಧನ ಕೊಡಿಸಿ ಕೊಡಲು ಯತ್ನಿಸುವುದಾಗಿ ತಿಳಿಸಿದರು. ಈ ವೇಳೆ ಮುಖಂಡರಾದ ಪ್ರಸಾದ್, ಶೇಖರಪ್ಪ ಕೃಷ್ಣ, ಸಿದ್ದರಾಜು, ಬಸವರಾಜಪ್ಪ, ರಾಜು, ಮಹೇಶ್ ಸೇರಿದಂತೆ ಗ್ರಾಮಸ್ಥರಿದ್ದರು.

ನ.19, ಕೆಂಚನಹಳ್ಳಿ ಹಾಡಿಯಲ್ಲಿ ಕಂದಾಯ ಸಚಿವ ವಾಸ್ತವ್ಯ

ಅಗತ್ಯ ಸಿದ್ಧತೆಗೆ ಅಧಿಕಾರಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಸೂಚನೆ

ಹೆಚ್.ಡಿ.ಕೋಟೆ, ನ.10– ತಾಲೂಕಿನ ಕೆಂಚನಹಳ್ಳಿ ಹಾಡಿಯಲ್ಲಿ ನ.19ರಂದು ಕಂದಾಯ ಸಚಿವ ಆರ್.ಅಶೋಕ್ ವಾಸ್ತವ್ಯ ಮಾಡಲಿದ್ದು, ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.



ತಾಲೂಕಿನ ಅಂಬೇಡ್ಕರ್ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿದ್ದು, ಅವುಗಳನ್ನು ಬಗೆಹರಿಸಿಕೊಡುವಂತೆ ಮನವಿ ಮಾಡಲಾಗಿತ್ತು. ನಮ್ಮ ಮನವಿಗೆ ಸ್ಪಂದಿಸಿ ತಾಲೂಕಿಗೆ ಆಗಮಿಸುತ್ತಿರುವ ಸಚಿವರನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅದ್ದೂರಿಯಾಗಿ ಸ್ವಾಗತಿಸಲಾಗುವುದು ಎಂದರು.

ನ.19ರಂದು ಬೆಳಗ್ಗೆ ಭೀಮನಕೊಲ್ಲಿ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಅಲಂಕೃತ ಎತ್ತಿನಗಾಡಿಯಲ್ಲಿ ಮೆರವಣಿಗೆಯಲ್ಲಿ ತೆರಳುವ ಸಚಿವರು ವಿಶೇಷ ಪೂಜೆ ಸಲ್ಲಿಸಿ ಮಹದೇಶ್ವರನ ದರ್ಶನ ಪಡೆಯುವರು. ನಂತರ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ 3 ಸಾವಿರಕ್ಕೂ ಹೆಚ್ಚು ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡುವರು. ಮಧ್ಯಾಹ್ನ ಕೆಂಚನಹಳ್ಳಿ ಗ್ರಾಮದಲ್ಲಿ 'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ 4 ಗಂಟೆಗೆ ಹೊಸಳ್ಳಿ ಹಾಡಿಯ ವಿವೇಕಾನಂದ ಶಾಲೆಯಲ್ಲಿ ಗಿರಿಜನ ಮಕ್ಕಳೊಂದಿಗೆ ಸಂವಾದ ನಡೆಸುವರು. ರಾತ್ರಿ ಕೆಂಚನಹಳ್ಳಿ ಹಾಡಿಯಲ್ಲಿ ವಾಸ್ತವ್ಯ ಹೂಡುವರು. ನ.20 ರಂದು ಬೆಳಗ್ಗೆ ಇತ್ತೀಚೆಗೆ ಅರಣ್ಯ ಇಲಾಖೆ ದೌರ್ಜನ್ಯದಿಂದ ಮೃತಪಟ್ಟ ಆದಿವಾಸಿ ಕರಿಯಪ್ಪ ಅವರ ಮನೆಗೆ ಸಚಿವರು ಭೇಟಿ ನೀಡಲಿದ್ದಾರೆ. ನಂತರ ಬ್ರಹ್ಮಗಿರಿ ಹಾಡಿಯಲ್ಲಿ ಗಿರಿಜನ ಮುಖಂಡರೊಂದಿಗೆ ಚರ್ಚಿಸಲಿದ್ದಾರೆ.

ಸಭೆಯಲ್ಲಿ ತಹಸೀಲ್ದಾರ್‌ಗಳಾದ ಸಣ್ಣರಾಮಪ್ಪ, ಚಲುವರಾಜು, ಇಓ ರಾಜೇಶ್, ಸುಷ್ಮಾ, ಉಪ ತಹಸೀಲ್ದಾರ್ ಮಹೇಶ್, ಆರೋಗ್ಯಾಧಿಕಾರಿ ರವಿಕುಮಾರ್, ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಸೋಮಣ್ಣ, ಬಿಇಓ ಉದಯ್ ಕುಮಾರ್, ಕೃಷಿ ಅಧಿಕಾರಿ ರಂಗಸ್ವಾಮಿ, ಸಿಪಿಐಗಳಾದ ಬಸವರಾಜ್, ಆನಂದ್, ಎಸ್ಐ ಜಯಪ್ರಕಾಶ್, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಆರ್‌ಎಫ್‌ಓ ಸಿದ್ದರಾಜು ಮಧು, ಪ್ರಸನ್ನ, ರಾಮೇಗೌಡ, ರಮೇಶ್ ಬಾಬು ಬೋರಯ್ಯ ಸೇರಿದಂತೆ ಇನ್ನಿತರರಿದ್ದರು.

ಬಾಲ್ಯ ಸ್ನೇಹಿತನನ್ನು ಕೊಂದವನಿಗೆ ಜೀವಾವಧಿ ಶಿಕ್ಷೆ

ಹೆಚ್.ಡಿ.ಕೋಟೆ, ನ.10– ಪತ್ನಿ ಜೊತೆ ಸಂಬಂಧವಿರಿಸಿಕೊಂಡಿದ್ದಾನೆ ಎಂದು ಅನುಮಾನಪಟ್ಟು ಬಾಲ್ಯ ಸ್ನೇಹಿತನನ್ನೇ ಕೊಚ್ಚಿ ಕೊಲೆ ಮಾಡಿದ್ದ ಹಂತಕನಿಗೆ ಜೀವಾವಧಿ ಶಿಕ್ಷೆ ಮತ್ತು 10,500 ರೂ. ದಂಡ ವಿಧಿಸಿ ಮೈಸೂರಿನ 8ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ (ಪೀಠಾಸನ ಹುಣಸೂರು) ನ್ಯಾಯಾಧೀಶರಾದ ಪಾಟೀಲ್ ಮೋಹನ್ ಕುಮಾರ್ ಬೀರನಗೌಡ ತೀರ್ಪು ನೀಡಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಕೆಂಪೇಗೌಡನಪುರ ಗ್ರಾಮದ ಕೆಂಡ ಶಿಕ್ಷೆಗೆ ಗುರಿಯಾದವನಾಗಿದ್ದು, ಈತ ಮತ್ತು ಅದೇ ಗ್ರಾಮದ ಆನಂದ ಬಾಲ್ಯ ಸ್ನೇಹಿತರು. ಆನಂದ ತನ್ನ ಪತ್ನಿ ಜೊತೆ ಸಂಬಂಧವಿರಿಸಿಕೊಂಡಿದ್ದಾನೆ ಎಂದು ಅನುಮಾನಪಟ್ಟಿದ್ದ ಕೆಂಡ 2016ರ ಜೂ.27ರಂದು ರಾತ್ರಿ 10.30ರ ಸುಮಾರಿನಲ್ಲಿ ಹೊರಗೆ ಹೋಗಿದ್ದ ಆನಂದ ತನ್ನ ಮನೆಗೆ ಹಿಂತಿರುಗುತ್ತಿದ್ದಂತೆಯೇ ಕೆಂಡ ಆತನನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದಾನೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಹೆಚ್.ಡಿ.ಕೋಟೆ ಠಾಣೆಯ ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ನ್ಯಾಯಾಲಯದಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಕೆಂಡನಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರ ಅಭಿಯೋಜಕ ಕೆಎಂಸಿ ಶಿವಶಂಕರ ಮೂರ್ತಿ ವಾದ ಮಂಡಿಸಿದ್ದರು.

ಜೇನು ಹುಳು ಕಡಿದು ವೃದ್ಧೆ ಸಾವು

ಸರಗೂರು, ನ.10– ಜೇನು ಹುಳ ಕಡಿದು ವೃದ್ಧೆಯೊಬ್ಬರು ಸಾವನ್ನಪ್ಪಿ, ಮತ್ತೊಬ್ಬರು ಗಾಯಗೊಂಡಿರುವ ಘಟನೆ ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ನಡೆದಿದೆ.

ಕೊಳ್ಳೇಗಾಲ ತಾಲೂಕು ಚಿಲಕವಾಡಿ ಗ್ರಾಮದ ನಿವಾಸಿ ವಸಂತಮ್ಮ(70) ಸಾವನ್ನಪ್ಪಿದವರು. ಈಕೆ ಮುಳ್ಳೂರಿನಲ್ಲಿ ಸಾವನ್ನಪ್ಪಿದ್ದ ಸಂಬಂಧಿಕರೊಬ್ಬರ ಅಂತ್ಯಕ್ರಿಯೆ ಆಗಮಿಸಿದ್ದರು. ಈ ವೇಳೆ ಸ್ಥಳದಲ್ಲಿದ್ದವರ ಮೇಲೆ ಜೇನು ದಾಳಿ ನಡೆಸಿದ್ದು, ಈ ಪೈಕಿ ವಸಂತಮ್ಮ ಹಾಗೂ ಹೆಚ್.ಡಿ.ಕೋಟೆ ತಾಲೂಕಿನ ಆಲನಹಳ್ಳಿ ಗ್ರಾಮದ ಸಿದ್ದಲಿಂಗಮ್ಮ ತೀವ್ರ ಗಾಯಗೊಂಡಿದ್ದರು. ತಕ್ಷಣ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ವಸಂತಮ್ಮ ಸಾವನ್ನಪ್ಪಿದ್ದು, ಸಿದ್ದಲಿಂಗಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸೂರು: ಡೆಂಗ್ಯೂ ಜ್ವರಕ್ಕೆ ವ್ಯಕ್ತಿ ಬಲಿ

36 ಮಂದಿಗೆ ಡೆಂಗ್ಯೂ, 7 ಮಂದಿಗೆ ಚಿಕುನ್ ಗುನ್ಯಾ

ಹುಣಸೂರು, ನ.10– ತಾಲೂಕಿನಲ್ಲಿ ಡೆಂಗ್ಯೂ ಜ್ವರಕ್ಕೆ ವ್ಯಕ್ತಿಯೊಬ್ಬರು ಬಲಿಯಾಗಿದ್ದಾರೆ. ಹನಗೋಡು ಹೋಬಳಿಯ ಚೆನ್ನಸೋಗೆ ಗ್ರಾಮದ ಚಂದ್ರಶೇಖರ್ (52) ಸಾವನ್ನಪ್ಪಿದವರು. ಚಂದ್ರಶೇಖರ್‌ಗೆ ಕಳೆದೆರಡು ದಿನಗಳಿಂದ ಜ್ವರ ಕಾಣಿಸಿಕೊಂಡಿದ್ದು, ಹುಣಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಹೆಚ್ಚಿನ ಚಿಕಿತ್ಸೆಗಾಗಿ ನ.8ರಂದು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಮಧ್ಯಾಹ್ನ ಸಾವನ್ನಪ್ಪಿದ್ದಾರೆ.



36 ಡೆಂಗ್ಯೂ ಪ್ರಕರಣ ಪತ್ತೆ: ತಾಲೂಕಿನಲ್ಲಿ 36 ಮಂದಿ ಶಂಕಿತ ಡೆಂಗ್ಯೂ ಹಾಗೂ 7 ಚಿಕುನ್ ಗುನ್ಯಾ ಪ್ರಕರಣ ಪತ್ತೆಯಾಗಿದೆ. ಆರೋಗ್ಯ ಮತ್ತು ಆಶಾ ಕಾರ್ಯಕರ್ತರು ರೋಗಿಗಳ ಬಗ್ಗೆ ನಿಗಾ ವಹಿಸಿದ್ದಾರೆಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.